## Motion *re* : the Scarcity Conditions in the State

**Sri H. V. KOUJALGI** (Minister for Revenue).—I move :

"That the scarcity conditions in the State be taken into consideration."

**Mr. DEPUTY SPEAKER.**—Motion moved :

"That the scarcity conditions in the State be taken into consideration."

ಶ್ರೀ ಬಿ. ಪಿ. ಗಂಗಾಧರ್.—ಗಡಿ ಸಮಸ್ಯೆಗೆ ಸಂಬಂಧಪಟ್ಟಂತೆ ಕೆಲವು ಮುಖ್ಯವಾದ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಸರ್ಕಾರದವರು ಹೇಳಿದ್ದರು. ಅದನ್ನು ಯಾವಾಗ ತೆಗೆದುಕೊಳ್ಳುತ್ತಾರೆ ಎಂಬುದನ್ನು ದಯವಿಟ್ಟು ತಾವು ತಿಳಿಸಬೇಕು.

ಉಪಾಧ್ಯಕ್ಷರು.—ಮುಂದೆ ಅದನ್ನು ವಿಚಾರ ಮಾಡಿ ಸಭೆಗೆ ತಿಳಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರಾಜ್ಯದ ಅಭಾವ ಪರಿಸ್ಥಿತಿ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಮೊದಲು ಇದುವರೆಗೆ ಸರ್ಕಾರದವರು ಯಾವ ಯಾವ ತಾಲ್ಲೂಕ್‌ಗಳಲ್ಲಿ ಈ ಬಾಬಿಗಾಗಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆಂಬುದನ್ನು ತಿಳಿಸಬೇಕು. ಶಾಶ್ವತವಾದಂಥ ಪರಿಹಾರ ಕಾಮಗಾರಿಗಳನ್ನು ಕೈಕೊಂಡಿದ್ದೇವೆಂದು ಹೇಳಿದ್ದಾರೆ. ಆ ರೀತಿ ಕೈಕೊಂಡಿದ್ದರೆ ಎಲ್ಲೆಲ್ಲಿ ಕೈಗೊಂಡಿದ್ದಾರೆ ಮತ್ತು ಎಷ್ಟೆಷ್ಟು ಹಣ ಖರ್ಚು ಮಾಡಿದ್ದಾರೆಂಬ ಬಗ್ಗೆ ವಿವರಗಳನ್ನು ಕೊಟ್ಟರೆ ನಮಗೆ ಚರ್ಚೆ ಮಾಡುವುದಕ್ಕೆ ಸಹಾಯವಾಗುತ್ತದೆ.

**Sri H. V. KOUJALGI.**—So far as what amount is allotted is concerned, the hon. Member knows it. We have allotted 3.5 crores and the amount is being spent. I will give details during the course of the day regarding the actual amount spent on permanent measures.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ರೆವಿನ್ಯೂ ಸಚಿವರು ಈ ಸಭೆಯ ಮುಂದೆ ಒಂದು ವರದಿಯನ್ನು ರಾಜ್ಯದ ಅಭಾವ ಪರಿಸ್ಥಿತಿಯ ಬಗ್ಗೆ ಇಟ್ಟಿದ್ದಾರೆ. ಈ ರಾಜ್ಯದ ಅದೃಷ್ಟವೋ ಅಥವಾ ದುರಾದೃಷ್ಟವೋ ಅಂತಹ ವಿಷಯದ ಬಗ್ಗೆ ಚರ್ಚೆ ಮಾಡುವ ಕಾಲದಲ್ಲಿ ಮಳೆ ಬಂದುಬಿಡುತ್ತದೆ. ಹಿಂದೆ ಕೂಡ ನಾವು ಅಭಾವ ಪರಿಸ್ಥಿತಿಯ ಬಗ್ಗೆ ಅನೇಕ ಸಲ ಚರ್ಚೆ ಮಾಡುವಾಗ ಕೂಡ ಚರ್ಚೆಯ ಹಿಂದಿನ ದಿನ ಅಥವಾ ಮುಂದಿನ ದಿನ ಮಳೆ ಬಂದು ಸರ್ಕಾರದವರು ಎಲ್ಲ ಸುಭಿಕ್ಷವಾಗಿದೆ ಎಂದು ಹೇಳಿಬಿಟ್ಟರು. ಮಳೆ ಬಂದಮೇಲೆ ಏನಾದರೂ ಪರಿಹಾರ ಕೆಲಸಗಳನ್ನು ತೆಗೆದುಕೊಂಡರೆ ಅದು ಅನಾವಶ್ಯಕವಾಗುತ್ತದೆ ಎಂದು ಸರ್ಕಾರದವರು ಹೇಳುವ ಮಟ್ಟಿಗೆ ಮಳೆ ದೇವರು ಈ ಸರ್ಕಾರಕ್ಕೆ ರಕ್ಷಣೆ ಕೊಡುತ್ತಾ ಬಂದಿದ್ದಾನೆ. ಈ ಅಭಾವ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಕಳೆದ 5 ವರ್ಷದಿಂದಲೂ ಕೂಡ ಇದೆ. ಈಗ 6ನೇ ವರ್ಷದಲ್ಲಿ ಕೂಡ ಅಭಾವ ಪರಿಸ್ಥಿತಿ ಇದೆ ಎಂಬುದನ್ನು ಸರ್ಕಾರವೇ ಒಪ್ಪಿಕೊಂಡಿದೆ. ಈ ದುರ್ಭಿಕ್ಷದ ಪರಿಹಾರಕ್ಕಾಗಿ ಸರ್ಕಾರದವರು ಇದುವರೆಗೆ ಏನೇನು ಕೆಲಸ ಮಾಡಿಲ್ಲ ಎಂಬುದನ್ನು ನಾನು ಇವತ್ತು ತಮ್ಮ ಮುಖೇನ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

[MR. CHAIRMAN (SMT. NAGARATHNAMMA HIREMATH) in the Chair.]

ಸಂಕಟ ಬಂದಾಗ ವೆಂಕಟರಮಣ ಎಂಬಂತೆ ಬರ ಬಂದು ಜನರಿಗೆ ಅನ್ನ ಇಲ್ಲದೆ, ದನಗಳಿಗೆ ಮೇವು ಇಲ್ಲದೆ ಎಲ್ಲರೂ ಅರಚಿಕೊಂಡಾಗ ಈ ಸರ್ಕಾರ ಗಾಢನಿದ್ರೆಯಿಂದ ಎಚ್ಚೆತ್ತು ನಂತರ ವಿಚಾರ ಮಾಡುತ್ತದೆಯೇ ಹೊರತು ಕಳೆದ 6 ವರ್ಷಗಳಿಂದ ಕ್ಷಾಮ ಪರಿಹಾರದ ಬಗ್ಗೆ ಯಾವ ಒಂದು ಶಾಶ್ವತವಾದ ಪರಿಹಾರ ಕಾಮಗಾರಿಯನ್ನು ಕೈಕೊಂಡಿಲ್ಲ. ಈ ಬಗ್ಗೆ ಸರ್ಕಾರದ ಹತ್ತಿರ ಯಾವ ಒಂದು ಯೋಜನೆಯೂ ಕೂಡ ಇಲ್ಲವಲ್ಲಾ ಎಂಬ ವಿಚಾರದಲ್ಲಿ ನಾನಾದರೂ ಕೂಡ ಬಹಳ ವ್ಯಥೆ ಪಡುತ್ತಿದ್ದೇನೆ. ಇವತ್ತು ನಮ್ಮ ರಾಜ್ಯದ ಎರಡೂಮುಕ್ಕಾಲು ಕೋಟಿ ಜನಸಂಖ್ಯೆಯಲ್ಲಿ ಸುಮಾರ

ಒಂದೂಮುಕ್ಕಾಲು ಕೋಟಿ ಜನರು ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಕ್ಷಾಮ ಬಂದಾಗಲೆಲ್ಲಾ ಈ ಸರ್ಕಾರ ಆಕಾಶವ ಕಡೆ ನೋಡುತ್ತದೆಯೇ ಹೊರತು ಕಷ್ಟದಲ್ಲಿರತಕ್ಕಂಥ ಜನರ ಸಹಾಯಕ್ಕೆ ಬರುತ್ತಿಲ್ಲ. ಅಂತಹ ಒಂದು ದುರ್ಬಲತೆ ಈ ಸರ್ಕಾರಕ್ಕೆ ಇದೆ. ಅಭಾವ ಪರಿಹಾರಕ್ಕೋಸ್ಕರ ಇದುವರೆಗೆ ರಾಜ್ಯದ ಯಾವ ಯಾವ ತಾಲ್ಲೂಕ್‌ಗಳಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ. ತಾತ್ಕಾಲಿಕವಾದಂಥ ಯೋಜನೆಗಳಿಗೆ ಎಷ್ಟು ಖರ್ಚು ಮಾಡಿದ್ದೀರಿ ? ಶಾಶ್ವತವಾದಂಥ ಯೋಜನೆಗಳಿಗೆ ಇದುವರೆಗೆ ಎಷ್ಟು ಹಣವನ್ನು ಎಲ್ಲೆಲ್ಲಿ ಖರ್ಚು ಮಾಡಿದ್ದೀರಿ ಎಂಬ ವಿವರಗಳನ್ನು ಸಭೆಯ ಮುಂದಿಡಬೇಕೆಂದು ಈಗತಾನೇ ಮಾನ್ಯ ಹುಚ್ಚಮಾಸ್ತಿಗೌಡರು ಕೇಳಿದರು. ಇದು ಬಹಳ ಮುಖ್ಯವಾದುದು. ಅದನ್ನು ಹೇಳಿ ಎಂದರೆ ನಮ್ಮ ಸಚಿವರು ಇದಕ್ಕೆ ಸಂಬಂಧಪಟ್ಟ ಅಂಕೆ ಅಂಶಗಳು ಈಗ ನನ್ನ ಹತ್ತಿರ ಇಲ್ಲ, ಇದನ್ನು ಈ ದಿವಸ ಇಲ್ಲ ನಾಳೆಯೊಳಗಾಗಿ ಹೇಳುತ್ತೇನೆಂದು ಹೇಳುತ್ತಾರೆ. ಇದನ್ನು ನೋಡಿದರೆ ನನಗೆ ಇವೊತ್ತು ಅನಿಸುವುದು ಅವರಲ್ಲಿ ಯಾವ ಅಂಕೆ ಅಂಶಗಳೂ ಇಲ್ಲ. ನಮಗೆ ಇಲ್ಲಿ ಒದಗಿಸಿರುವುದರಲ್ಲೇ ನೋಡಿ ತೃಪ್ತಿ ಪಡೆಯಬೇಕು ಎಂದು ಹೇಳುತ್ತಾ ಇಲ್ಲಿ ಸುಮಾರು ಮೂರೂವರೆ ಕೋಟಿಯಷ್ಟು ಹಣವನ್ನು ಕ್ಷಾಮ ಪರಿಹಾರಕ್ಕಾಗಿ ಕೊಡಿ ಎಂದು ಕೇಳುತ್ತಿದ್ದಾರೆ. ಇದೂ ಅಲ್ಲದೆ ಇಲ್ಲಿ ನಮಗೆ ಒದಗಿಸಿರುವ ಪಟ್ಟಿಯಲ್ಲಿ ಕ್ಷಾಮ ಪರಿಹಾರ ಕಾರ್ಯಗಳು ಕಳೆದ ಆರು ವರ್ಷಗಳಿಂದ ಯಾವ ರೀತಿ ಕಾರ್ಯಗತವಾಗಿದೆ ಎನ್ನುವುದನ್ನು ಹೇಳಿದ್ದರೂ ಇದರಲ್ಲಿ ಕ್ಷಾಮಕ್ಕೆ ಒಳಗಾಗಿರುವ ಜನಕ್ಕಾಗಲೀ ಯಾವ ಪರಿಹಾರಗಳೂ ದೊರಕಲಿಲ್ಲ. ದುಡ್ಡನ್ನೇನೋ ಖರ್ಚು ಮಾಡಿದ್ದಾರೆ. ಇದರಿಂದ ಕ್ಷಾಮ ಪರಿಹಾರವಾಗಲಿಲ್ಲ. ಈ ಹಣವನ್ನು ಎಲ್ಲಿ ಖರ್ಚು ಮಾಡಿದ್ದಾರೆಂದರೆ ಎಲ್ಲಿ ಕಾಂಗ್ರೆಸ್ಸು ಪಕ್ಷದವರು ಇದ್ದಾರೋ ಅಂತಹ ಕಡೆಗಳಲ್ಲಿ ಕ್ಷಾಮ ಪರಿಹಾರಕ್ಕೋಸ್ಕರ ಖರ್ಚು ಮಾಡಿದ್ದಾರೆ ಮತ್ತು ಇದರಲ್ಲೂ ಕೂಡ ಎಲ್ಲ ಜಿಲ್ಲೆಗಳಲ್ಲೂ ಖರ್ಚು ಮಾಡಿದ್ದೇವೆಂದು ವಿವರಗಳನ್ನೂ ಕೊಟ್ಟಿದ್ದಾರೆ. ಆದರೆ ನಿಜವಾಗಿಯೂ ಮಳೆ ಇಲ್ಲದೆ ಬೆಳೆ ಇಲ್ಲದೆ ಬಹಳ ಕಷ್ಟಕ್ಕೆ ಸಿಕ್ಕಿರುವ ಬಡಪಾಯಿ ಜನಕ್ಕೆ ಸರಕಾರ ಖರ್ಚು ಮಾಡಿರುವುದನ್ನು ನೋಡಿದರೆ ಶೇಕಡಾ ಐದರಷ್ಟು ಜನಕ್ಕೂ ಇದರ ಸಹಾಯ ದೊರೆತು ಪರಿಹಾರ ಸಿಗಲಿಲ್ಲ. ಮತ್ತು ಸರಕಾರಕ್ಕೆ ನಾವು ಇಲ್ಲ ಪದೇ ಪದೇ ಹೇಳುತ್ತಲೇ ಬರುತ್ತಿದ್ದೇವೆ. ಕ್ಷಾಮ ಪರಿಹಾರದ ಕಾರ್ಯಗಳಿಗಾಗಿಯೇ ಒಂದು ಪ್ರತ್ಯೇಕ ಇಲಾಖೆ ಮಾಡಬೇಕು ಎಂದು. ಆದರೆ ಸರಕಾರ ಇದುವರೆಗೂ ಹಾಗೆ ಮಾಡಲಿಲ್ಲ. ಹಾಗೆ ಮಾಡಿದ್ದರೆ ಎಲ್ಲಿ ಮಳೆ ಇಲ್ಲ ಅಲ್ಲಿ ಬೇಗನೇ ರಿಲೀಫ್ ಕೆಲಸಗಳನ್ನು ತೆಗೆದುಕೊಂಡು ಜನಕ್ಕೆ ಹೆಚ್ಚು ಸಹಾಯ ಮಾಡಲು ಅನುಕೂಲವಾಗುತ್ತದೆ. ಈಗೇನೊ ಕ್ಷಾಮ ಬಂದಿದೆ ಎಂದು ಅಲ್ಲಲ್ಲಿ ರಿಲೀಫ್ ಕಾಮಗಾರಿಗಳನ್ನು ಮಾಡುತ್ತಿದ್ದಾರೆ. ಹಣವೇನೋ ಇದಕ್ಕೆ ಖರ್ಚಾಗುತ್ತಿದೆ. ಆದರೆ ಇದು ಹೇಗೆ ಆಗುತ್ತಿದೆ ಎಂದರೆ ಮಳೆ ಬಂದಾಗ ಒಂದೊಂದು ಸಾರಿ ಒಂದು ರೀತಿಯ ಹುಳಗಳು ಹುಟ್ಟಿಕೊಳ್ಳುತ್ತವೆ. ಹಾಗೆ ರಿಲೀಫ್ ಕೆಲಸಗಳನ್ನು ಮಾಡಲು ರಿಲೀಫ್ ಕಂಟ್ರಾಕ್ಟರುಗಳು ಎನ್ನುವಂತಹ ಬಾರಿ ಖದೀಮರುಗಳು ಹುಟ್ಟಿಕೊಂಡಿದ್ದಾರೆ. ಇವರಿಗೆ ಮಳೇನೂ ಬೇಕಾಗಿಲ್ಲ ಬೆಳೇನೂ ಬೇಕಾಗಿಲ್ಲ. ಇವರಲ್ಲಿ ಯಾವ ಲೆಕ್ಕಗಳೂ ಇರುವುದಿಲ್ಲ. ಇವರು ರಸ್ತೆ ಕೆಲಸಗಳನ್ನು ಮಾಡಿದ್ದಾರೆಂದು ಹೇಳುತ್ತಾರೆ. ಆದರೆ ಅಲ್ಲ ರಸ್ತೆಗಳ ಕೆಲಸವೇ ಆಗಿರುವುದಿಲ್ಲ. ಇವರೆಲ್ಲಾ ಬಹು ಬುದ್ಧಿವಂತರಾದ ಜನರು. ಇಂತಹ ಕ್ಷಾಮದ ಒಂದು ನೆಪ ಹೇಳಿಕೊಂಡು ಸರಕಾರದಿಂದ ಹಣ ಪಡೆದು ಸುಖವಾಗಿರುತ್ತಾರೆ. ಇದರಲ್ಲೂ ರಿಲೀಫ್ ಕಾಮಗಾರಿಗಳನ್ನು ಮಾಡಿಸುವುದಕ್ಕಾಗಿಯೇ ಇಂತಹ ಜನ ಹುಟ್ಟಿ ಕೊಂಡಿರುತ್ತಾರೆ. ಇವರೆಲ್ಲರೂ ಮಳೆ ಬರಲಿ, ಬಾರದಿರಲಿ, ರಿಲೀಫ್ ಕೆಲಸಗಳನ್ನು ಮಾಡಿದ ಮೇಲೆ ಇವರಿಗೆ ಒಂದು ರೀತಿಯಾದ ಕಾಂತಿ ಹಾಗೂ ಬಣ್ಣ ಬರುತ್ತದೆ. ಇವರೆಲ್ಲ ಒಂದು ತರಹ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಇವರಿಂದ ರಾಷ್ಟ್ರಕ್ಕೆ ಅನುಕೂಲವಾದ ಯಾವ ಕೆಲಸಗಳೂ ಆಗುತ್ತಿಲ್ಲ, ಬಾವಿ ಕೆಲಸಗಳನ್ನು ಮಾಡುತ್ತೇವೆಂದು ಮಾಡುತ್ತಾರೆ ಆದರೆ ಬಾವಿಗಳಲ್ಲಿ ನೀರೇ ಬರುವುದಿಲ್ಲ. ಕಳೆದು ಐದು ವರ್ಷಗಳಿಂದಲೂ ಕ್ಷಾಮ ಪರಿಹಾರದ ಕೆಲಸಗಳನ್ನು ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕು ಮತ್ತು ಇದಕ್ಕಾಗಿ ಪ್ರತ್ಯೇಕವಾದ ಒಂದು ಇಲಾಖೆ ಏರ್ಪಾಡು ಮಾಡಬೇಕು ಎಂದು ಹೇಳಿದರೂ, ಇದುವರೆಗೂ ಸರಕಾರ ಇದರ ಕಡೆಗೆ ಗಮನ ಕೊಡಲಿಲ್ಲ. ಇದನ್ನು ನಾವು ಇಲ್ಲ ಅನೇಕ ಸಾರಿ ಸರಕಾರಕ್ಕೆ ಹೇಳುತ್ತಿದ್ದರೂ ಇನ್ನೂ ಮಾಡಲಿಲ್ಲ. ಇಂತಹ ಒಂದು ಪ್ರತ್ಯೇಕವಾದ ಇಲಾಖೆ ಮಾಡಿದರೆ ಆಗ ಇದಕ್ಕೆ ಕೊಡುವ ದುಡ್ಡು ಸರಿಯಾಗಿ ಉಪಯೋಗವಾಗಿ ಅಲ್ಲಲ್ಲಿ ಸ್ವಲ್ಪಮಟ್ಟಿನ ಕೆಲಸಗಳಾದರೂ ಆಗುತ್ತಿತ್ತು. ಮತ್ತು ಇದರಿಂದ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೂ ಸಹಾಯವಾಗುತ್ತಿತ್ತು. ಇದಕ್ಕಾಗಿ ನಾವು ಸಲಹೆ ಮಾಡುತ್ತಿರುವುದು ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಮಾಡಬೇಕಾದರೆ ಇದಕ್ಕೆ ಪ್ರತ್ಯೇಕವಾದ ಒಂದು ಇಲಾಖೆ ಇರಬೇಕು, ಇದು ಅಗತ್ಯ. ಸರಕಾರ ಇಂತಹ ಒಂದು ಇಲಾಖೆಯನ್ನು ಮಾಡಿದ್ದರೆ ಅವರಿಗೆ ಬೇಕಾದ ಹಣ ಪಡೆಯಲು ಕಷ್ಟವಾಗುತ್ತಿತ್ತು. ಈಗ ಮಾಡುತ್ತಿರುವ ಕೆಲಸಗಳಿಂದಾಗಿ

(ಶ್ರೀ ಎಸ್. ಶಿವಪ್ಪ)

ಸರಕಾರಕ್ಕೆ ನಷ್ಟವಾಗುತ್ತಿದೆ. ಸರಕಾರ ಈಗ ಕ್ಷಾಮದ ಪರಿಹಾರ ಕಾರ್ಯಗಳಿಗಾಗಿ ಇಷ್ಟೊಂದು ಹಣ ಖರ್ಚು ಮಾಡುತ್ತಿದ್ದರೂ ಇದರಿಂದ ನಿಜವಾಗಿ ಯಾವ ಪರಿಹಾರಗಳೂ ಕೂಡ ಆಗುತ್ತಿಲ್ಲ. ಸರಕಾರ ಇಲ್ಲಿ ಕೊಟ್ಟಿರುವ ಅಂಕೆ ಅಂಶಗಳನ್ನು ನೋಡಿದರೆ ಇದರಲ್ಲಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ ಎನ್ನುವ ವಿವರಗಳನ್ನು ಕೊಟ್ಟಿದ್ದಾರೆ ಮತ್ತು ಇದು ಯಾವ ರೀತಿ ಹಂಚಿಕೆ ಆಗಿದೆ ಎನ್ನುವುದನ್ನೂ ತಿಳಿಸಿದ್ದಾರೆ. ಇದರಲ್ಲಿ ಬೆಂಗಳೂರು, ಮೈಸೂರು, ಬೆಳಗಾಂ ಹಾಗೂ ಗುಲ್ಬರ್ಗಾ ಹೀಗೆ ಎಲ್ಲಾ ಡಿವಿಜನ್‌ಗಳಲ್ಲೂ ಕ್ಷಾಮ ಪರಿಹಾರ ಕಾರ್ಯಕ್ರಮ ಗಳಿಗಾಗಿ ದುಡ್ಡನ್ನು ಹಂಚಿಬಿಟ್ಟಿದ್ದಾರೆ, ಕೆಲವು ಕಡೆಗೆ ಹೆಚ್ಚು ಕೊಟ್ಟಿದ್ದಾರೆ ಕೆಲವು ಕಡೆ ಕಡಿಮೆ ಹಂಚಿದ್ದಾರೆ. ಹಾಸನ ಜಿಲ್ಲೆಗೆ 12 ಸಾವಿರದಷ್ಟು ಹಂಚಿದ್ದಾರೆ ಇನ್ನೊಂದು ಕಡೆ ಹೆಚ್ಚು ಕೊಟ್ಟಿದ್ದಾರೆ. ಹೀಗೆ ಎಲ್ಲ ಭಾಗಗಳಿಗೂ ಸ್ವಲ್ಪ ಹೆಚ್ಚು ಕಡಿಮೆ ಮಾಡಿ ಹಂಚಿರುವುದನ್ನು ಇದರಲ್ಲಿ ತೋರಿಸಿದ್ದಾರೆ. ಇವೆಲ್ಲ ಏನು ತೋರಿಸುತ್ತದೆ ಎಂದರೆ ಕ್ಷಾಮ ಪರಿಹಾರ ಕಾರ್ಯ ಹಾಗೂ ಅಭಾವದ ಒಂದು ನೆಪ ಮಾಡಿಕೊಂಡು ತಮಗೆ ಬೇಕಾದ ರೀತಿಯಲ್ಲಿ ತಮಗೆ ಬೇಕಾದವರಿಗೆ ಹಣವನ್ನು ಹಂಚಿಬಿಟ್ಟಿದ್ದಾರೆ. ನಿಜವಾಗಿ ಎಲ್ಲಿ ಮಳೆ ಬೆಳೆ ಆಗಿಲ್ಲವೋ ಅಂತಹ ಜಾಗದಲ್ಲಿರುವ ಬಡಪಾಯಿಗಳಿಗೆ ಎಷ್ಟುಮಟ್ಟಿಗೆ ಜನರಿಗೆ ಸಹಾಯ ಸಿಗಬೇಕಾಗಿತ್ತೋ ಅಷ್ಟು ಸಹಾಯ ಅವರಿಗೆ ಸಿಗಲಿಲ್ಲ. ಜನರಿಗೆ ಏನು ನಿರೀಕ್ಷೆ ಇತ್ತೋ ಅದರಂತೆ ಇಲ್ಲಿರುವ ಅಂಕೆ ಅಂಶಗಳು ಇಲ್ಲ. ಆದುದರಿಂದ ನಾನು ಇಲ್ಲಿ ಸರಕಾರದವರನ್ನು ಕೇಳುತ್ತೇನೆ. ಇವೊತ್ತಿನವರೆಗೆ ಎಷ್ಟು ಕಡೆಯಲ್ಲಿ ಮಳೆಯಾಗದೆ ದನಗಳಿಗೆ ಮೇವಿಲ್ಲದೆ ಜನ ತೊಂದರೆ ಪಡುತ್ತಿದ್ದಾರೆ ಎನ್ನುವ ವಿವರಗಳಿವೆಯೇ ? ಮತ್ತು ಎಷ್ಟು ಜನರಿಗೆ ಕೆಲಸಗಳನ್ನು ಒದಗಿಸಿ ಕೊಟ್ಟಿದ್ದೀರಿ ? ಬರಗಾಲದಿಂದ ಎಷ್ಟು ಜನಗಳು ಹಾಗೂ ದನಗಳು ಸತ್ತು ಹೋಗಿವೆ ಈ ಎಲ್ಲಾ ವಿವರಗಳ ಅಂಕೆ ಅಂಶಗಳನ್ನು ಏನಾದರೂ ತಾವು ತರಿಸಿ ಇಟ್ಟಿದ್ದೀರಾ-ಮತ್ತು ಇಂತಹ ಒಂದು ಸ್ಟ್ಯಾಟಿಸ್ಟಿಕ್ ಇಲ್ಲದೆ ನಾವು ಇಲ್ಲಿ ಚರ್ಚೆ ಮಾಡುವುದರಿಂದ ಏನು ಪ್ರಯೋಜನವಾಗುತ್ತದೆ ಮತ್ತು ಅಲ್ಲಿ ನಾವು ಯಾವ ಆಧಾರದ ಮೇಲೆ ಚರ್ಚೆ ಮಾಡಬೇಕು ? ಇಂತಹ ವಿವರಗಳನ್ನು ಕೊಡಬೇಕೆಂದು ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಸರಕಾರವನ್ನು ಇಲ್ಲಿ ಕೇಳಿದರು. ಎಲ್ಲೆಲ್ಲಿ ಎಷ್ಟೆಷ್ಟು ಹಣ ಒದಗಿಸಿದ್ದೀರಿ ? ಮತ್ತು ನಿಮ್ಮ ಕ್ಷಾಮ ಪರಿಹಾರದ ನೀತಿ ಏನು ? ಅಲ್ಲದೆ ನಮ್ಮ ಅಸೆಂಬ್ಲಿಯಲ್ಲಿ ಪ್ರತಿ ಸಾರಿಯೂ ಬರಗಾಲದ ಬಗ್ಗೆ ಚರ್ಚೆ ಬರುತ್ತಲೇ ಇದೆ ಮತ್ತು ಕೋಟಿಗಟ್ಟಲೆ ಇದಕ್ಕಾಗಿ ಹಣ ಖರ್ಚಾಗುತ್ತಿದೆ. ಬರಗಾಲದ ಒಂದು ನೆಪ ಮಾಡಿಕೊಂಡು ಹಣವನ್ನೇನೋ ಖರ್ಚು ಮಾಡುತ್ತಿದ್ದೀರಿ ಹಿಂದಿನ ಸಾರಿ ತಾಲ್ಲೂಕು ಬೋರ್ಡು ಚುನಾವಣೆಗಳು ಬಂದಿತ್ತು. ಅದಕ್ಕೆ ಸ್ವಲ್ಪ ಕಾಲದ ಮೊದಲೇ ಕ್ಷಾಮದ ನೆಪ ಮಾಡಿಕೊಂಡು ತಮಗೆ ಎಲ್ಲಿ ಹೆಚ್ಚು ಓಟುಗಳು ಬರುತ್ತವೋ ಅಲ್ಲಿಗೆ ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಚುನಾವಣೆ ಕಾಲಕ್ಕೆ ಸರಿಯಾಗಿ ಬರಗಾಲದ ನೆಪ ಮಾಡಿ ಖರ್ಚು ಮಾಡುವುದು ಸರಿಯೇ ? ಇನ್ನು ಯೋಜನೆಗಳೆಂದು ಮಾಡಿರುವುದು ಬರೀ ಕಾಗದದಲ್ಲಿ ಇದೆ. ಇದರಿಂದ ಜನಕ್ಕೆ ಏನೂ ಅನುಕೂಲವಾಗುತ್ತಿಲ್ಲ. ಇದುವರೆಗೂ ಜನತೆಗೆ ಮೋಸ ಮಾಡಿದಿರಿ. ಇನ್ನು ಮುಂದೆ ಜನತೆಗೆ ಇಂತಹ ಮೋಸವನ್ನು ಮಾಡುತ್ತಾ ಹೋದರೆ ಆಗ ಜನರು ಸುಮ್ಮನೆ ಇರುವುದಿಲ್ಲ ಮತ್ತು ಇನ್ನು ಮುಂದೆ ಹೀಗೆ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ಜನ ನಿಮ್ಮನ್ನು ಈಗ ಅರ್ಥ ಮಾಡಿಕೊಂಡಿದ್ದಾರೆ. ನಮಗೆ ಒದಗಿಸಿರುವ ಪಟ್ಟಿಯಲ್ಲಿ ಎಷ್ಟು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಎಷ್ಟು ಜನರಿಗೆ ಕೆಲಸಗಳನ್ನು ಕೊಡಲಾಗಿದೆ ಎನ್ನುವ ವಿವರಗಳನ್ನು ಸ್ವಲ್ಪ ಕೊಟ್ಟಿದ್ದಾರೆ. ಇದನ್ನು ನೋಡಿದರೆ ಕೆಲವು ಜಿಲ್ಲೆಗಳಿಗೆ ಹೆಚ್ಚು ಕೊಟ್ಟಿದ್ದಾರೆ ಕೆಲವು ಕಡೆ ಕಡಿಮೆ ಕೊಟ್ಟಿದ್ದಾರೆ ಧಾರವಾಡ ಜಿಲ್ಲೆಗೆ 18,81,950 ರೂಪಾಯಿಗಳನ್ನು ಕೊಟ್ಟಿದ್ದಾರೆ. 11,251 ಜನಕ್ಕೆ ಕೆಲಸಗಳನ್ನು ಕೊಟ್ಟಿದ್ದಾರೆ. ಇದೇ ರೀತಿ ಹಾಸನ ಜಿಲ್ಲೆಯನ್ನು ನೋಡಿದರೆ ಹಾಸನಕ್ಕೆ 12,500 ರೂಪಾಯಿಗಳು ಮತ್ತು 15,532 ಜನಕ್ಕೆ ಕೆಲಸಗಳನ್ನು ಕೊಡಲಾಗಿದೆ, ಬೆಳಗಾಂ ಜಿಲ್ಲೆಯಲ್ಲಿ 807 ಜನರಿಗೆ ಕೆಲಸಗಳನ್ನು ಕೊಡಲಾಗಿದೆ ಮತ್ತು 7,45,750 ರೂಪಾಯಿ ಗಳನ್ನು ಕೊಟ್ಟಿದ್ದಾರೆ. ನಮ್ಮ ಹಾಸನ ಜಿಲ್ಲೆಗೆ ಕೇವಲ ಹದಿನೈದು ಸಾವಿರ ಜನಕ್ಕೆ ಕೆಲಸಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ ಮತ್ತು ಇಲ್ಲಿಗೆ ಹಣ ಒದಗಿಸಿರುವುದೂ ಬಹಳ ಕಡಿಮೆ. ಕೆಲವು ಕಡೆಗಳಲ್ಲಿ ದುಡ್ಡು ಹಂಚಿಕೆ ಮಾಡಿರುವುದೂ ಸರಿಯಾಗಿಲ್ಲ. ಕ್ಷಾಮ ಪರಿಹಾರಕ್ಕಾಗಿ ಹಣವನ್ನು ವಿತರಣೆ ಮಾಡುವಾಗ ಇದಕ್ಕೆ ಒಂದು ಶಾಶ್ವತವಾದ ಮಾರ್ಗ ಕಂಡು ಹಿಡಿದು ಇದಕ್ಕೆ ತಕ್ಕಂತೆ ಒಂದು ರೂಪ ಕೊಡಬೇಕು. ಇದರ ಬಗ್ಗೆ ಹಣದ ಬೇಡಿಕೆ ಬೇಡುವಾಗ ಗ್ರಾಂಟು ಬೇಕಾದರೂ ಆಗಲೀ ಸಬ್‌ಸಿಡಿ ಬೇಕಾದರೂ ಆಗಲಿ ಸರಕಾರ ಕೊಡಬಹುದು. ಆದರೆ ಇದನ್ನು ಸರಕಾರ ಯಾವ ರೀತಿ ಎಲ್ಲೆಲ್ಲಿ ವಿತರಣೆ ಮಾಡಿ ಎಷ್ಟುಮಟ್ಟಿನ ಕೆಲಸಗಳು ಆಗಿವೆ ಎಂದು ಇದರ ಬಗ್ಗೆ ವಿವರಗಳನ್ನು

ಕೊಟ್ಟಿದ್ದರೆ ನಾವು ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಬಹುದಾಗಿತ್ತು ಮತ್ತು ಸರಕಾರ ಇದಕ್ಕೆ ಉತ್ತರ ಕೊಡಲೂ ಸಾಧ್ಯವಾಗುತ್ತಿತ್ತು. ಈ ರೀತಿ ಹಣವನ್ನು ಹಂಚುವುದರಿಂದ ಕ್ಷಾಮ ಪರಿಹಾರ ಕಾರ್ಯಕ್ರಮಗಳು ಯಶಸ್ವಿಯಾಗುವುದಿಲ್ಲ. ಯಾವ ಉದ್ದೇಶಕ್ಕಾಗಿ ಸರಕಾರ ಖರ್ಚು ಮಾಡಬೇಕೆಂದು ಮಾಡುತ್ತದೆಯೋ ಅಂತಹ ಉದ್ದೇಶ ಇಂತಹ ಕಾರ್ಯಗಳಿಂದ ಸಾಧ್ಯವಾಗುವುದಿಲ್ಲ. ಇಲ್ಲಿ ಕೊಟ್ಟಿರುವ ಅಂಕೆ ಅಂಶಗಳೇ ಇದನ್ನು ತೋರಿಸುತ್ತದೆ. ಇದರಲ್ಲಿ ಕೆಲವು ವಿಚಾರಗಳನ್ನು ಎಂದರೆ ಎಮರ್ಜನ್ಸಿ ಫೀಡಿಂಗು ಪ್ರೋಗ್ರಾಂ, ಸ್ಕೇರ್ಸಿಟಿ ಫಾಡರ್ ಇತ್ಯಾದಿ ಕೆಲವು ಕೆಲಸ ಕಾರ್ಯಗಳನ್ನು ಹೇಳಿದ್ದಾರೆ. ಆದರೆ ಇಂತಹ ಕೆಲಸಗಳನ್ನು ಮಾಡಲು ಆರಂಭ ಮಾಡುವಾಗ ದೇವರ ದಯೆಯಿಂದಲೋ ಏನೋ ಈ ಸಾರಿ ಒಳ್ಳೆಯ ಮಳೆಬಂದು ಜನಗಳಿಗೆ ಎಲ್ಲ ಕಡೆಯಲ್ಲೂ ಕುಡಿಯಲು ನೀರು ಮತ್ತು ದನಗಳಿಗೆ ಕುಡಿಯಲು ನೀರು ಸಿಗಲು ಅನುಕೂಲವಾಯಿತು. ಇಂತಹ ಮಳೆ ಇಲ್ಲದಿದ್ದರೆ ಇದರ ಪರಿಣಾಮ ಬಹಳ ಕೆಟ್ಟದ್ದಾಗುತ್ತಿತ್ತು. ನಾವು ಇಲ್ಲಿಗೆ ಬರುವುದಕ್ಕೆ ಮುಂಚೆ ಜನರಿಗೆ ಹಾಗೂ ದನಗಳಿಗೆ ನೀರು ಕುಡಿಯಲು ಕೂಡ ಸಿಗುತ್ತಿಲ್ಲ ಮತ್ತು ಕೆಲವು ಕಡೆಗಳಲ್ಲಿ ಜನರು ಒಂದು ಕೊಡ ನೀರನ್ನು 5-6-10 ಮೈಲಿಗಳ ದೂರ ಹೋಗಿ ತೆಗೆದುಕೊಂಡು ಕಷ್ಟಪಡುತ್ತಿದ್ದರು ಮತ್ತು ಕಲವು ಕಡೆಗಳಲ್ಲಿ ದನಗಳು ನೀರಿಲ್ಲದೆ ಸತ್ತು ಹೋದವು. ಇದಕ್ಕೆ ಕಾರಣ ಸಕಾಲದಲ್ಲಿ ಮಳೆ ಬರಲಿಲ್ಲ. ನಮ್ಮ ಕಡೆಯಲ್ಲಿ ಹಳ್ಳಿಕಾರ್ ದನಗಳು ಇದ್ದುವು. ಇಂದು ನೀವು ಎಷ್ಟು ಕೋಟಿ ಹಣ ಖರ್ಚು ಮಾಡಿದರೂ ಇವನ್ನು ಉತ್ಪತ್ತಿ ಮಾಡಲು ಸಾಧ್ಯವಿಲ್ಲ. ಬರಗಾಲದ ಕಾರಣದಿಂದಾಗಿ ಕೆಲವು ಕಡೆ ಇಂತಹ ಒಳ್ಳೆಯ ಜಾತಿಯ ಎಷ್ಟೋ ದನಗಳು ನೀರಿಲ್ಲದೆ ಸತ್ತು ಹೋಗಿ ಜನತೆಗೆ ಭಾರಿನಷ್ಟವುಂಟಾಗಿದೆ. ನಮ್ಮ ವ್ಯವಸಾಯ ಮಂತ್ರಿಗಳು ಇಲ್ಲಿ ಬಂದು ನಮ್ಮಲ್ಲಿ ರಿಗ್ ಯಂತ್ರ ಬಂದಿದೆ, ಇದರಿಂದ ಬೇಕಾದಷ್ಟು ಬಾವಿ ತೋಡಿಸಿ ನೀರು ಕೊಡುತ್ತೇವೆ ಎಂದು ಬಾಯಲ್ಲಿ ಹೇಳುತ್ತಾರೆ. ಎಷ್ಟು ಕಡೆಗಳಲ್ಲಿ ಇಂತಹ ಯಂತ್ರಗಳನ್ನು ತೆಗೆದುಕೊಂಡು ಹೋಗಿ ಬಾವಿ ತೋಡಿಸಿದ್ದಾರೆ ಮತ್ತು ಆ ಬಾವಿಗಳಲ್ಲಿ ನೀರೇನಾದರೂ ಬಂದಿದೆಯೇ ಎನ್ನುವುದನ್ನು ಪರೀಕ್ಷೆ ಮಾಡಿದ್ದಾರೆಯೇ? ಇವು ಯಾವುದನ್ನೂ ಮಾಡುತ್ತಿಲ್ಲ. ಇಷ್ಟು ಮಳೆ ಬಿದ್ದಿದ್ದರೂ ಅನೇಕ ಊರುಗಳಲ್ಲಿ ಇನ್ನೂ ಮಳೆಯಾಗದೆ ಕೆರೆಗಳೆಲ್ಲಾ ಬತ್ತಿ ಹೋಗಿವೆ. ಜನರಿಗೆ ದನಕರುಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ಈ ಸರ್ಕಾರದವರಿಂದ ಬಡಜನರಿಗೆ ಉಪಕಾರ ಮಾಡುವುದಕ್ಕೆ ಸಾಧ್ಯವಿಲ್ಲವೆಂದೇ ಮಳೆರಾಯ ಬಂದಹಾಗೆ ಕಾಣುತ್ತಿದೆ. ಇತ್ತೀಚೆಗೆ ಮಳೆ ಬಂದುದರಿಂದ ಅಲ್ಲಲ್ಲೇ ಕೆಲವು ಕಡೆ ಜನರಿಗೂ ಜಾನುವಾರುಗಳಿಗೂ ಕುಡಿಯುವುದಕ್ಕೆ ನೀರಾದರೂ ಸಿಕ್ಕುವಂತಾಗಿದೆ. ಇಷ್ಟೆಲ್ಲಾ ಮಳೆ ಬಂದಿದ್ದರೂ ನಮ್ಮ ಹಾಸನ ಜಿಲ್ಲೆಯ 2-3 ತಾಲ್ಲೂಕುಗಳಲ್ಲಿ ಮಳೆಯೇ ಬಾರದೆ ಬಹಳ ಕುಗ್ರಾಮವುಂಟಾಗಿದೆ. ಅದೇ ರೀತಿ ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆಬಾರದೆ ಪೈರುಗಳೆಲ್ಲಾ ಒಣಗಿವೆ, ಹೀಗಾಗಿ ರಾಜ್ಯದ ಅನೇಕ ಭಾಗಗಳಲ್ಲಿರತಕ್ಕ ರೈತರನ್ನು ಸರ್ಕಾರದವರು ಇನ್ನು ಒಂದು ವರ್ಷಕಾಲ ಸಾಕಬೇಕಾಗಿದೆ. ಅವರಿಗೆ ಬೇಕಾದ ಕೂಲಿಯ ಕೆಲಸವನ್ನು ಅವರಿಗೆ ಸಾಕಷ್ಟು ಒದಗಿಸಬೇಕು. ಅವರಿಗೆ ಹೊಟ್ಟೆಗೆ ಬಟ್ಟೆಗೆ ಸಾಕಾಗುವಷ್ಟು ಕೂಲಿ ಸಿಕ್ಕುವಂತೆ ಕೆಲಸಗಳನ್ನು ಒದಗಿಸಬೇಕು. ಹೀಗೆ ಈ ನಿರ್ಗತಿಕ ರೈತರನ್ನು ಸಾಕತಕ್ಕ ಜವಾಬ್ದಾರಿ ಸರ್ಕಾರದ್ದು. ಅಷ್ಟೇ ಅಲ್ಲದೆ ಹಳ್ಳಿಗಳಲ್ಲಿ ಬಡಬಗ್ಗರಿಗೆ ಅಗ್ಗದ ದರದಲ್ಲಿ ಆಹಾರಧಾನ್ಯಗಳು ಸಿಕ್ಕುವಂತೆ ಅನುಕೂಲ ಮಾಡಬೇಕು. ಈ ದಿವಸ ಪ್ರತಿಯೊಂದು ಜಿಲ್ಲೆಯಲ್ಲೂ ಲಕ್ಷಾಂತರ ಜನರು ಕೂಲಿ ಕೆಲಸಕ್ಕೆ ತಯಾರಾಗಿದ್ದಾರೆ. ಇನ್ನೆರಡು ವಾರಗಳು ಕಳೆದ ನಂತರ ಇವರಿನ್ನೂ ಜಾಸ್ತಿ ಆಗುತ್ತಾರೆ. ನಮ್ಮ ಹಾಸನ ಜಿಲ್ಲೆಯಲ್ಲಿ ಚನ್ನರಾಯಪಟ್ಟಣದಷ್ಟು ಕೆಟ್ಟ ತಾಲ್ಲೂಕು ಇನ್ನೊಂದಿಲ್ಲವೆಂದು ಹೇಳಬಹುದು. ಆ ತಾಲ್ಲೂಕಿನಲ್ಲಿರತಕ್ಕ ಕೆರೆಗಳಿಗೆ ನೀರು ಬಂದಿಲ್ಲ. ಬೆಳೆಗಳೂ ಸಹ ಚೆನ್ನಾಗಿಲ್ಲ. ಅನೇಕ ಕಡೆ ಕುಡಿಯಲು ನೀರಿಲ್ಲ. ಆ ತಾಲ್ಲೂಕಿನಲ್ಲಿ ಲಕ್ಷಗಟ್ಟಲೆ ಜನರು ಕೂಲಿ ಕೆಲಸಕ್ಕೆ ಹಾತೊರೆಯುತ್ತಿದ್ದಾರೆ. ಅಂಥ ಒಂದು ತಾಲ್ಲೂಕಿಗೆ ಅಲ್ಲಿಯ ಜನರಿಗೆ ಕೂಲಿ ಕೆಲಸ ಒದಗಿಸಲು 50 ಸಾವಿರ ಜನರೆಂದು ಇಟ್ಟುಕೊಂಡರೂ ಎಷ್ಟು ಕನಿಷ್ಟ ದುಡ್ಡು ಬೇಕು? 50 ಸಾವಿರ ಬೇಡ, 25 ಸಾವಿರ ಜನರಿಗೆ ಕೆಲಸ ಒದಗಿಸಬೇಕಾಗಿದ್ದರೆ ದಿನಕ್ಕೆ 50 ಸಾವಿರ ರೂಪಾಯಿಗಳು ಬೇಕು. ತಿಂಗಳಿಗೆ 15 ಲಕ್ಷ ಆಯಿತು. ಅಂದಾಗ ಒಂದು ವರ್ಷಕ್ಕೆ ಎಷ್ಟು ಹಣಬೇಕಾಗುವುದು ಎಂಬುದನ್ನು ಊಹಿಸುವುದಕ್ಕೆ ಕಷ್ಟವಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರದವರು ಒಂದೊಂದು ಜಿಲ್ಲೆಗೆ ಅದರ ಅಗತ್ಯವೇನೆಂಬುದನ್ನು ಲೆಕ್ಕಹಾಕದೆ ಒದಗಿಸಿರತಕ್ಕ ಹಣವೇನಿದೆ ಅದು ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಬತ್ತಿದ ಸಮುದ್ರಕ್ಕೆ ಎರಡು ಹನಿ ನೀರನ್ನು ಬಿಟ್ಟಹಾಗಿದೆ. ದೇಶದಲ್ಲಿ ಈ ದಿವಸ ಎಲ್ಲೆಲ್ಲಿ ಜನರು ಕ್ಷಾಮಕ್ಕೆ ಸಿಕ್ಕಿ ನರಳುತ್ತಿದ್ದಾರೆ ಅಂಥ ಜನರಿಗೆಲ್ಲಾ ಒಂದು ಅನುಕೂಲವನ್ನು ಕಲ್ಪಿಸಬೇಕಾಗಿದ್ದರೆ ಸರ್ಕಾರದವರು ಈಗ ಎಷ್ಟು ಹಣವನ್ನು ಒದಗಿಸಿದ್ದಾರೋ ಇದರ ಐದರಷ್ಟು ಹಣವನ್ನು ಒದಗಿಸಿದರೂ ಸಾಲದೆಂದು ಕಾಣುತ್ತಿದೆ.

(ಶ್ರೀ ಎಸ್. ಶಿವಪ್ಪ)

ಇನ್ನು ಸರ್ಕಾರದವರು ಆಗಾಗ್ಗೆ ಈ ಕ್ಷಾಮಡಾಮರಗಳನ್ನು ತಡೆಗಟ್ಟುವುದಕ್ಕೆ ಶಾಶ್ವತವಾದ ಪರಿಹಾರ ಮಾರ್ಗಗಳನ್ನು ಕೈಗೊಳ್ಳುತ್ತೇವೆಂದು ಆಗಿಂದಾಗ್ಗೆ ಹೇಳುತ್ತಲೇ ಇದ್ದಾರೆ. ಆದರೆ ಇಲ್ಲಿಯವರೆಗೂ ಅವರು ಅಂಥ ಯಾವ ಒಂದು ಯೋಜನೆಯನ್ನು ಈ ಸಭೆಯ ಮುಂದೆ ಇಟ್ಟಿಲ್ಲ. ಈ ದಿವಸ ಕೂಡ ನಾನು ಯಾವ ಸ್ಕೀಮು ಇದೆಯೆಂದು ಕೇಳುತ್ತೇನೆ? ವರ್ಷದಲ್ಲಿ ಕೆಲವು ಸಾರ್ತಿ ಮಳೆ ಬರಬಹುದು, ಇನ್ನು ಕೆಲವು ಸಾರಿ ಬಾರದೆ ಇದ್ದರೂ ಇರಬಹುದು, ಅದು ಹೀಗೇ ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಇದೇ ರೀತಿ ಕಳೆದ ಹತ್ತಾರು ವರ್ಷಗಳಿಂದ ನಾವು ಈ ಕ್ಷಾಮಡಾಮರುಗಳಿಗೆ ತಪ್ಪದೆ ಒಂದೇ ಸಮನಾಗಿ ತುತ್ತಾಗುತ್ತಿದ್ದೇವೆ. ಇಂಥ ವಿಪತ್ತನ್ನು ತಪ್ಪಿಸುವುದಕ್ಕೆ ಒಂದು ಶಾಶ್ವತವಾದ ಮಾರ್ಗವನ್ನು ಕೈಗೊಳ್ಳಬೇಕಾದ್ದು ಅತ್ಯಗತ್ಯ. ಅದನ್ನು ಮಾಡದೆ ಸುಮ್ಮನೆ ಅಲ್ಲಿಷ್ಟು ಇಲ್ಲಿಷ್ಟು ಪರಿಹಾರ ಕಾರ್ಯಗಳನ್ನು ಕಣ್ಣುಗಳನ್ನು ಒರೆಸುವುದಕ್ಕೆ ಕೈಗೊಳ್ಳುತ್ತೇವೆಂದು ಹೇಳುವುದು ಸಾಧುವಾದ್ದಲ್ಲ. ಇದರಿಂದ ಏನೂ ಪ್ರಯೋಜನವಿಲ್ಲ. ಹಿಂದೆ ಈ ದೇಶವನ್ನು ಪರಕೀಯರು ಆಳುತ್ತಿದ್ದಾಗ ಅವರೂ ಕೂಡ ಇಂಥ ಕ್ಷಾಮಗಳನ್ನು ತಡೆಗಟ್ಟಲು ಆಗಾಗ್ಗೆ ಶಾಶ್ವತವಾದ ಕೆಲಸಗಳನ್ನು ಕೈಗೊಳ್ಳುತ್ತಿದ್ದರು. ಅನೇಕ ಕಡೆ ರೈಲ್ವೆ ಲೈನುಗಳನ್ನು ಹಾಕಿಸುತ್ತಿದ್ದರು; ನಾಲೆಗಳನ್ನು ತೆಗೆಸುತ್ತಿದ್ದರು. ಇಂದಿರತಕ್ಕ ಸರ್ಕಾರ ಎಲ್ಲಿ ಇಂಥ ಕೆಲಸಗಳನ್ನು ಯಾವಾಗ ಕೈಗೊಂಡಿದೆ? ಈಗಲಾದರೂ ಕೇಂದ್ರಕ್ಕೆ ಬರೆದು ಅವರಿಂದ ಅಪ್ಪಣೆ ಪಡೆದು ಇಲ್ಲಿ ಅಗತ್ಯವೇಕಾದ ಅನೇಕ ರೈಲ್ವೆಗಳ ಲೈನು ಹಾಕತಕ್ಕ ಕಾರ್ಯವನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಹಾಗೇ ಅದರ ಜೊತೆಗೆ ಇನ್ನು ದೊಡ್ಡದೊಡ್ಡ ರಿಜರ್ವಾಯರುಗಳನ್ನು ಕಟ್ಟತಕ್ಕ ಕಡೆ ಅಂದರೆ ಆ ಹಾರಂಗಿ, ಹೇಮಾವತಿ ಮತ್ತು ಕೃಷ್ಣ ಈ ಕಡೆಗಳಲ್ಲಿ ನಾಲಾ ಕೆಲಸವನ್ನು ಕೈಗೊಳ್ಳಲು ಸಾಕಷ್ಟು ಅವಕಾಶವಿದೆ. ಅದನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇದರಿಂದ ದೇಶಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಒದಗಿಸಿದಂತಾಗುವುದು. ಜನರಿಗೂ ಅನುಕೂಲವಾಗುವುದು. ಇನ್ನು ಅನೇಕ ಭಾಗದಲ್ಲಿ ಜನಕ್ಕೆ ಕುಡಿಯುವ ನೀರು ಸಿಕ್ಕುತ್ತಿಲ್ಲ. ಮಳೆ ಅಲ್ಲಿ ಸಕಾಲಕ್ಕೆ ಬರುವುದಿಲ್ಲ. ಆದ್ದರಿಂದ ಸರ್ಕಾರದವರು ಇಂಥ ಜಾಗಗಳನ್ನು ಪರಿಶೀಲಿಸಿ ಒಂದು ಸಾವಿರ ಪ್ರಜಾಸಂಖ್ಯೆ ಇರತಕ್ಕ ಒಂದೊಂದು ಗ್ರಾಮಕ್ಕೆ ಇಲ್ಲವೇ ಜನಸಮೂಹಕ್ಕೆ ರೂರಲ್ ಪ್ರೊಟೆಕ್ಟೆಡ್ ವಾಟರ್ ಸ್ಕೀಮಿನ ಅಂಗವಾಗಿ ಬಾವಿಗಳನ್ನು ತೆಗೆಸಿ ಜನರಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಕಡೆಗಳಲ್ಲಿ ಈ ಕುಡಿಯುವ ನೀರಿನ ಸರಬರಾಯಿ ಬಗ್ಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಆದರೆ ಆ ಜನರಿಗೆ ಆ ವಿದ್ಯುಚ್ಛಕ್ತಿಯ ಛಾರ್ಜನ್ನು ಕಟ್ಟುವುದಕ್ಕೆ ಶಕ್ತಿ ಇಲ್ಲದೆ ಆ ಹಣ ಬಾಕಿ ಇರತಕ್ಕ ಕಡೆ ವಿದ್ಯುತ್ ಸರಬರಾಜನ್ನು ನಿಲ್ಲಿಸಿದ್ದಾರೆ. ಹೀಗಾಗಿ ಆ ಜನರು ಕಸ ಕೊಳೆ ಇದ್ದ ಜಾಗದಲ್ಲಿರತಕ್ಕ ನೀರನ್ನು ತಂದು ಕುಡಿಯುತ್ತಿದ್ದಾರೆ. ಇದು ಬಹಳ ಅನ್ಯಾಯ. ಜನರಿಗೆ ದೈವಾನುಗ್ರಹದಿಂದ ಗಾಳಿಯೇನೋ ದೊರೆಯುತ್ತಿದೆ, ಆದರೆ ಪ್ರತಿಯೊಬ್ಬರಿಗೂ ನೀರನ್ನು ಕುಡಿಯುವುದಕ್ಕೆ ಒದಗಿಸಬೇಕಾದ್ದು ಸರ್ಕಾರದ ಕರ್ತವ್ಯ. ಆದ್ದರಿಂದ ಸರ್ಕಾರದವರೇ ನೇರವಾಗಿ ಕುಡಿಯುವ ನೀರಿಗಾಗಿ ಒದಗಿಸಿರತಕ್ಕ ವಿದ್ಯುತ್ತಿನ ಹಣವನ್ನು ಪಾವತಿ ಮಾಡಿ ಆ ಹಳ್ಳೀ ಜನಕ್ಕೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪರದೇಶದವರು, ಕೇರ್ ಸಂಸ್ಥೆಯಂತಹವರು ನಮಗೆ ಒದಗಿಸುತ್ತಿರುವ ಹಾಲಿನ ಪುಡಿ ಮತ್ತಿತರೆ ಸಾಮಾನುಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಹಂಚುವುದಕ್ಕೆ ನಮ್ಮ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಸರ್ಕಾರದವರು ಇದರ ಬಗ್ಗೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ರೂಪಿಸಿಲ್ಲ. ಯಾರೋ ಒಬ್ಬ ಶಾಲಾ ಉಪಾಧ್ಯಾಯನಿಗೆ ಇದರ ವಿತರಣೆ ಕಾರ್ಯವನ್ನು ವಹಿಸಿರುತ್ತಾರೆ. ಆತನು ಅರ್ಧವನ್ನು ಪೇಟೆಯಲ್ಲಿ ಮಾರಿ ಉಳಿದರ್ಧವನ್ನು ಹೇಗೆ ವಿಲೇವಾರಿ ಮಾಡುತ್ತಾನೋ ಅದೂ ಕೂಡ ತಿಳಿಯದಾಗಿದೆ. ಆ ಕೇರ್ ಸಂಸ್ಥೆಯಿಂದ ಬರತಕ್ಕ ರವೆ, ಹಾಲಿನ ಪುಡಿ ಇವುಗಳೆಲ್ಲಾ ಹೀಗೆ ದುರ್ವಿನಿಯೋಗವಾಗುತ್ತಿದೆ, ಯಾರೋ ಪುಣ್ಯಾತ್ಮರು ಕೊಟ್ಟಿದ್ದನ್ನೂ ಕೂಡ ಸರಿಯಾಗಿ ವಿತರಣೆ ಮಾಡುವುದಕ್ಕೆ ಸರ್ಕಾರದವರ ಕೈಲಾಗಲಿಲ್ಲ ಎಂದರೆ ಏನು ಹೇಳಬೇಕು? ಒಬ್ಬ ಮನುಷ್ಯನಿಗೆ 30–40 ರೂಪಾಯಿ ಸಂಬಳ ಕೊಟ್ಟರು ಕೂಡ ಚಿಂತೆಯಿಲ್ಲ, ಬಿಟ್ಟಿ ಕೆಲಸ ಮಾಡಿಸತಕ್ಕ ಆಲೋಚನೆಯನ್ನು ಬಿಟ್ಟು ಅದರ ಬಗ್ಗೆ ಒಂದು ನಿರ್ದಿಷ್ಟ ಸಂಬಳದ ಮೇಲೆ ಕೆಲಸಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಹಾಗಿಲ್ಲವಾದರೆ ಆ ಸಾಮಾನುಗಳ ವಿತರಣೆ ಸರಿಯಾಗಿ ಆಗುವುದಿಲ್ಲ. ಸಂಬಳವಿಲ್ಲದೆ ಕೆಲಸಮಾಡುವಂಥ ಧರ್ಮರಾಯರು ನಮ್ಮಲ್ಲಿ ಇರುವುದಿಲ್ಲ. ಆದ್ದರಿಂದ ಸರಿಯಾದ ಸಂಬಳ ಕೊಟ್ಟು ಈ ಕೆಲಸವನ್ನು

ವಿತರಣೆಯಿಂದ ನಡೆಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನೀವು ವಾಟರ್ ಸಪ್ಲೈ ಸ್ಕೀಂ ಹಾಕುವಾಗ ತಾಲ್ಲೂಕ್‌ವಾರ್ ಸರಿಯಾಗಿ ಹಾಕಿಲ್ಲ. ಈವೊತ್ತಿನ ದಿವಸ ಮಂತ್ರಿಗಳಿಗೆ ಬೇಕಾದ ಕಡೆ ರೂರಲ್ ವಾಟರ್‌ಸಪ್ಲೈ ಸ್ಕೀಮನ್ನು ಮಾಡುತ್ತೀರಿ. ಯಾರಾದರೂ ನಿಮ್ಮಲ್ಲಿ ಬಂದು ಗಲಾಟೆ ಮಾಡುವಂಥವರಿಗೆ ದೇವರ ಪ್ರಸಾದ ಕೊಟ್ಟ ಹಾಗೆ ಅವರ ಕೆಲಸ ಮಾಡಿಕೊಡುವುದು ಸರಿಯಲ್ಲ. ಪ್ರತಿಯೊಂದು ತಾಲ್ಲೂಕಿಗೂ ಪ್ರತಿಯೊಂದು ಜಿಲ್ಲೆಗೂ ವಾಟರ್ ಸಪ್ಲೈ ಸ್ಕೀಮ್ ಬಗ್ಗೆ ಸಮವಾಗಿ ಹಂಚುವುದು ಸರ್ಕಾರದ ಜವಾಬ್ದಾರಿಯಾಗಿರಬೇಕು. ಇದರಲ್ಲಿ ರಾಜಕೀಯ ಇದೆಯೇ ವಿನಃ ಮತ್ತೇನೂ ಇಲ್ಲ ಎಂದು ಹೇಳಬೇಕಾಗಿದೆ. ಈವೊತ್ತು ತಾಲ್ಲೂಕು ಬೋರ್ಡ್ ಸದಸ್ಯರೂ ನಿಮ್ಮವರೇ ಆಗಿದ್ದಾರೆ ಎಂದು ನಿಮ್ಮ ರಾಜಕೀಯನ್ನು ಬೆಳೆಸುವುದು ಸರಿಯಲ್ಲ. ನಿಮ್ಮ ದೃಷ್ಟಿಕೋನ ಆ ರೀತಿ ಇದೆ. ಆದುದರಿಂದ ಈ ರೂರಲ್ ವಾಟರ್ ಸಪ್ಲೈ ಸ್ಕೀಮನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ನಿಮಗೆ ದಕ್ಷತೆ ಇಲ್ಲವೆಂದು ಹೇಳುತ್ತೇನೆ. ನಮ್ಮ ತಾಲ್ಲೂಕು 2 ಲಕ್ಷ ಪ್ರಜಾಸಂಖ್ಯೆ ಇರತಕ್ಕಂಥ ತಾಲ್ಲೂಕು. ಅಲ್ಲಿಗೆ ಕಡಿಮೆ ಹಣವನ್ನು ಒದಗಿಸಿದ್ದೀರಿ. ನಿಮಗೆ ಬೇಕಾದವರಿಗೆ, ಮಂತ್ರಿಗಳ ಮನೆಗಳು ಇರುವ ಕಡೆ ಮತ್ತು ನಿಮ್ಮ ಜನಗಳು ಇರುವ ಕಡೆ ಬೇಕಾದ ಸೌಕರ್ಯವನ್ನು ಮಾಡಿಕೊಡುವುದು ಸರಿಯಲ್ಲ. ಯಾವ ತಾಲ್ಲೂಕಿನಲ್ಲಿ ನೀರು ಇಲ್ಲ ಅಂತಹ ಕಡೆ ಪರೀಕ್ಷೆ ಮಾಡಿ ಆ ಜನಗಳಿಗೆ ತಕ್ಕ ಸೌಕರ್ಯವನ್ನು ಒದಗಿಸಿ ಕೊಡಬೇಕಾದ್ದು ಸರ್ಕಾರದ ಪ್ರಥಮ ಜವಾಬ್ದಾರಿ ಎಂದು ತಿಳಿಯಬೇಕು. ಕಂದಾಯವನ್ನು ವಸೂಲ್ಮಾಡುವ ಜವಾಬ್ದಾರಿಯನ್ನು ನೀವು ಯಾವರೀತಿ ಇಟ್ಟುಕೊಂಡಿದ್ದೀರೋ ಅದೇ ರೀತಿ ಅವರಿಗೆ ಬೇಕಾದ ಅನುಕೂಲತೆಗಳನ್ನೂ ಕೂಡ ಮಾಡಿಕೊಡತಕ್ಕಂಥಾ ಜವಾಬ್ದಾರಿಯೂ ನಿಮ್ಮದಾಗಿರಬೇಕು. ಅಂತಹ ಜವಾಬ್ದಾರಿಯನ್ನು ನೀವು ಸರಿಯಾಗಿ ನಿರ್ವಹಿಸಿಲ್ಲ ಎಂದು ನಾನು ಹೇಳುತ್ತೇನೆ.

3–00 P.M.

ಇನ್ನು ರಿಲೀಫ್ ಕಾಮಗಾರಿ ವಿಷಯ. ಇದಕ್ಕೆ ಕೊಟ್ಟಂಥ ಹಣವನ್ನು ರಾಜಕೀಯವಾಗಿ ಉಪಯೋಗಿಸುತ್ತಿದ್ದೀರಿ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಈ ರಿಲೀಫ್ ಕಾಮಗಾರಿ ಕೆಲಸಕ್ಕಾಗಿ ಕೇಂದ್ರದಲ್ಲಿ ನಮ್ಮ ಸದಸ್ಯರು ಏನು ಇದ್ದಾರೋ ಅವರು 10 ಕೋಟಿ ರೂಪಾಯಿ ಬೇಕಾದರೂ ಅವರ ನೆರವನ್ನು ಕೇಳುತ್ತಾರೆ. ಅದಕ್ಕೆ ಬೇಕಾದ ವ್ಯವಸ್ಥೆಯನ್ನೂ ಕೂಡ ಮಾಡಿಕೊಡುತ್ತಾರೆ. ಆದರೆ ಅದು ಬರುವವರೆಗೆ 1972ರ ಮಹಾಚುನಾವಣೆಯೂ ಕೂಡ ಸಮೀಪಿಸುತ್ತದೆ. ಆವಾಗ ರಿಲೀಫ್ ಕಾಮಗಾರಿ ಕೆಲಸವೂ ಸಹ ಶುರುವಾಗುತ್ತದೆ. ಚುನಾವಣೆ ಸಮಯದಲ್ಲೇ ಈ ರಿಲೀಫ್ ಕಾಮಗಾರಿ ಕೆಲಸಬರುವುದನ್ನು ನೋಡಿದರೆ ಇದನ್ನು ರಾಜಕೀಯವಾಗಿ ಉಪಯೋಗಿಸಿಕೊಳ್ಳುತ್ತಾರೆಯೇ ವಿನಃ ಆ ಹಣವನ್ನು ಸಮನಾಗಿ ಹಂಚುವುದಕ್ಕೆ ಬರುವುದಿಲ್ಲ. ಈ ಹಣವನ್ನು ಕಾಂಗ್ರೆಸ್ ಪಕ್ಷಕ್ಕಾಗಲಿ, ಬೇರೆ ಪಕ್ಷ ಯಾವುದಾದರೂ ಆಗಲಿ ಅದೆಲ್ಲವನ್ನೂ ಬಿಟ್ಟು ಎಲ್ಲದಕ್ಕೂ ಸಮನಾಗಿ ಹಂಚಬೇಕು ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಈಗ ಶೇಕಡ 75 ಭಾಗ ತಾಲ್ಲೂಕು ಬೋರ್ಡ್‌ಗಳು ನಿಮ್ಮ ಕೈಯಲ್ಲಿ ಇವೆ. ಹೋದ ಸಲದ ಚುನಾವಣೆಯಲ್ಲೂ ಕೂಡ ತಾಲ್ಲೂಕು ಬೋರ್ಡುಗಳು ನಿಮ್ಮ ಕೈಯ್ಯಲ್ಲೇ ಇತ್ತು. ಆದುದರಿಂದ ಆವಾಗ ಅವಕ್ಕೆ ಸಾಕಷ್ಟು ಪರಿಹಾರವೂ ಸಿಕ್ಕಿತು. ಯಾವ ಪರಿಹಾರ ಸಿಕ್ಕಿದರೂ ಕೂಡ ನೀವು ತಾಲ್ಲೂಕು ಬೋರ್ಡ್‌ಗಳ ಮುಖಾಂತರವೇ ಹಂಚುತ್ತೀರಿ. ಈಗ ಕೆಲವು ತಾಲ್ಲೂಕು ಬೋರ್ಡ್‌ಗಳಲ್ಲಿ ಅಲ್ಲಿಯ ಅಧ್ಯಕ್ಷರು ವಿರೋಧ ಪಕ್ಷದವರಾಗಿದ್ದರೆ ಆ ರಿಲೀಫ್ ವರ್ಕ್ಸ್ ಕೆಲಸಗಳನ್ನು ನೋಡುವುದಕ್ಕೆ ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುವುದಿಲ್ಲ. ರಾಜಕೀಯ ದೃಷ್ಟಿಯಿಂದ ಈ ರೀತಿ ಮಾಡುವುದು ಸರಿಯಲ್ಲ. ಅಸೆಂಬ್ಲಿ ಸದಸ್ಯರು ಯಾವ ಪಕ್ಷದವರೇ ಆಗಿರಲಿ ರಿಲೀಫ್ ಕಾಮಗಾರಿ ಕೆಲಸಗಳಿಗೆ ಈ ಹಣವನ್ನು ಹಂಚುವಾಗ ಅವರಿಗೂ ನೇರವಾದ ಜವಾಬ್ದಾರಿಯನ್ನು ಸ್ವಲ್ಪ ವಹಿಸಬೇಕು. ವಿಧಾನಸಭಾ ಸದಸ್ಯರು ಯಾವ ಕ್ಷೇತ್ರದಲ್ಲೇ ಇರಲಿ, ಅವರು ಈ ರಿಲೀಫ್ ವರ್ಕ್ಸ್ ಕೆಲಸಗಳು ಎಲ್ಲೆಲ್ಲಿ ಆಗಿವೆ ಎಂದು ನೋಡಿಕೊಂಡು ಬರಲು ಒಂದು ವಾಹನವನ್ನು ತೆಗೆದುಕೊಂಡು ಹೋಗಿ ಬರಲು ಸಾಧ್ಯವಿಲ್ಲ. ಅವರಿಗೆ ಕೊಡುವ 150 ರೂಪಾಯಿ ಅಲೋಯನ್ಸ್‌ನಿಂದ ಎಲ್ಲಾ ಕೆಲಸಗಳನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ವಾಹನ ಸೌಕರ್ಯವಿಲ್ಲದೆ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಒಂದು ತಿಂಗಳಿಗೆ ಒಂದು ವಾರ ಕಾಲವಾದರೂ ಅವರನ್ನು ತಮ್ಮ ಜೀಪಿನಲ್ಲಿ ಕರೆದುಕೊಂಡು ಹೋಗಿ ಎಲ್ಲೆಲ್ಲಿ ರಿಲೀಫ್ ವರ್ಕ್ಸ್ ಕೆಲಸಗಳು ಆಗಿವೆಯೋ ಅಲ್ಲಿಗೆ ಅವರು ಭೇಟಿ ಕೊಡುವಂತೆ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ಎಸ್. ಶಿವಪ್ಪ)

ಇನ್ನು ಕೊಟ್ಟಿರತಕ್ಕಂಥ ಹಣ, ಕೇರ್ ಸಂಸ್ಥೆಯಿಂದ ಬಂದಿರತಕ್ಕಂಥ ಆಹಾರ ಆಯಾಯ ಸ್ಕೂಲುಗಳಿಗೆ ಸರಿಯಾಗಿ ತಲುಪಿದೆಯೇ ಇಲ್ಲವೇ, ಅವು ಸರಿಯಾಗಿ ವಿತರಣೆ ಆಗಿದೆಯೇ ಇಲ್ಲವೇ ಮತ್ತು ಅದನ್ನು ಸರಿಯಾಗಿ ಉಪಯೋಗಿಸಿದ್ದಾರೆಯೇ ಇಲ್ಲವೇ ಮತ್ತು ತಮ್ಮ ಕ್ಷೇತ್ರದ ಅಭಿವೃದ್ಧಿ ಜನತೆಯ ತೊಂದರೆಗಳನ್ನು ಅರಿತುಕೊಳ್ಳುವುದಕ್ಕೆ ಶಾಸನಸಭಾ ಸದಸ್ಯರಿಗೆ ಒಂದು ತಿಂಗಳಿಗೆ ಒಂದುವಾರ ಕಾಲವಾದರೂ ತಾಲ್ಲೂಕು ಅಭಿವೃದ್ಧಿ ಮಂಡಲಿಯು ಹೊಂದಿದ ಜೀಪನ್ನು ಒದಗಿಸಿದರೆ, ಅವರು ಆಯಾಯ ಸ್ಥಳಗಳಿಗೆ ಭೇಟಿ ಕೊಟ್ಟರೆ ಸ್ವಲ್ಪ ಉತ್ತಮವಾಗಬಹುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸರ್ಕಾರ ಮಾಡತಕ್ಕಂಥ ಕಾರ್ಯ ಎಷ್ಟಿದೆ ಎನ್ನುವ ಬಗ್ಗೆ ನಾನು ಮತ್ತೊಮ್ಮೆ ಎಚ್ಚರಿಕೆಯನ್ನು ಕೊಡುತ್ತೇನೆ. ಈವೊತ್ತು 3.5 ಕೋಟಿ ರೂಪಾಯಿಗಳನ್ನು ವಿತರಣೆ ಮಾಡಿದ್ದೇವೆ ಎಂದು ಹೇಳಿದಿರಿ. ಇದರಲ್ಲಿ ಬಹುಭಾಗದ ಹಣ ಲೆಕ್ಕಕ್ಕೇ ಬಂದಿಲ್ಲ. ಈವಾಗ ಖರ್ಚು ಮಾಡುತ್ತಾ ಇರುವುದು ಏನೇನೂ ಸಾಲದು. ಇದನ್ನು ಟೆಂಪರರಿಯಾಗಿ ಖರ್ಚು ಮಾಡುವ ಬದಲು ಒಂದು ಖಾಯಂ ಪರಿಹಾರವನ್ನಾಗಿ ಮಾಡಿದರೆ ಈ ಕೆಲಸ ಹೆಚ್ಚು ದಕ್ಷತೆಯಿಂದ ಆಗುತ್ತದೆ ಎಂದು ಹೇಳುತ್ತೇನೆ. ಇದಕ್ಕೆ ಒಂದು ಶಾಶ್ವತವಾದ ಯೋಜನೆಯನ್ನು ಮಾಡಬೇಕು. ಇದರಲ್ಲಿ ರಾಜಕೀಯ ಬಳಸುವುದನ್ನು ತಪ್ಪಿಸಿದರೆ ನಿಜವಾಗಿಯೂ ಈ ರಿಲೀಫ್ ವರ್ಕ್ಸ್ ಚೆನ್ನಾಗಿ ನಡೆಯುವುದೂ ಅಲ್ಲದೆ ಈ ಶಾಸನ ಸಭೆಯಲ್ಲಿ ಕೊಡತಕ್ಕಂಥ ಹಣವೂ ಕೂಡ ಸದುಪಯೋಗವಾಗುತ್ತದೆ. ಇಲ್ಲದೇ ಹೋದರೆ ನೀವು ಈ ಮಹಾ ಪಾಪಕ್ಕೆ ಗುರಿಯಾಗುತ್ತೀರಿ. ಅಲ್ಲದೇ ಸರ್ಕಾರದವರೇ ಅಂದರೆ ಕಾಂಗ್ರೆಸ್‌ನವರೇ ಈ ಪರಿಹಾರದ ಕೆಲಸವನ್ನು ಮಾಡುವುದಕ್ಕೆ ಹೊರಟರೆ 1972ನೇ ಇಸವಿಗೆ ಏನಾಗುತ್ತದೆ ಎಂದರೆ ನೀವು ಏನು ಯೋಜನೆ ಮಾಡಿದ್ದೀರಿ ಅದು ನಡೆಯುವುದಿಲ್ಲ. ಇನ್ನು ಬಹಳ ದಿನಗಳ ಕಾಲ ನಮಗೆ ಮೋಸ ಮಾಡಲಾರಿರಿ. ನಿಮ್ಮ ಮೋಸ ಬಯಲಾಗಿದೆ. ಎಷ್ಟೋ ಹಳ್ಳಿಗಳ ಕಡೆ ನೀರು ಇಲ್ಲದೇ ದನಗಳು ಕ್ಷಾಮದಿಂದ ಸತ್ತು ಹೋದುವು. ಆದುದರಿಂದ ಈ ಒಂದು ಖಾಯಂ ಕ್ಷಾಮ ಪರಿಹಾರಕ್ಕಾಗಿ ಒಂದು ಮಂಡಲಿ ರಚನೆ ಮಾಡಿ. ಇಲ್ಲದೇ ಹೋದರೆ ಈ ಹಣ ಕಾಂಗ್ರೆಸ್ ಪರಿಹಾರಕ್ಕೆ ಹೋಗುವುದಲ್ಲದೆ ಈ ಹಣವನ್ನು ರಾಜಕೀಯಕ್ಕಾಗಿ ಬಳಸುವ ಪ್ರವೃತ್ತಿಯನ್ನೇ ಮುಂದುವರಿಸಿದರೆ ಜನತೆಯ ಶಾಪ ನಿಮ್ಮ ಮೇಲೆ ಬಿದ್ದು, ನೀವು ನಾಶವಾಗುತ್ತೀರಿ. ಇದಕ್ಕೆ ನೀವೇ ಕಾರಣರು ಎಂದು ಹೇಳಿ, ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ.ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ತಂದಿರತಕ್ಕಂಥ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ. ಈಗ 8-10 ದಿವಸದಿಂದ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲೂ ಮಳೆ ಆಗಿದೆ. ಆದರೆ ಈಗ್ಗೆ ಎರಡು ತಿಂಗಳ ಹಿಂದೆ ಈ ಮಳೆ ಬಿದ್ದಿದ್ದರೆ ಈ ಅಭಾವವೇ ಬರುತ್ತಿರಲಿಲ್ಲ ಎಂದು ಹೇಳಬಹುದು.

ಶ್ರೀ ಬಿ. ದೊಡ್ಡ ಬೋರೇಗೌಡ.—ನೀವು ಎಲ್ಲಾ ಕಡೆ ಪ್ರವಾಸ ಮಾಡಿದರೆ ಗೊತ್ತಾಗುತ್ತದೆ. ಶ್ರೀಮಾನ್ ನಾಗಪ್ಪನವರು ಇರುವ ಕ್ಷೇತ್ರದಲ್ಲಿ 20-30 ಕೆರೆಗಳು ಇವೆ. ಆ ಕೆರೆಗಳಲ್ಲಿ ಒಂದು ಗ್ಯಾಲನ್ ಕೂಡ ನೀರು ಬಂದಿಲ್ಲ. ಅದನ್ನು ಬಂದು ಪರಿಶೀಲನೆ ಮಾಡಿ.

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ರೆವಿನ್ಯೂ ಸಚಿವರೂ, ನಾನು ಕೂಡ ಬಂದು ಎಲ್ಲೆಲ್ಲಿ ಬಂದಿಲ್ಲ ಎನ್ನುವುದನ್ನು ಪರಿಶೀಲಿಸೋಣ. ಮಳೆ ಬಾರದೇ ಇರುವ ಕಡೆ ಮಳೆ ಬರಲಿ ಎಂದು ದೇವರನ್ನು ಪ್ರಾರ್ಥಿಸೋಣ. ಮಳೆ ಬಿದ್ದಂಥ ಭಾಗಗಳಲ್ಲಿ ಕ್ಷಾಮನಿವಾರಣೆ ಮಾಡತಕ್ಕ ಅನುಕೂಲವಾದ ಕೆಲಸಗಳು ಏನು ಇವೆಯೋ ಅವನ್ನು ಮಾಡೋಣ. ಈಗ ಮಳೆ ಬಿದ್ದು ಭೂಮಿ ಹದವಾಗಿರುವುದರಿಂದ ಅಲ್ಲಿ ಮಣ್ಣು ಕೆಲಸ ಮಾಡುವುದಾಗಲಿ ಅಥವಾ ಪಿ.ಡಬ್ಲ್ಯು.ಡಿ. ಇಲಾಖೆಗೆ ಹಿಂದೆ ಹಣ ಒದಗಿಸಿಕೊಟ್ಟ ಹಾಗೆ ಒದಗಿಸಿಕೊಟ್ಟು ಅಲ್ಲಿ ಜಲ್ಲಿ ಕೆಲಸ ಮಾಡುವುದು ಆಗಲಿ, ಎಲ್ಲಿ ಮಳೆ ಆಗಿಲ್ಲ ಅಂಥ ಕಡೆ ಕೆರೆಗಳ ಹೂಳು ತೆಗೆಯುವ ಕೆಲಸವನ್ನಾಗಲಿ ಮಾಡಬಹುದು. ಆದರೆ ಒಂದು ರೀತಿಯಲ್ಲಿ ನೋಡಿದರೆ ಈ ಅಭಾವದ ಕೆಲಸ ಬಹಳ ಹೆಚ್ಚಿನ ಮಟ್ಟದಲ್ಲಿ ಆಗುತ್ತಾ ಇದೆ ಎಂದು ನನಗಾದರೂ ಅನಿಸುತ್ತದೆ. ವರ್ಷೇ ವರ್ಷೇ ಅಸೆಂಬ್ಲಿ ಸೇರುವ ಕಾಲದಲ್ಲಿ ಕ್ಷಾಮ ಬಂದೇ ಬರುತ್ತದೆ. ನಾವು ವರ್ಷೇ ವರ್ಷೇ ಸರಕಾರಕ್ಕೆ ಸಲಹೆ ಮಾಡುತ್ತೇವೆ. ಅದಕ್ಕಾಗಿ ನಾನು ಹೇಳುವುದು ನಮ್ಮ ದೇಶದಲ್ಲಿ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿದು ಕ್ಷಾಮ ಬಾರದ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲವೇ? ನಾವು ನೂರಾರು ಕೋಟಿ ರೂಪಾಯಿಗಳನ್ನು ಈ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವಾಗ

ಪ್ರಾಮುಖ್ಯವಾದ ಕ್ಷಾಮನಿವಾರಣಾ ಕೆಲಸಕ್ಕೆ ಒಂದು ತ್ವರಿತವಾದ ಯೋಜನೆಯನ್ನು ಅಂದರೆ ಒಂದು ಶಾಶ್ವತವಾದ ಪರಿಹಾರವನ್ನು ಏತಕ್ಕೆ ಮಾಡಬಾರದು? ಈ ಮಾತನ್ನು ತಾವು ಕೂಡ ಹೇಳಿದ್ದೀರಿ. ವರ್ಷೇ ವರ್ಷೇ ಗಿಳಿಪಾಠ ಹೇಳುವ ಹಾಗೆ ನಾವೂ ಕೂಡ ತಮಗೆ ಒಪ್ಪಿಸುತ್ತಾ ಇದ್ದೇವೆ. ಕ್ಷಾಮ ಬಂದಾಗ ಆ ಕೆಲಸವನ್ನು ತಾತ್ಕಾಲಿಕವಾಗಿ ಮಾಡಿ ಅದರಿಂದ ತಲ್ಲಣಿಸುವ ಬದಲು ಇದನ್ನು ಶಾಶ್ವತವಾಗಿ ಮಾಡುವುದಕ್ಕೆ ಸರ್ಕಾರದವರು ತೀವ್ರವಾಗಿ ಆಲೋಚಿಸಿಲ್ಲ ಎಂದು ಹೇಳಿದರೆ ತಪ್ಪಾಗಲಾರದು.

ನಾಲ್ಕಾರು ವರ್ಷಗಳ ಹಿಂದೆ 20 ಕೋಟಿ ರೂಪಾಯಿಗಳ ಯೋಜನೆಯನ್ನು ಶಾಶ್ವತ ಪರಿಹಾರಕ್ಕೋಸ್ಕರ ತಯಾರು ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಿದ್ದರು. ಅದೇನಾಯಿತು ಎನ್ನುವುದು ಈವರೆಗೂ ಗೊತ್ತಿಲ್ಲ. ಕೇಂದ್ರ ಸರ್ಕಾರದವರು ನಮಗೆ ಸಹಾಯ ಮಾಡುವುದಕ್ಕೆ ಸಿದ್ಧವಿಲ್ಲವೋ ಅಥವಾ ಸರ್ಕಾರದವರೇ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸುತ್ತಿಲ್ಲವೋ ನನಗೆ ತಿಳಿಯದು. ರಾಜ್ಯದಲ್ಲಿನ ಎರಡೂವರೆ ಕೋಟಿ ಜನರಿಗೆ ಅನುಕೂಲ ಮಾಡುವುದಕ್ಕೆ, ರಾಜ್ಯದಲ್ಲಿ ಕ್ಷಾಮಪರಿಹಾರ ಕಾರ್ಯಗಳನ್ನು ಮಾಡುವುದಕ್ಕೆ 20 ಕೋಟಿ ರೂಪಾಯಿ ಕೊಡಲು ಕೇಂದ್ರದಲ್ಲಿ ದುಡ್ಡಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನೂರಾರು ಕೋಟಿ ರೂಪಾಯಿಗಳನ್ನು ಅನೇಕ ಯೋಜನೆಗಳಿಗೆ ಕೇಂದ್ರ ಸರ್ಕಾರ ಖರ್ಚು ಮಾಡುತ್ತಿದೆ. ರಾಜ್ಯಕ್ಕೆ ಈ ಬಾಬಿಗಾಗಿ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಅವರಲ್ಲಿ ಎಷ್ಟರಮಟ್ಟಿಗೆ ಈ ರಾಜ್ಯದಲ್ಲಿ ಎಲ್ಲ ಭಾಗಗಳಿಗೂ ಖರ್ಚು ಮಾಡುವುದಕ್ಕೆ ಆಗುತ್ತದೆ ಎನ್ನುವುದು ತಿಳಿಯದು. ಮೈಸೂರು ಡಿವಿಜನ್‌ನಲ್ಲಿ ಉದಾಹರಣೆಗೆ ಹೇಳುವುದಾದರೆ ಮೈಸೂರು ಜಿಲ್ಲೆಗೆ ಒಂದು ಲಕ್ಷ ನಲವತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ರಿಲೀಫ್ ಕಮಿಟಿಯಲ್ಲಿ ಮಾತನಾಡುತ್ತ ಮಾನ್ಯ ಸದಸ್ಯರಾದ ಶ್ರೀಕಂಠಯ್ಯನವರು ಸರ್ಕಾರ ಕೊಟ್ಟಿರತಕ್ಕ ಹಣದಲ್ಲಿ ಆ ಕಡೆ ಅರ್ಧ ಕೊಡಿ, ಈ ಕಡೆ ಅರ್ಧ ಕೊಡಿ ಎಂದು ಹೇಳಿದಾಗ, ಅದನ್ನು ಹಂಚಿಕೊಳ್ಳುವ ಕೆಲಸದಲ್ಲಿಯೇ ನಮ್ಮ ವೇಳೆಯನ್ನೆಲ್ಲ ವಿನಿಯೋಗಿಸ ಬೇಕಾಯಿತು. ಜನಗಳಿಗೆ ಎಷ್ಟು ಕಷ್ಟವಿದೆ ಎಂದರೆ, ಅದನ್ನು ಹೇಳುವುದಕ್ಕೇ ಆಗುವುದಿಲ್ಲ. ನಮ್ಮನ್ನು ನೋಡಿದರೆ ಕ್ಷಾಮವಿದೆ ಎಂದು ಗೊತ್ತಾಗುವುದಿಲ್ಲ. ನಾವು ದಷ್ಟಪುಷ್ಟರಾಗಿದ್ದೇವೆ. ಕ್ಷಾಮ ಬಂದರೆ ನಮ್ಮಂಥವರಿಗೆ ತೊಂದರೆಯಾಗುವುದಿಲ್ಲ. ತೊಂದರೆಯಾಗುವ ಜನರನ್ನು ನೋಡಿದರೆ ನಮಗೆ ನಾಚಿಕೆಯಾಗುತ್ತದೆ. ಆದ್ದರಿಂದ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಸರ್ಕಾರ ಬಹಳ ತೀವ್ರತೆಯಿಂದ ಹೆಚ್ಚು ಶ್ರಮ ವಹಿಸಿ ಕ್ರಾಂತಿಕಾರಕವಾದ ರೀತಿಯಲ್ಲಿ ಪ್ರಯತ್ನ ಮಾಡುವುದು ಸೂಕ್ತವೆಂದು ನಾನು ಸರ್ಕಾರಕ್ಕೆ ಸಲಹೆ ಮಾಡಲು ಬಯಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಕ್ರಾಂತಿಕಾರಕವಾದ ರೀತಿಯಲ್ಲಿ ಎಂದು ಮಾನ್ಯ ಸದಸ್ಯರು ಹೇಳಿದರು. ಯಾವರೀತಿಯಲ್ಲಿ ಕೆಲಸ ಮಾಡಬೇಕು ಎಂದು ಹೇಳುತ್ತಾರೆಯೇ ?

ಶ್ರೀ ಡಿ. ಎಂ. ಸಿದ್ದಯ್ಯ.—ಸಂತೆ ಹೊತ್ತಿಗೆ ಮೂರು ಮೊಳ ನೇಯ್ದರು ಎನ್ನುವ ಹಾಗೆ, ಕ್ಷಾಮ ಪರಿಸ್ಥಿತಿ ಬಂದಾಗ ಒಂದೆರಡು ಲಕ್ಷ ರೂಪಾಯಿ ಕೊಟ್ಟರೆ ಏನೂ ಆಗುವುದಿಲ್ಲ. ಈ ರೀತಿ ಹಣ ಕೊಟ್ಟು, ಅದು ಡಿವಿಜನಲ್ ಕಮಿಷನರಿಗೆ ಬಂದು, ಅಲ್ಲಿಂದ ಡೆಪ್ಯುಟಿ ಕಮಿಷನರಿಗೆ ಹೋಗಿ, ಅಲ್ಲಿಂದ ತಹಸೀಲ್ದಾರರ ಕಡೆಗೆ ಬಂದು, ಯಾವ ಏಜೆನ್ಸಿಯಿಂದ ಕೆಲಸ ಮಾಡಬೇಕು ಎಂದು ಯೋಚನೆ ಮಾಡಿ ತಾಲ್ಲೂಕು ಅಭಿವೃದ್ಧಿ ಮಂಡಲಿ ಮುಖೇನ ಗ್ರಾಮ ಸೇವಕನ ಕೈಗೆ ಬಂದು ಅವನು ಕೆಲಸಮಾಡ ಬೇಕಾದರೆ ಒಂದೆರಡು ತಿಂಗಳು ಕಳೆದುಹೋಗುತ್ತದೆ. ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ಹೇಳಬೇಕಾದರೆ ತಾಲ್ಲೂಕು ಅಭಿವೃದ್ಧಿ ಮಂಡಳಿ, ಇಂಜಿನಿಯರಿಂಗ್ ಇಲಾಖೆ, ಗ್ರಾಮಪಂಚಾಯಿತಿ ಈ ಮೂರೂ ಏಜೆನ್ಸಿಗಳಿಂದ ಕೆಲಸ ಮಾಡಿಸಿ ಎಂದು ರಿಲೀಫ್ ಕಮಿಟಿಯಲ್ಲಿ ರೆಸಲ್ಯೂಷನ್ ಮಾಡಿದೆವು. ಆದರೆ ಬಿ.ಡಿ.ಒ. ಅವರು ಗ್ರಾಮಸೇವಕರ ಮೂಲಕ ಏಳೆಂಟು ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ. ಇನ್ನೂ 45 ಕೆಲಸಗಳು ಹಾಗೆಯೇ ಇವೆ. ಈಗ ಮಳೆ ಬಂದಿದೆ, ಕ್ಷಾಮ ಪರಿಸ್ಥಿತಿ ಇಲ್ಲ, ಕೆಲಸವನ್ನು ನಿಲ್ಲಿಸಿ ಎಂದು ಅವರು ಹೇಳಿದರೆ ಕೆಲಸ ನಿಂತುಹೋಗುತ್ತದೆ. ಇದರಿಂದ ನಿಜವಾಗಿ ಯಾವ ಉದ್ದೇಶದಿಂದ ಕ್ಷಾಮನಿವಾರಣೆ ಕಾರ್ಯವನ್ನು ತೆಗೆದುಕೊಳ್ಳಲಾಯಿತೋ, ಕ್ಷಾಮದಿಂದ ಬಡವರು, ಭೂಮಿ ಇಲ್ಲದೆ ಇರುವವರು, ಕೆಲಸವಿಲ್ಲದೆ ನೊಂದಿದ್ದಾರೆ. ಅವರಿಗೆ ಕೆಲಸವನ್ನು ಕೊಡುವುದರ ಜೊತೆಗೆ ಅವರ ಹೊಟ್ಟೆಗೆ ಅನ್ನವನ್ನು ಕೊಡುವ ಸದುದ್ದೇಶದಿಂದ ಈ ಹಣವನ್ನು ಖರ್ಚು ಮಾಡಬೇಕಾಗಿದೆ. ಪರಿಸ್ಥಿತಿ ಸರಿಹೋಗುವ ತನಕ ಜನ ಹೊಟ್ಟೆ ತುಂಬಿಸಿಕೊಳ್ಳಲೇಬೇಕು ಎನ್ನುವುದು ಪ್ರಾಮುಖ್ಯ ವಾದುದು. ರಸ್ತೆ ಕೆಲಸವಾಗಲಿ, ಕೆರೆ ಕೆಲಸವಾಗಲೀ, ಯಾವುದೇ ಕೆಲಸವಾಗಲೀ ಕೆಲಸವಾಗ ಬೇಕು ಎನ್ನುವುದು ಎರಡನೆಯ ದೃಷ್ಟಿ. ಕ್ಷಾಮ ಬಂದಿದೆ ಎಂದು ತಿಳಿದಕೂಡಲೇ ಸರ್ಕಾರ ತ್ವರಿತದಿಂದ, ವಾರ್ ಫುಟಿಂಗ್ ರೀತಿಯಲ್ಲಿ ಆಯಾ ಏಜೆನ್ಸಿಗಳಿಗೆ ಹಣವನ್ನು ಕೊಟ್ಟು ಕೆಲಸ ಕಾರ್ಯಗಳು ನಡೆಯುವಂತೆ ಏರ್ಪಾಡು ಮಾಡಬೇಕು. ಹಸಿದಿರುವವನಿಗೆ ಅದರ ಕಷ್ಟ ಗೊತ್ತಾಗುತ್ತದೆ.

(ಶ್ರೀ ಡಿ. ಎಂ. ಸಿದ್ದಯ್ಯ)

ಹೊಟ್ಟೆ ತುಂಬಿದವರಿಗೆ ಆ ನೋವು ಗೊತ್ತಾಗುವುದಿಲ್ಲ. ತಿಂಗಳಾನುಗಟ್ಟಲೆ ಕೆಲಸವನ್ನು ನಿಧಾನ ಮಾಡಿದರೆ ಬಡವನಿಗೆ ಎಷ್ಟು ಕಷ್ಟವಾಗುತ್ತದೆ, ಅವನು ಹೇಗೆ ಜೀವನ ಮಾಡಬೇಕು, ಎಲ್ಲಿ ಕೆಲಸವಿದೆ, ಎಲ್ಲಿ ಕೂಲಿ ಸಿಕ್ಕುತ್ತದೆ? ಇದು ಬಹಳ ಕಠಿಣವಾದ ಕೆಲಸ. ಆದ್ದರಿಂದ ಸರ್ಕಾರ ಹೆಚ್ಚು ಶ್ರಮ ವಹಿಸಿ ಶಾಶ್ವತ ಪರಿಹಾರ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರ 20 ಕೋಟಿ ರೂಪಾಯಿ ಕೊಡದೆ ಇದ್ದರೆ ನಮ್ಮ ಹಣಕಾಸಿನ ಇತರ ಬಾಬುಗಳಲ್ಲಿ ಖರ್ಚನ್ನು ಸ್ವಲ್ಪ ಕಡಮೆ ಮಾಡಿ ಈ ಬಾಬಿಗೆ 20 ಕೋಟಿ ರೂಪಾಯಿ ಖರ್ಚು ಮಾಡಬೇಕು ಇಲ್ಲವೇ ಸಾಲವನ್ನು ಎತ್ತಿ ಅಥವಾ ಬೇರೆ ರೀತಿಯಲ್ಲಿ ಹಣವನ್ನು ಒದಗಿಸಿಕೊಂಡು ಮಾನವೀಯತೆಯಿಂದ ಕೂಡಿದ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಸರ್ಕಾರ ಕ್ರಮ ಕೈಕೊಳ್ಳಬೇಕು. ಸರ್ಕಾರ ಈ ಬಗ್ಗೆ ಅಸಮರ್ಥತೆಯಿಂದ ಕೂಡಿದೆಯೆ, ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲವೇ ಎನ್ನುವ ಪ್ರಶ್ನೆಯನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳುತ್ತೇನೆ. ಇಂಥ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದವರಾದರೂ ಕೂಡ 2-3 ಕೋಟಿ ರೂಪಾಯಿಗಳನ್ನು ಕೊಡಶಕ್ಯದು ಸರಿಯಾದ ನೀತಿಯಲ್ಲ. ಇದು ಮಾನವೀಯತೆಯಿಂದ ಕೂಡಿದ ಪ್ರಶ್ನೆ. ಕೇಂದ್ರದಲ್ಲಿ ಒಂದು ಪಕ್ಷದ ಸರ್ಕಾರವಿರಬಹುದು, ಪ್ರಾಂತಗಳಲ್ಲಿ ಬೇರೆ ಬೇರೆ ಪಕ್ಷಗಳ ಸರ್ಕಾರಗಳಿರಬಹುದು. ಪ್ರಾಂತಗಳಲ್ಲಿ ಯಾವುದೇ ಸರ್ಕಾರಗಳಿರಲಿ, ಅವುಗಳನ್ನು ಸಮದೃಷ್ಟಿಯಿಂದ ನೋಡಬೇಕು; ಮತ್ತು ನಮ್ಮ ಸರ್ಕಾರದವರೂ ಕೂಡ ಕೇಂದ್ರ ಸರ್ಕಾರದ ಹತ್ತಿರ ಇಷ್ಟು ಹಣಬೇಕು ಎನ್ನುವ ಒತ್ತಾಯವನ್ನು ಮಾಡಿ ಅವರಿಂದ ಹಣವನ್ನು ತರಬೇಕು.

**Sri H. SIDDAVEERAPPA.**—Have the Government of India said that they are not going to help you? Is your Government active and alive to this situation? What is the scheme you have given?

**Sri D. M. SIDDIAH.**—We have given Rs. 20 crores scheme.

**Sri H. SIDDAVEERAPPA.**—How can they assess your requirements unless you give a definite scheme and unless you ask for a definite amount? It is not enough if you simply forward a scheme for Rs. 20 crores. What is the amount they have to give?

ಶ್ರೀ ಡಿ. ಎಂ. ಸಿದ್ದಯ್ಯ.—ಮೂರು ನಾಲ್ಕು ವರ್ಷಗಳಿಗೆ ಹಿಂದೆ ನಮ್ಮ ಸರ್ಕಾರದವರು ಶಾಶ್ವತವಾದ ಕ್ಷಾಮನಿವಾರಣೆ ಕಾರ್ಯಗಳಿಗೋಸ್ಕರ 20 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಹೀಗೆ ಕಳುಹಿಸಿದಮೇಲೆ, ಹಾಗೆಯೇ ಅದನ್ನು ಇಟ್ಟುಕೊಂಡಿರಿ, ಹಣ ಕೊಡಬೇಡಿ ಎಂದು ಹೇಳಿಲ್ಲ. ನಮ್ಮ ಸರ್ಕಾರದವರು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದಾರೆ, ಹಣ ಕೊಡಿ, ಯೋಜನೆಯನ್ನು ಮಂಜೂರು ಮಾಡಿ ಎಂದು. ಮಾನ್ಯ ರೆವಿನ್ಯೂ ಸಚಿವರು ಉತ್ತರ ಕೊಡುವಾಗ ಈ ಸಮಸ್ಯೆಗೂ ಉತ್ತರ ಹೇಳುತ್ತಾರೆಂದು ನಾನು ನಂಬಿಕೊಂಡಿದ್ದೇನೆ. ಮಾನ್ಯ ಸಿದ್ದವೀರಪ್ಪನವರು ಕೇಂದ್ರ ಸರ್ಕಾರದಮೇಲೆ ತಮ್ಮ ಪ್ರಭಾವವನ್ನು ಬೀರಿ ಹಣವನ್ನು ಒದಗಿಸಿ ಕೊಟ್ಟರೆ ಮೈಸೂರಿನ ಜನರು ಮತ್ತು ಸರ್ಕಾರದವರು ಅವರಿಗೆ ಚಿರಋಣಿಯಾಗಿರುತ್ತಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಕ್ಷಾಮಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಹಣವನ್ನು ಕೊಡತಕ್ಕ ವ್ಯವಸ್ಥೆಯನ್ನು ಹಿಂದೆ ಮಾಡಿದ್ದರು. ಆದರೆ ಕೆಲವು ತಾಲ್ಲೂಕುಗಳಲ್ಲಿ ಈ ಇಲಾಖೆಗೆ ಹಣವನ್ನು ಮಂಜೂರು ಮಾಡಿಲ್ಲ. ಮಳೆ ಬಿದ್ದಿರತಕ್ಕ ಸ್ಥಳಗಳಲ್ಲಿ ಕೆಲವು ಕೆಲಸಗಳನ್ನು ತೆಗೆದುಕೊಳ್ಳಲು ಅನುಕೂಲವಾಗಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಹಣವನ್ನು ಕೊಟ್ಟರೆ ಅದರಿಂದ ಅವರು ಕೆಲಸ ಮಾಡಿಸುವುದಕ್ಕೆ ಸಹಾಯವಾಗುವುದಲ್ಲದೆ ಸಹಸ್ರಾರು ಜನಗಳಿಗೂ ಅನುಕೂಲವಾಗುತ್ತದೆ. ಈ ಕೆಲಸವನ್ನು ಕೂಡ ಮಾಡಬೇಕು.

ಇದರ ಜೊತೆಗೆ ಇನ್ನೊಂದು ಪ್ರಾಮುಖ್ಯವಾದ ಸಮಸ್ಯೆ ಏನೆಂದರೆ ಪದೇ ಪದೇ ನಮ್ಮ ರಾಜ್ಯದಲ್ಲಿ ಕ್ಷಾಮ ಕಾಲಿಡುತ್ತಿರುವಾಗ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದಿಂದ ಹಣವನ್ನು ಪಡೆಯುವುದರ ಜೊತೆಗೆ ನಾವು ನಮ್ಮ ಕಾಲಮೇಲೆ ನಿಂತುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಪರಾವಲಂಬನೆಯಿಂದ, ಭಿಕ್ಷಾಟನೆಯಿಂದ ನಾವು ನಮ್ಮ ರಾಜ್ಯವನ್ನು ಕಟ್ಟುವುದಕ್ಕಾಗುವುದಿಲ್ಲ. ಸಣ್ಣ ನೀರಾವರಿ ಕೆಲಸಕಾರ್ಯಗಳನ್ನು

ತ್ವರಿತಗತಿಯಿಂದ ಆದಷ್ಟು ಜಾಗ್ರತೆ ಮುಗಿಸುವುದಾದರೆ ಬಹುಮಟ್ಟಿಗೆ ಪರಿಹಾರ ಸಾಧ್ಯವಾಗುತ್ತದೆ. ಮಧ್ಯಮ ನೀರಾವರಿ ಮತ್ತು ದೊಡ್ಡ ದೊಡ್ಡ ನೀರಾವರಿಗಳನ್ನು ಆಂಧ್ರ ಮತ್ತು ಮದ್ರಾಸ್ ರಾಜ್ಯಗಳು ಮಾಡಿದ ಹಾಗೆ ನಾವೇ ಸಾಲವನ್ನು ಎತ್ತಿ ಅಥವಾ ನಮ್ಮ ಅನೇಕ ಬಾಬುಗಳಲ್ಲಿ ಹಣ ಖರ್ಚು ಮಾಡುವುದನ್ನು, ಉದಾಹರಣೆಗೆ ರಸ್ತೆಗಳಿಗೆ, ಕಟ್ಟಡಗಳ ಮೇಲೆ, ಸೇತುವೆಗಳಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡುವುದನ್ನು ಕೆಲವು ವರ್ಷಗಳ ತನಕ ನಿಲ್ಲಿಸಿ ದೊಡ್ಡ ನೀರಾವರಿಗಳು, ಮಧ್ಯಮ ನೀರಾವರಿಗಳು ಸಣ್ಣ ನೀರಾವರಿಗಳು ಇವುಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡುವುದಾದರೆ ಬಹುಶಃ ಕ್ಷಾಮ ಸಮಸ್ಯೆ ನಮ್ಮ ರಾಜ್ಯದಲ್ಲಿ ಉದ್ಭವಿಸುವುದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

[MR. DEPUTY SPEAKER in the Chair]

ಉದಾಹರಣೆಗೆ ಕಾವೇರಿ ನದಿಗೆ ಸಂಬಂಧಪಟ್ಟಂತೆ ದೊಡ್ಡವು, ಸಣ್ಣವು ಮತ್ತು ಮಧ್ಯಮ ತರಗತಿ ಪ್ರಾಜೆಕ್ಟುಗಳಿವೆ. ಇವುಗಳನ್ನು ನಾವು ಬೇಗ ಮುಗಿಸಲು ಕ್ರಮ ತೆಗೆದುಕೊಂಡರೆ ಈ ಪ್ರಾಂತ್ಯದಲ್ಲಿ ಕ್ಷಾಮದ ಸಮಸ್ಯೆ ಪರಿಹಾರವಾಗುವುದು. ಮೈಸೂರು ಜಿಲ್ಲೆಗೆ ಸಂಬಂಧಪಟ್ಟಂತೆ ರುವ ಕಪಿನಿ ಜಲಾಶಯದಿಂದ ಒಂದು ಲಕ್ಷ 20 ಸಾವಿರ ಎಕರೆ ನೀರಾವರಿಯಾಗುವುದು, ಆದರಿಂದ ಮೈಸೂರು ಜಿಲ್ಲೆಯ ಒಂದು ಭಾಗಕ್ಕೆ ಪೂರ್ಣವಾಗಿ ನೀರಾವರಿ ಸೌಕರ್ಯ ದೊರೆಯುವುದು. ಹೇಮಾವತಿ ಮತ್ತು ಹಾರಂಗಿ ಪ್ರಾಜೆಕ್ಟುಗಳ ಕೆಲಸ ಮುಗಿಸಿದರೆ ಮೈಸೂರು ಮತ್ತು ಹಾಸನ ಜಿಲ್ಲೆಗಳ ಅಭಾವ ಪರಿಸ್ಥಿತಿಯನ್ನು ಬಹುಶಃ ಸಂಪೂರ್ಣವಾಗಿ ನಿವಾರಣೆ ಮಾಡಬಹುದು. ಕೃಷ್ಣ ನೀರಿನಿಂದ ನಾಗಾರ್ಜುನಸಾಗರ ಯೋಜನೆ ಕಟ್ಟಿ ಇಂದು ಆಂಧ್ರದಲ್ಲಿ 30 ಲಕ್ಷ ಎಕರೆಗಳ ನೀರಾವರಿಗೆ ಅವಕಾಶವಾಗಿದೆ, ಈಗಾಗಲೆ 8–10 ಲಕ್ಷ ಎಕರೆ ನೀರಾವರಿ ಬಂದಿದೆ, ಈ ಪ್ರಾಜೆಕ್ಟಿಗೆ 130 ಕೋಟಿ ರೂಪಾಯಿ ಖರ್ಚುಮಾಡಿ ಹತ್ತು ವರ್ಷಗಳಲ್ಲಿ ಕೆಲಸ ಮುಗಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಕೃಷ್ಣ ಪ್ರಾಜೆಕ್ಟ್ ಇದೆ, ಅದನ್ನು ಪೂರ್ಣಮಾಡಿದರೆ 20 ಲಕ್ಷ ಎಕರೆ ನೀರಾವರಿ ಆಗಿ, ಇಂಟಿಗ್ರೇಟೆಡ್ ಏರಿಯಾದ ಬಹು ಭಾಗಗಳಿಗೆ ನೀರಿನ ಸೌಕರ್ಯವೊದಗುವುದು. ತುಂಗಭದ್ರ ಜಲಾಶಯವಾದಮೇಲೆ ನಮ್ಮ ರಾಜ್ಯದಲ್ಲಿ 6 ಲಕ್ಷ ಎಕರೆ ನೀರಾವರಿಗೆ ಅವಕಾಶವಾಗಿದೆ. ರೈತರು ಆ ಪ್ರದೇಶದಲ್ಲಿ ಮುಂದೆ ಬಂದು ವ್ಯವಸಾಯ ಮಾಡುತ್ತಿದ್ದಾರೆ, ಆ ಕಡೆ ಕ್ಷಾಮ ಇಲ್ಲ. ಕ್ಷಾಮ ಬಂದಾಗ 4 ಕೋಟಿ ಖರ್ಚುಮಾಡಿದರೆ ಸಾಲದು, ಈ ಅಭಾವ ಸಮಸ್ಯೆ ಬಗೆಹರಿಯುವುದಿಲ್ಲ. ಕೇಂದ್ರ ಸರಕಾರ ವಿಶೇಷ ಪರಿಹಾರ ನೀಡಿದರೂ ಕೂಡ ಜನರಿಗೆ ಅನುಕೂಲವಾಗುವುದಿಲ್ಲ. ಮುಖ್ಯವಾಗಿ ನೀರಾವರಿಗೆ ಕೊಟ್ಟಿರುವ ಹಣವನ್ನು ಬೇಗ ಖರ್ಚುಮಾಡಿ ಅದರಿಂದ ರೈತರಿಗೆ ಉಪಯೋಗವಾಗುವಂತೆ ಮಾಡಬೇಕು, ಕೊಟ್ಟ ಹಣವನ್ನು ಉಳಿತಾಯಮಾಡಿದರೆ, ಡೆಡ್ ಕ್ಯಾಪಿಟಲ್ ಮಾಡಿದರೆ ಆದರಿಂದ ಫಲ ದೊರೆಯುವುದಿಲ್ಲ. ಒದಗಿಸಿದ ಹಣವನ್ನು ತ್ವರಿತವಾಗಿ ವಿನಿಯೋಗಿಸಬೇಕು, ಸಾಲ ತೆಗೆದುಕೊಂಡು, ಕೇಂದ್ರ ಸರಕಾರದಿಂದ ಒತ್ತಾಯಮಾಡಿ ಸಹಾಯ ಪಡೆದು, ಇರುವ ಯೋಜನೆ ಕೆಲಸಗಳನ್ನು ತ್ವರಿತವಾಗಿ ಕೈಗೊಂಡು ಸರ್ವತೋಮುಖವಾಗಿ ಇರುವ ಸಮಸ್ಯೆಯನ್ನು ಬಗೆಹರಿಸಬೇಕೇ ಹೊರತು, ಕೇವಲ ಕ್ಷಾಮ ತಲೆದೋರಿದಾಗ ಮಾತ್ರ ಪರಿಹಾರ ಕಾರ್ಯಗಳನ್ನು ಕೈಗೊಂಡರೆ ಸಾಲದು. ಇದರಿಂದ ಇರುವ ಸಮಸ್ಯೆ ಬಗೆಹರಿಯುವುದಿಲ್ಲ ಎಂಬುದು ನನ್ನ ಖಚಿತವಾದ ಅಭಿಪ್ರಾಯ ಎಂದು ತಮ್ಮ ಮೂಲಕ ಸರಕಾರಕ್ಕೆ ನಿವೇದಿಸಿಕೊಳ್ಳಲು ಇಚ್ಛಿಸುತ್ತೇನೆ. ಈ ಸಮಸ್ಯೆ ವರ್ಷೇ ವರ್ಷೇ ಈ ಸಭೆಯ ಮುಂದೆ ಬಂದು ನಾವು ಸಲಹೆಗಳನ್ನು ನೀಡುತ್ತಲೇ ಇದ್ದೇವೆ. ಪ್ರತಿಯೊಬ್ಬರ ಕ್ಷೇತ್ರದಲ್ಲೂ ಅಭಾವದ ಪರಿಣಾಮವುಂಟಾಗಿದೆ, ಜನತೆಗೆ ಕಷ್ಟವಾಗಿದೆ. ಆದುದರಿಂದ ವರ್ಷೇ ವರ್ಷ ಈಗ ಹೇಳುತ್ತಿರುವ ವಿಚಾರಗಳನ್ನು ಹೇಳುತ್ತಲೇ ಇದ್ದೇವೆ. ಇಂಥ ದುರಂತಕ್ಕೆ ಅವಕಾಶ ಇರಬಾರದು. ಸ್ವಾತಂತ್ರ್ಯ ಬಂದು 23 ವರ್ಷವಾಯಿತು, ಕ್ಷಾಮ ಬಂದಾಗ ಕಾರ್ಯಕ್ರಮ ತೆಗೆದುಕೊಳ್ಳುವುದು ಸರಿಯಲ್ಲ, ಕ್ಷಾಮ ಬಾರದಂತೆ ಶಾಶ್ವತವಾದ ಕಾರ್ಯಕ್ರಮ ಕೈಗೊಳ್ಳಬೇಕು, ಹಾಗೆ ಮಾಡುವವರೆಗೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಹೊರದೇಶಗಳಿಂದ ಆಹಾರ ಧಾನ್ಯಗಳನ್ನು ತರುವುದು ತಪ್ಪಿಲ್ಲ, ಇದಕ್ಕೆ ಅವಕಾಶವಿರಬಾರದು. ಈ ದಿವಸದಿಂದಲೇ ಶಾಶ್ವತವಾದ ಪರಿಹಾರ ಯೋಜನೆಗಳನ್ನು ಕೈಕೊಂಡು ಬಾಕಿ ಇರುವ ನೀರಾವರಿ ಕೆಲಸಕಾರ್ಯಗಳನ್ನು ಆದಷ್ಟು ತ್ವರಿತವಾಗಿ ಪೂರ್ಣಮಾಡಬೇಕು. ಹಾಗೆ ಮಾಡಿದರೆ ಮಾತ್ರ ಈ ಸಮಸ್ಯೆ ಕ್ಷಾಮ ನಿವಾರಣೆಯಾಗುವುದು. ಇಲ್ಲದಿದ್ದರೆ ಆಗುವುದಿಲ್ಲ.

ಕೊನೆಯದಾಗಿ ಈಗ ಒದಗಿಸಿರುವ ಹಣವನ್ನು ಮತ್ತು ಮುಂದೆ ಒದಗಿಸುವುದನ್ನು ಸರಿಯಾಗಿ ವಿನಿಯೋಗಮಾಡಬೇಕು, ಹಾಗೆ ಮಾಡಲು ಸರಿಯಾದ ಸಿಬ್ಬಂದಿ ನೇಮಕ ಮಾಡಬೇಕು. ಅನೇಕ ಸಂದರ್ಭಗಳಲ್ಲಿ ಹಣ ದುರ್ವಿನಿಯೋಗವಾಗುವುದು ಕಂಡುಬಂದಿದೆ. ಅದಕ್ಕೆ ಅವಕಾಶ ಇಲ್ಲದಂತೆ

(ಶ್ರೀ ಡಿ. ಎಂ. ಸಿದ್ದಯ್ಯ)

ಸರಿಯಾಗಿ ತನಿಖೆಮಾಡಬೇಕು. ಒಂದೇ ಕೆಲಸಕ್ಕೆ ಎರಡು ಮೂರು ಸಲ ಬಿಲ್ ಮಾಡುವುದು, ಕೆಲಸ ಸಾಕಷ್ಟಿಲ್ಲದಿರುವ ಕಡೆಗೆ ಹೆಚ್ಚು ಹಣ ಒದಗಿಸುವುದು ಮುಂತಾದುವು ನಡೆದಿರುವ ಉದಾಹರಣೆಗಳಿವೆ. ಹಣ ದುರುಪಯೋಗವಾಗುವುದು ನಮ್ಮ ಗಮನಕ್ಕೆ ಬಂದಿದೆ. ಭಿಕ್ಷುಕರಿಗೆ ಕೊಡುವ ಹಣ ಕೂಡ ದುರುಪಯೋಗವಾಗಿರುವಂಥ ಸಂದರ್ಭವಿರುವಾಗ ಇದಕ್ಕೆ ಅವಕಾಶವಿಲ್ಲದಂತೆ ತಕ್ಕ ಬಂದೋಬಸ್ತು ಮಾಡಬೇಕು. ಅಧಿಕಾರಿಗಳಾಗಲಿ, ಖಾಸಗಿಯವರಾಗಲಿ ಯಾರೇ ಆದರೂ ನಮ್ಮ ರಾಜ್ಯದಲ್ಲಿ ಕ್ಷಾಮ ನಿವಾರಣೆಗಾಗಿ ಒದಗಿಸುವ ಹಣ ದುರ್ವಿನಿಯೋಗವಾಗದಂತೆ ನೋಡಿಕೊಳ್ಳಬೇಕು. ದುರ್ವಿನಿಯೋಗವಾಗಿರುವ ಸಂದರ್ಭಗಳು ಅನೇಕ ಇವೆ, ಮುಂದೆ ಅದಕ್ಕೆ ಅವಕಾಶ ಕೊಡಬಾರದು. ನಿಜವಾಗಿ ಯಾರಿಗೆ ಹೊಟ್ಟೆಗೆ ಅನ್ನವಿಲ್ಲವೋ ಅವರಿಗೆ ಕೊಡುವ ಪರಿಹಾರ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಈ ಸಮಸ್ಯೆ ಮುಂದೆ ತಲೆದೋರದಹಾಗೆ ಶಾಶ್ವತವಾದ ಪರಿಹಾರ ಕಂಡುಹಿಡಿದು ಅದನ್ನು ಕಾರ್ಯ ರೂಪಕ್ಕೆ ತರಬೇಕು. ಇದಕ್ಕಿಂತ ಪವಿತ್ರವಾದ ಕಾರ್ಯ ಬೇರೊಂದಿಲ್ಲ, ಅಲ್ಲದೆ ಈಗ ರೆವೆನ್ಯೂ ಇಲಾಖೆಯಲ್ಲಿ ಹೆಚ್ಚಿನ ಕಾರ್ಯಭಾರ ಕೂಡ ಇಲ, ಅನೇಕ ಡೆವಲಪ್‌ಮೆಂಟಲ್ ವರ್ಕ್ಸ್‌ನ್ನು ಈಗ ಬೇರೆ ಬೇರೆ ಇಲಾಖೆಗಳಿಗೆ ವಹಿಸಲಾಗಿದೆ. ಇದರಿಂದ ಮಂತ್ರಿಗಳಿಗೆ ಹೆಚ್ಚು ಕಾಲವನ್ನು ಈ ಸಮಸ್ಯೆಯ ಪರಿಹಾರಕ್ಕೆ ವಿನಿಯೋಗಿಸಲು ಅವಕಾಶವಾಗಿದೆ. ಆದುದರಿಂದ ಅವರು ರಾಜ್ಯದಲ್ಲಿ ಈ ಅಭಾವ ಸಮಸ್ಯೆ, ಕ್ಷಾಮ ಮುಂದೆ ತಲೆದೋರದಂತೆ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ರಾಜ್ಯದ ಎಲ್ಲ ಭಾಗಗಳಲ್ಲೂ ಕೈಕೊಳ್ಳಬೇಕು ಎಂದು ರೆವಿನ್ಯೂ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ಸಮಸ್ಯೆ ಬಹಳ ಕಠಿಣವಾಗಿರುವುದರಿಂದ ಆದಷ್ಟು ಜಾಗ್ರತೆ ಅಧಿಕಾರಿಗಳಿಗೆ ಕೊಟ್ಟಿರುವ ಹಣವನ್ನು ನಿಧಾನಮಾಡದಂತೆ ಹಂಚುವಂತೆ ತಿಳಿಸಬೇಕು, ಮಾನ್ಯ ಮಂತ್ರಿಗಳು ಪ್ರವಾಸ ಬೇಕಾದರೆ ಮಾಡಿ ಕೊಟ್ಟಿರುವ ಹಣವೆಷ್ಟು ವಿನಿಯೋಗವಾಗಿದೆ, ಕೆಲಸ ಸರಿಯಾಗಿ ನಡೆದಿದೆಯೆ ಎಂದು ನೋಡಿಕೊಂಡರೆ ಜನರಿಗೆ ಹೆಚ್ಚು ಅನುಕೂಲವಾಗುವುದು. ಇರುವ ಪರಿಸ್ಥಿತಿಯನ್ನು ಕೇಂದ್ರ ಸರಕಾರಕ್ಕೆ ಮನವರಿಕೆಯಾಗುವಂತೆ ತಿಳಿಸಿ ಒತ್ತಾಯಮಾಡಿ 20 ಕೋಟಿ ರೂಪಾಯಿಗಳ ಯೋಜನೆಗೆ ಮಂಜೂರಾತಿ ಪಡೆಯಬೇಕು. ಈಗ ಕಾವೇರಿ ನೀರಿನ ಬಗ್ಗೆ ಚರ್ಚೆ ನಡೆಸಲು ಮುಖ್ಯ ಮಂತ್ರಿಗಳು ಮತ್ತು ಶ್ರೀ ರಾಚಯ್ಯನವರು ದೆಹಲಿಗೆ ಹೋಗಿದ್ದಾರೆ, ಕೇಂದ್ರದೊಡನೆ ಮಾತನಾಡಿ ನಾವು ಕಳಿಸಿರುವ ಯೋಜನೆಗೆ ಮಂಜೂರಾತಿ ಪಡೆಯಲು ಅವರು ಪ್ರಯತ್ನಪಡಬೇಕು. ಹಾಗೆ ಮಾಡಿ ಮುಂದೆ ಕ್ಷಾಮ ತಲೆದೋರದಂತೆ ಜಾಗ್ರತೆ ಶಾಶ್ವತವಾದ ಕಾರ್ಯಕ್ರಮ ಕೈಕೊಳ್ಳಬೇಕು ಎಂದು ಸೂಚಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಈ ವಿಷಯ ಆಗಾಗ್ಯೆ ಪ್ರಸ್ತಾಪಕ್ಕೆ ಬರುತ್ತಿದೆ, ಕಳೆದ ಆರು ವರ್ಷಗಳಿಂದ ಪ್ರತಿ ವರ್ಷ ಚರ್ಚೆಯಾಗುತ್ತಿದೆ, ಅನೇಕ ಸಲಹೆಗಳನ್ನು ಕೊಡಲಾಗುತ್ತಿದೆ, ಸರಕಾರ ಕೆಲವು ಕಾರ್ಯಕ್ರಮಗಳನ್ನು ಮಾಮೂಲಿನಂತೆ ಕೈಕೊಳ್ಳುತ್ತಿದೆ. ಆದರೆ ಅದರಿಂದ ಸಾಕಷ್ಟು ಸಹಾಯವಾಗುತ್ತಿಲ್ಲ. ಇಂದು ಹಣ ಕೊಟ್ಟರೂ ಎಲ್ಲಿ ಯಾವ ಪರಿಸ್ಥಿತಿಯಿದೆ ಅದನ್ನು ನೋಡಿ ಅದಕ್ಕನುಗುಣವಾಗಿ ಹಣ ಕೊಡುತ್ತಿಲ್ಲ ಎಂದು ಹೇಳಬಹುದು. ಅಷ್ಟೇ ಅಲ್ಲ, ಅಧಿಕಾರಿಗಳಿಗೆ ಜನರಿಗಿರುವ ತೊಂದರೆಯ ತೀವ್ರತೆಯ ಬಗ್ಗೆ ಸಾಕಷ್ಟು ಗಮನಕೊಡಬೇಕೆಂಬ ಆಸಕ್ತಿಯಿಲ್ಲ. ಮಾನ್ಯ ಶಿವಪ್ಪನವರು ಮತ್ತಿತರರು ಈಗಾಗಲೆ ಅನೇಕ ಸಲಹೆಗಳನ್ನು ಈ ಬಗ್ಗೆ ಕೊಟ್ಟಿದ್ದಾರೆ. ಇನ್ನು ಹೊಸದೇನೂ ಸಲಹೆ ಇಲ್ಲ ಎಂದು ನಾನು ಭಾವಿಸುತ್ತೇನೆ. ಇದರಲ್ಲಿ ತಾತ್ಕಾಲಿಕವಾದ ಪರಿಹಾರ ಕಾರ್ಯಕ್ರಮ ಮತ್ತು ವಿಶೇಷ ಪರಿಹಾರ ಕಾರ್ಯಕ್ರಮ ಎಂದು ಎರಡು ವಿಧವಾಗಿ ವಿಂಗಡಿಸಬೇಕು. ತಾತ್ಕಾಲಿಕ ಪರಿಹಾರ ಕಾರ್ಯಕ್ರಮ ಯಾವುದೆಂದರೆ ಒಂದು ಪ್ರದೇಶದಲ್ಲ ಅಭಾವ ಪರಿಸ್ಥಿತಿ ಉಂಟಾಗಿ ಮಳೆಯಿಲ್ಲದೆ ಇದ್ದರೆ ಆ ವಿಚಾರ ತಿಳಿದಕೂಡಲೆ ಅಲ್ಲಿ ಕಂದಾಯ ವಜಾಮಾಡುವುದು ಮುಖ್ಯವಾದುದು. ತುಮಕೂರು ಜಿಲ್ಲೆಯಲ್ಲ ಕಳೆದ ಆರು ವರ್ಷಗಳಲ್ಲಿ 5 ವರ್ಷ ಅಭಾವ ಉಂಟಾಗಿದೆ, ಇದನ್ನು ಇಲ್ಲಿಯವರಿಗೆ ಅನೇಕ ಸಲ ಹೇಳಿದರೂ ಯಾವಯಾವ ಪ್ರದೇಶದಲ್ಲಿ ಎಷ್ಟೆಷ್ಟು ಕಂದಾಯ ವಜಾಮಾಡಲಾಗಿದೆ ಎಂಬುದನ್ನು ಸರ್ಕಾರದವರು ತಿಳಿಸಿರಲಿಲ್ಲ. ಮೊನ್ನೆ ರೆವೆನ್ಯೂ ಸಚಿವರು ತುಮಕೂರು ಜಿಲ್ಲೆಯಲ್ಲಿ ಪ್ರವಾಸಮಾಡುವಾಗ ಇಂಥ ತಾಲ್ಲೂಕುಗಳಲ್ಲಿ ಮುಂದೆ ಕಂದಾಯ ವಸೂಲು ಮಾಡಬಾರದು, ಇಂಥ ತಾಲ್ಲೂಕುಗಳಲ್ಲಿ ಕಂದಾಯ ವಜಾಮಾಡಿದೆ ಎಂದು ಪ್ರಥಮತಃ ತಿಳಿಸಿದರು. ಅಲ್ಲಿಯವರೆಗೆ ಜಿಲ್ಲಾಧಿಕಾರಿಗಳಿಗಾಗಲಿ ಅಥವ ರೆವೆನ್ಯೂ ಅಧಿಕಾರಿಗಳಿಗಾಗಲಿ ಅಭಾವವಿರುವ ಇಂಥ ಪ್ರದೇಶಗಳಲ್ಲಿ ಕಂದಾಯ ವಜಾಮಾಡಿದೆ ಎಂದು

ತಿಳಿಸಿರಲಿಲ್ಲ. ಈಗ ಅಂಥ ಅನೇಕ ಕಡೆಗಳಲ್ಲಿ ಲಕ್ಷಾಂತರ ರೂಪಾಯಿಗಳ ಕಂದಾಯ ಮತ್ತು ವಾಟರ್ ರೇಟ್ ವಸೂಲಾಗಿದೆ, ಅಂಥ ಕಡೆ ಜನರು ತೊಂದರೆಯಲ್ಲಿರುವಾಗ ಅಧಿಕಾರಿಗಳು ಸರಿಯಾಗಿ ತಮ್ಮ ಕರ್ತವ್ಯ ನಿರ್ವಹಿಸಿಲ್ಲ, ಜನರು ಕಷ್ಟದಲ್ಲಿರುವಾಗ ತೊಂದರೆಮಾಡಿ ವಸೂಲುಮಾಡಿದ್ದಾರೆ. ಇದರಿಂದ ಅವರ ಮನೋಭಾವನೆ ಎಷ್ಟುಮಟ್ಟಿಗಿದೆಯೆಂಬುದನ್ನು ಯೋಚಿಸಬಹುದು. ಮಾನ್ಯ ಗಂಗಾಧರ್‌ರವರು ಮೊನ್ನೆ ಒಂದು ಪ್ರಶ್ನೆ ಹಾಕಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಕಂದಾಯ ವಸೂಲಾಗಿದೆ ಎಂದು ಕೇಳಿದ್ದರು. ಅದಕ್ಕೆ ಕೊಟ್ಟ ಉತ್ತರ ನೋಡಿದರೆ ಸರಕಾರದವರು ಎಷ್ಟು ಮಟ್ಟಿಗೆ ಅಲ್ಲಿನ ಜನರ ಕಷ್ಟದ ಕಡೆಗೆ ಗಮನಹರಿಸಿದ್ದಾರೆ ಎಂಬುದು ಗೊತ್ತಾಗುವುದು. ರೆವಿನ್ಯೂ ಮಿನಿಸ್ಟರು ತಮ್ಮ ಪ್ರವಾಸ ಕಾಲದಲ್ಲಿ ಅಧಿಕಾರಿಗಳಿಗೆ ಕೆಲವು ಸಲಹೆಗಳನ್ನು ಕೊಟ್ಟರು, ತಾತ್ಕಾಲಿಕ ಕಾರ್ಯಕ್ರಮಗಳಲ್ಲಿ ರಸ್ತೆಗಳನ್ನು ಮಾಡುವುದು, ಸಣ್ಣ ಸಣ್ಣ ನೀರಾವರಿ ಕಾಂಗಾರಿಗಳನ್ನು ತೆಗೆದುಕೊಳ್ಳುವುದು, ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವುದು. ಈ ಕಾರ್ಯಕ್ರಮಗಳನ್ನು ನೀವು ತೆಗೆದುಕೊಂಡರೂ, ಶ್ರೀಮಾನ್ ಶಿವಪ್ಪನವರು ಹೇಳಿದರಲ್ಲಾ, ಯಾರೋ ಕೆಲವರು ಕಂಟ್ರಾಕ್ಟುದಾರರುಗಳಿಗೆ ಕೆಲಸ ಒದಗಿಸಿ ಕೊಡುವುದಕ್ಕೆ ಈ ಕೆಲಸಗಳು ಪ್ರಾರಂಭವಾಗುತ್ತವೆಯೋ ಏನೋ ಅನ್ನುವ ಹಾಗೆ ಇದೆ. ನಾನು ಕೆಲವು ಕೆಲಸಗಳು ನಡೆಯುತ್ತಾ ಇರತಕ್ಕ ಪ್ರದೇಶಕ್ಕೆ ಹೋಗಿ ನೋಡಿ ಬಂದಿದ್ದೇನೆ. ಅಲ್ಲಿ 10-15 ಮೈಲಿ ದೂರದಿಂದ ಕಂಟ್ರಾಕ್ಟರುದಾರರನ್ನು ಕರೆದುಕೊಂಡು ಬಂದು ಆ ಕೆಲಸ ಮಾಡಿಸುತ್ತಾರೆ. ಅದಕ್ಕೆ ಬದಲಾಗಿ ವಿಲೇಜ್ ಪಂಚಾಯ್ತಿ ಛೇರ್ಮನ್‌ರು ಇದ್ದಾರೆ, ಸದಸ್ಯರು ಇದ್ದಾರೆ. ಆಯಾ ಪ್ರದೇಶದಲ್ಲಿ ಏನು ಕೆಲಸ ಅತ್ಯವಶ್ಯಕವಾಗಿ ಆಗಬೇಕೋ ಅವುಗಳನ್ನು ಆಯಾಯಾ ಪಂಚಾಯ್ತಿಗಳ ಮುಖಾಂತರವೇ ಮಾಡಿಸುವುದಕ್ಕೆ ಏಕೆ ಏರ್ಪಾಡು ಮಾಡಬಾರದಾಗಿತ್ತು ? ಅದಕ್ಕೆ ಬದಲಾಗಿ ಯಾರಿಗೋ ಸಹಾಯವಾಗುವ ರೀತಿಯಲ್ಲಿ ಆ ಕೆಲಸಗಳನ್ನು ತೆಗೆದುಕೊಂಡರೆ ಅದರಿಂದ ಜನರಿಗೆ ಅನುಕೂಲವಾಗುವುದಿಲ್ಲ. ಮತ್ತು ಹಣವೂ ಕೂಡ ದುರುಪಯೋಗವಾಗುತ್ತದೆ ಎಂದು ಈ ಹಿಂದಿನ ಅನುಭವದಿಂದ ಹೇಳಬಹುದು. ಆದ್ದರಿಂದ ಮಾನ್ಯ ರೆವಿನ್ಯೂ ಸಚಿವರು ಈ ತಾತ್ಕಾಲಿಕ ಕಾರ್ಯಕ್ರಮಗಳೆಲ್ಲವನ್ನೂ ಸಂಬಂಧಪಟ್ಟ ಪಂಚಾಯ್ತಿ ಮುಖಾಂತರವೇ ನಡೆಸಬೇಕೆಂದು ಆದೇಶ ಕೊಟ್ಟರೆ, ಹಣ ದುರುಪಯೋಗವಾಗುವುದು ಕಡಿಮೆಯಾಗುತ್ತದೆ ಮತ್ತು ಅಲ್ಲಿ ಆಗಬೇಕಾದ ಕೆಲಸಕ್ಕೆ ಹೆಚ್ಚು ಗಮನಕೊಟ್ಟರೆ ಆ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ಸಲಹೆ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ.

3-30 P. M.

ಸರ್ಕಾರದವರು ಕೊಟ್ಟಿರತಕ್ಕ ಪುಸ್ತಕದಲ್ಲಿ 58 ತಾಲ್ಲೂಕುಗಳಲ್ಲಿ ಈ ವರ್ಷ ಅಭಾವ ಪರಿಸ್ಥಿತಿಯುಂಟಾಗಿದೆ ಎಂದು ತಿಳಿಸಿದ್ದಾರೆ. 10-15-20 ಲಕ್ಷ ರೂಪಾಯಿ ಖರ್ಚಾಗಬೇಕಾಗಿರುವ ಕಡೆ ಒಂದು, ಎರಡು ಲಕ್ಷ ರೂಪಾಯಿ ಕೂಡ ಖರ್ಚಾಗುವುದಿಲ್ಲ. ಇದಕ್ಕೆ ಕಾರಣವೇನು ? ಶ್ರೀಮಾನ್ ಸಿದ್ದಯ್ಯನವರು ಹೇಳಿದ ಹಾಗೆ ಕ್ಷಾಮಬಂದಮೇಲೆ ಕೆಲಸ ಪ್ರಾರಂಭವಾಗುವುದಕ್ಕೆ 2-3 ತಿಂಗಳು ಆಗುತ್ತದೆ. ಕೆಲಸ ಪ್ರಾರಂಭವಾದ ಮೇಲೆ ಮಳೆ ಬಂದರೆ, ಕೂಡಲೇ ಕೆಲಸ ನಿಂತು ಹೋಗುತ್ತದೆ. ಆದ್ದರಿಂದ ಈ ತಾತ್ಕಾಲಿಕ ಕಾರ್ಯಕ್ರಮದಿಂದ ತಾವು ಯಾವ ಒಂದು ಗುರಿಯನ್ನೂ ಕೂಡ ಮುಟ್ಟುವುದಕ್ಕೆ ಆಗುವುದಿಲ್ಲ, ಜನರಿಗೆ ಕೆಲಸ ಒದಗಿಸುವುದಕ್ಕೆ ಮಾತ್ರ ಆಗುತ್ತದೆ ಎಂದು ನಮ್ಮ ಅನುಭವದಿಂದ ಗೊತ್ತಾಗುತ್ತದೆ. ಅದಕ್ಕೆ ಈ ವರ್ಷದ ಒಂದು ಉದಾಹರಣೆಯನ್ನು ತಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಈಗ ಕೆಲಸ ಪ್ರಾರಂಭವಾಗಿದೆ, ಪ್ರಾರಂಭವಾದ ಕೂಡಲೇ ಮಳೆ ಬಂತು, ಕೆರೆಗಳು ತುಂಬಿದರೂ ಕೂಡ ಬೆಳೆ ಇಡುವುದಕ್ಕೆ ಆಗುವುದಿಲ್ಲ. ಬೇರೆ ಕೆಲಸ ಮಾಡುವ ಸ್ಥಿತಿಯಲ್ಲಿ ಅವರು ಇರುವುದಿಲ್ಲ. ಆದ್ದರಿಂದ ಅವರಿಗೆ ಹಣ ಒದಗಿಸಿ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವುದನ್ನು ಕಡ್ಡಾಯವಾಗಿ ತಿಳಿಸಬೇಕು. ಉದಾಹರಣೆಗೆ ಕುಣಿಗಲ್ ತಾಲ್ಲೂಕಿನ ಎರಡೂವರೆ ಹೋಬಳಿಯಲ್ಲಿ ಬಹಳ ತೊಂದರೆಯಾಗಿದೆ, ರಾಗಿಯನ್ನು ಬಿತ್ತನೆ ಮಾಡಿಲ್ಲ. ಕುಣಿಗಲ್ ತಾಲ್ಲೂಕು, ನಾಗಮಂಗಲ ತಾಲ್ಲೂಕು, ಚನ್ನರಾಯಪಟ್ಟಣ, ಮಂಡ್ಯ ಡಿಸ್ಟ್ರಿಕ್ಟ್‌ನ ಕೆಲವು ಭಾಗದಲ್ಲಿ, ಚನ್ನಪಟ್ಟಣದ ಕೆಲವು ಭಾಗದಲ್ಲಿ ರಾಗಿಯನ್ನು ಬಿತ್ತಲಿಲ್ಲ. ಅದನ್ನು ಖುದ್ದಾಗಿ ರೆವಿನ್ಯೂ ಮಿನಿಸ್ಟರು ನೋಡಿ ಬಂದಿದ್ದಾರೆ. ಈ ಪರಿಹಾರ ಕಾರ್ಯಕ್ರಮಗಳನ್ನು ಒಂದೇ ಸಮನೆ ನಡೆಸಿಕೊಂಡು ಹೋಗುವಹಾಗೆ ಏರ್ಪಾಡು ಮಾಡಬೇಕು. ಮತ್ತು ಕೆಲಸ ಮಾಡತಕ್ಕ ಏಜನ್ಸಿ ಇದೆಯಲ್ಲಾ ಅದು ಯಾರ ಮುಖಾಂತರ ಮಾಡಿಸುತ್ತಾ ಇದ್ದೀರಿ ಎಂದರೆ ತಾಲ್ಲೂಕಿನ ಚೀಫ್ ಎಕ್ಸಿಕ್ಯೂಟೀವ್ ಇಂಜನಿಯರು, ಬಿ. ಡಿ. ಓ. ಮುಖಾಂತರ ನಡೆಯಬೇಕು, ಕೆಲವು ಕೆಲಸಗಳನ್ನು ಅವರು ಮಾಡಬಹುದು. ಅವರ ಹತ್ತಿರ ಒಬ್ಬರು ಸೂಪರ್‌ವೈಸರು ಇದ್ದಾರೆ,

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಅವರ ಮುಖಾಂತರ ಹತ್ತಾರು ಕಡೆ ಕೆಲಸಗಳನ್ನು ಮಾಡಿಸುವುದು ಕಷ್ಟ. ಅದಕ್ಕೆ ನನ್ನ ಸಲಹೆಯೇನೆಂದರೆ ಪ್ರತಿಯೊಂದು ಕೆಲಸವನ್ನೂ ಅಂದಾಜು ಮಾಡಬೇಕು, ಇಲ್ಲದೇ ಇದ್ದರೆ ದುರುಪಯೋಗವಾಗುವುದು ಖಂಡಿತ. ಅಸಿಸ್ಟೆಂಟ್ ಇಂಜನಿಯರ ಮುಖಾಂತರ ಹೆಚ್ಚು ಕೆಲಸ ನಡೆಯುವ ಹಾಗೆ ಏರ್ಪಾಡು ಮಾಡಬೇಕು. ಪಿ. ಡಬ್ಲ್ಯು. ಡಿ. ಮುಖಾಂತರ ನಡೆದರೆ ಅಂದಾಜು ಮಾಡುವುದು, ಖರ್ಚಾಗುವುದು ಎಷ್ಟು, ಕೆಲಸ ಎಷ್ಟಾಗಿದೆ ಎಂದು ತಾಳೆ ನೋಡುವುದಕ್ಕೆ ಅವಕಾಶವಾಗುತ್ತದೆ, ಈಗ ಆ ಅವಕಾಶ ಇಲ್ಲ. ಇದನ್ನು ಪರಿಹಾರ ಮಾಡಬೇಕಾದರೆ ಪಿ. ಡಬ್ಲ್ಯು. ಡಿ. ಮುಖಾಂತರವೇ ಹೆಚ್ಚು ಕೆಲಸ ನಡೆಯುವುದಕ್ಕೆ ಏರ್ಪಾಡು ಮಾಡಬೇಕು. ಇನ್ನೂ ಒಂದು ಕಾರ್ಯಕ್ರಮ ಇದೆ. ಸ್ಟ್ರೆಂಗ್ತನಿಂಗ್ ಆಫ್ ಬಂಡ್ಸ್ ಆಫ್ ಸ್ಮಾಲರ್ ಇರಿಗೇಷನ್ ವರ್ಕ್ಸ್ ಅವುಗಳನ್ನು ಡೀಸಿಲ್ಟ್ ಮಾಡುವುದು ಮತ್ತು ಅವುಗಳ ಫೀಡರ್ ಚಾನಲ್ಸ್‌ನ್ನು ಇಂಪ್ರೂವ್ ಮಾಡುವುದು ಅಂತ ಹೇಳಿ ಇದೆ. ಇದು ಇಂಜನಿಯರಿಂಗ್ ಇಲಾಖೆಯ ಮುಖಾಂತರವೇ ಆಗಬೇಕು. ಬಿ.ಡಿ.ಓ. ಮುಖಾಂತರ ಕೆಲಸ ಮಾಡಿದರೆ ಅದು ಕ್ರಮವಾಗಿ ನಡೆಯುವುದಿಲ್ಲ, ಶಾಶ್ವತವಾಗಿ ಉಳಿಯುವುದಿಲ್ಲ. ರಸ್ತೆಗಳನ್ನು ದುರಸ್ತಿಮಾಡುವಾಗ ಮಣ್ಣು ಎರಚುತ್ತಾರೆ, ಮಳೆ ಬಂದರೆ ಅದು ಕೊಚ್ಚಿ ಹೋಗುತ್ತದೆ. ಮಣ್ಣು ಹಾಕುವುದಕ್ಕೆ ಮುಂಚೆ ನೀರು ಸ್ವಲ್ಪ ಹಾಕಿ ದಮ್ಮಸ್ಸು ಮಾಡಿ ಶಾಶ್ವತವಾಗಿ ಅಲ್ಲಿಯೇ ನಿಲ್ಲುವಂತೆ ಮಾಡಲು ಪ್ರಯತ್ನ ಮಾಡಬೇಕು, ಆ ರೀತಿ ಮಾಡದೇ ಇರುವುದರಿಂದ ಖರ್ಚು ಮಾಡಿದ ಹಣ ದುರುಪಯೋಗವಾಗುತ್ತದೆ. ಈ ಕೆಲಸವನ್ನೂ ಸಹ ಇಂಜಿನಿಯರಿಂಗ್ ಇಲಾಖೆಯ ಮುಖಾಂತರವೇ ಮಾಡಿಸಬೇಕೆಂದು ನನ್ನ ಸಲಹೆ.

ಇನ್ನು ಕುಡಿಯುವ ನೀರಿನ ಬಾವಿಗಳು. ಕೆಲವು ಕಡೆ ಎಷ್ಟು ಆಳ ತೆಗೆದರೂ ನೀರು ಸಿಕ್ಕುವುದಿಲ್ಲ. ಶ್ರೀಮಾನ್ ಶಿವಪ್ಪನವರು ಸಲಹೆ ಮಾಡಿದರು, ಕೆಲವು ಊರುಗಳಲ್ಲಿ ಬೋರ್‌ವೆಲ್ಸ್ ಮುಖಾಂತರ ನೀರನ್ನು ಒದಗಿಸಬೇಕೆಂದು ಹೇಳಿದರು. ಅಂತೂ ಯಾವುದಾದರೂ ಒಂದು ವ್ಯವಸ್ಥೆ ಮಾಡಿ ಕುಡಿಯುವ ನೀರಿನ ಏರ್ಪಾಡು ಮಾಡಬೇಕು. ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು, ರಸ್ತೆಗಳನ್ನು ಮಾಡುವುದು, ರಸ್ತೆಗಳಿಗೆ ಮಣ್ಣು ಹಾಕುವುದು ಈ ರೀತಿ ಎಷ್ಟೋ ಕೆಲಸಕಾರ್ಯಗಳು ಆಗಿದ್ದರೂ ಕೂಡ ಶಾಶ್ವತವಾಗಿ ಅವು ಉಳಿದದ್ದನ್ನು ಯಾರೂ ನೋಡಿಲ್ಲ, 1956 ರಿಂದ ರಾಜ್ಯ ಪುನರ್ವಿಂಗಡಣೆಯಾದಂದಿನಿಂದೀಚೆಗೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ರಸ್ತೆ ಮಾಡಿಸಿದ್ದೀರಿ ಅವುಗಳು ಇವತ್ತು ಉಳಿದಿವೆಯೋ ಎಂದರೆ ಎಷ್ಟೋ ಕಡೆ ಅವು ಗೊತ್ತೇಆಗದ ಹಾಗೆ ಹೋಗಿಬಿಟ್ಟಿವೆ. ಶಾಶ್ವತವಾಗಿ ಉಳಿಯಲು ಏನು ಮಾಡಬೇಕು ಎಂಬುದನ್ನು ಯಾರು ಯೋಚನೆ ಮಾಡುತ್ತಾ ಇಲ್ಲ. ಸರ್ಕಾರದವರಿಗೆ ಈ ಬಗ್ಗೆ ಮನಸ್ಸು ಇಲ್ಲವೇನೋ ಎಂದು ನನಗೆ ಅನಿಸುತ್ತದೆ. ಈಗ ಆಗತ್ತಾ ಇರತಕ್ಕ ರೀತಿ ನೋಡಿದರೆ ದುರುಪಯೋಗ ಮಾಡುವ ಉದ್ದೇಶ ಇಟ್ಟುಕೊಂಡೇ ಕೆಲವು ಕಡೆ ಕೆಲಸ ಪ್ರಾರಂಭವಾಗುತ್ತದೆ. ಅದರ ಕಡೆ ಹೆಚ್ಚು ಗಮನ ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳವರನ್ನು ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಇದನ್ನು ಯಾತಕ್ಕೆ ಇದರೊಳಗೆ ಸೇರಿಸಿಲ್ಲವೋ ಅಥವಾ ಅಲ್ಲಿಯ ಪರಿಸ್ಥಿತಿಯನ್ನು ಸರಕಾರಕ್ಕೆ ವರದಿ ಮಾಡುವವರು ಇಲ್ಲವೋ ಎಂದು ನಾನು ಕೇಳಬಯಸುತ್ತೇನೆ. ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕೆಲವು ತಾಲ್ಲೂಕುಗಳಲ್ಲಿ ಒಂದೇ ಸಮನಾಗಿ ಕ್ಷಾಮವನ್ನು ಅನುಭವಿಸುತ್ತಿದ್ದಾರೆ. ಈ ಪ್ರದೇಶಗಳನ್ನು ಶಾಶ್ವತವಾದ ಯೋಜನೆಯಲ್ಲಿ ಸೇರಿಸಿಲ್ಲ. ಯಾರೋ ಆಫೀಸರಿಗೆ ಇಂತಿಂಥ ಜಿಲ್ಲೆಗಳನ್ನು ಸೇರಿಸಬೇಕು, ಇಂತಿಂಥ ಜಿಲ್ಲೆಗಳನ್ನು ಸೇರಿಸಬಾರದು ಎಂದು ತಿಳುವಳಿಕೆ ಕೊಟ್ಟು ಮಾಡಿಸಿದ್ದಾರೆ ಎಂದು ಗೊತ್ತಾಗುತ್ತದೆ. ಇದಕ್ಕಿಂತ ಬೇರೆ ಅಕ್ಷಮ್ಯ ಅಪರಾಧ ಬೇರೆ ಇಲ್ಲ ಎಂದು ಹೇಳಬಯಸುತ್ತೇನೆ. ಕೆಲವು ಪ್ರದೇಶಗಳಲ್ಲಿ ಒಂದೇ ಸಮನಾಗಿ ತೊಂದರೆಗಳನು ಅನುಭವಿಸುತ್ತಿದ್ದಾರೆ. ಹಾಗಿದ್ದರೂ ಕೂಡ ಆ ಪ್ರದೇಶಗಳಲ್ಲಿ ಶಾಶ್ವತವಾದ ಪರಿಹಾರ ಕ್ರಮಗಳನ್ನು ಹೇಗೆ ಕೈಗೊಳ್ಳಬೇಕು ಎನ್ನುವುದಕ್ಕೆ ಇಲ್ಲಿಯವರೆಗೂ ಯಾವ ಯೋಜನೆಯನ್ನೂ ಮಾಡಿಲ್ಲ. ಈಗ ಆ ಯೋಜನೆಯನ್ನು ಮಾಡಿರತಕ್ಕ ಪ್ರದೇಶಗಳಲ್ಲಾದರೂ ಕೂಡ ತೊಂದರೆ ಹತ್ತಾರು ವರ್ಷಗಳಿಂದ ಇದ್ದೇಇದೆ. ಯಾವುದಾದರೂ ಒಂದು ಪ್ರದೇಶದಲ್ಲಿ ನೀವು ಕ್ಷಾಮ ಬಾರದೆ ಇರುವಹಾಗೆ ಮಾಡಿರುವುದಕ್ಕೆ ಏನಾದರೂ ಉದಾಹರಣೆಯನ್ನು ಕೊಡುವುದಕ್ಕೆ ಸಾಧ್ಯವೇ ? ಸರಕಾರದವರು ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಪ್ರದೇಶದಲ್ಲಿ ತೊಂದರೆ ಇಲ್ಲ ಎನ್ನುವ ರೀತಿಯಲ್ಲಿ ಇದುವರೆಗೂ ಮಾಡುವುದಕ್ಕೆ ಆಗಿಲ್ಲ. ಅದಕ್ಕೆ ಕಾರಣ ಏನು ಅಂತ ಹೇಳಿದರೆ ಅವರ ಯೋಜನೆಗಳು ಸರಿಯಾಗಿಲ್ಲ. ಯಾವ ಯಾವ ಕೆಲಸ ಮಾಡಿದರೆ ಜನಗಳಿಗೆ ತೊಂದರೆ ನಿವಾರಣೆಯಾಗುತ್ತದೆ, ಶಾಶ್ವತವಾದ ಪರಿಹಾರ ಸಿಕ್ಕುತ್ತದೆ ಎನ್ನುವುದನ್ನು ತೀವ್ರವಾಗಿ ಯೋಚನೆ ಮಾಡಿಲ್ಲ ಎಂದು ಇದರಿಂದ ಸ್ಪಷ್ಟವಾಗಿ ನಾವು ತಿಳಿದುಗೊಳ್ಳಬಹುದು. ಅದಕ್ಕೆ ನಾನು ಒಂದು ಸಲಹೆ ಕೊಡುವುದೆ

ನೆಂದರೆ ಯಾವ ಯಾವ ಪ್ರದೇಶಗಳಲ್ಲಿ ಅಭಾವಪರಿಸ್ಥಿತಿ ಇದೆಯೋ ಅಲ್ಲಿ ನೀರಾವರಿ ಅನುಕೂಲಗಳನ್ನು ಕಲ್ಪಿಸಿಕೊಡುವುದು ಒಂದು ಮಾರ್ಗ. ಬೇರೆ ಇನ್ನಾವ ಮಾರ್ಗದಿಂದಲೂ ಈ ಪ್ರದೇಶಗಳಲ್ಲಿ ಯಾವ ಪರಿಹಾರ ಕ್ರಮವನ್ನು ಕೈಗೊಂಡರೂ ಕೂಡ ಅವರಿಗೆ ಶಾಶ್ವತವಾದ ಪರಿಹಾರ ಸಿಕ್ಕುವುದಿಲ್ಲ. ನೀರಾವರಿ ಅನುಕೂಲವೂ ಸಿಕ್ಕುವುದಿಲ್ಲ. ಎಲ್ಲೆಲ್ಲಿ ಕೆರೆಗಳನ್ನು ಕಟ್ಟುವುದಕ್ಕೆ ಸಾಧ್ಯವಿದೆಯೋ ಅಂತಹ ಪ್ರದೇಶಗಳಲ್ಲಿ ಪ್ರಥಮತಃ ಅದಕ್ಕೆ ಆದ್ಯತೆ ಕೊಡಬೇಕು. ಎಲ್ಲಿಕೆರೆಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿ ನೀರಾವರಿ ಬಾವಿಗಳನ್ನು ತೆಗೆಸುವುದಕ್ಕೆ ಏರ್ಪಾಡು ಮಾಡಬೇಕು. ನೀರಾವರಿ ಬಾವಿಗಳನ್ನು ತೆಗೆಸುವುದರಲ್ಲಿ ಒಂದು ತೊಂದರೆ ಏನಿದೆ ಎಂದರೆ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕೆಲವು ತಾಲ್ಲೂಕುಗಳಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಹಣಪಡೆದುಕೊಂಡವರು ಡಿಫಾಲ್ಟರ್ಸ್ ಆಗಿರುವುದರಿಂದ, ಅವರು ಬಾವಿಗಳನ್ನು ತೆಗೆಸುವುದಕ್ಕೆ ದುಡ್ಡು ಕೊಡುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಈ ಕ್ಷಾಮ ಪರಿಹಾರದ ನಿಧಿಯಿಂದ ಆದರೂ ಪ್ರತ್ಯೇಕ ಯೋಜನೆ ಹಾಕಿಕೊಂಡು ದುಡ್ಡು ಕೊಡಬೇಕು. ಅದು ಒಂದು ವಿಧಾನ. ಇನ್ನೊಂದು ಇದರ ಜೊತೆಗೆ ಕಮ್ಯುನಿಟಿ ವೆಲ್ಸ್ ಅಂತ ಹೇಳಿ ಕೆಲವು ಕಡೆ ತೆಗೆಸುವುದಕ್ಕೆ ಸಾಧ್ಯವಿದೆ. ಎಲ್ಲಿ ಹೆಚ್ಚು ನೀರು ಬರುತ್ತದೆ ಅಲ್ಲಿ ಜಿಲ್ಲೆಗೆ ಹತ್ತು ಬಾವಿಗಳಂತೆ ತೆಗೆಯಬೇಕೆಂದು ಹೇಳುತ್ತೇನೆ. ಈ ಕೆಲಸಗಳನ್ನು ಇಂಜಿನಿಯರಿಂಗ್ ಇಲಾಖೆಯ ಮುಖಾಂತರ ಮಾಡಿಸಬೇಕಾಗುತ್ತದೆ. ಹತ್ತು ಸಾವಿರ ರೂಪಾಯಿಗಳನ್ನು ಒಂದೊಂದು ಬಾವಿಗೆ ಖರ್ಚು ಮಾಡಬಹುದು. ಕಮ್ಯುನಿಟಿ ಇರಿಗೇಷನ್ ವೆಲ್ಸ್ ಎಂದು ಹೇಳಿ ಅಂತರ್ಗತವಾಗಿ ಎಲ್ಲಿ ಹೆಚ್ಚಿಗೆ ಜಲ ಸಿಕ್ಕುತ್ತದೆಯೋ ಅಂತಹ ಪ್ರದೇಶಗಳಲ್ಲಿ ಕಮ್ಯುನಿಟಿ ವೆಲ್ಸ್‌ಗಳನ್ನು ತೆಗೆಸುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಎಲ್ಲಿ ಮಳೆ ನೀರಿನಿಂದ ಕೆರೆಯನ್ನು ಕಟ್ಟುವುದಕ್ಕೆ ಸಾಧ್ಯ ಇಲ್ಲವೋ ಅಂತಹ ಕಡೆ ವ್ಯಕ್ತಿಗತವಾಗಿ ನೀರಾವರಿ ಬಾವಿಗಳನ್ನು ತೆಗೆಯುವುದಕ್ಕೆ ಅವರಿಗೆ ನೇರವಾಗಿ ಹಣ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಕಮ್ಯುನಿಟಿ ವೆಲ್ಸ್ ತೆಗೆಸಿದರೆ ಅದಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾಗುತ್ತದೆ. ಒಟ್ಟು ಬಾವಿ ತೆಗೆಸುವುದಕ್ಕೆ, ಪಂಪುಹಾಕಿಸುವುದಕ್ಕೆ ಮತ್ತು ಚಾನಲ್ಸ್ ಮಾಡಿಕೊಡುವುದಕ್ಕೆ ಎಷ್ಟು ಬೇಕು ಎನ್ನುವುದನ್ನು ಅಂದಾಜು ಮಾಡಿಸಿ ಇಂಜನಿಯರಿಂಗ್ ಇಲಾಖೆ ಮುಖಾಂತರ ಕೆಲಸಗಳನ್ನು ಕೈಗೊಳ್ಳಬೇಕು. ಉದಾಹರಣೆಗೆ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಶಿಂಷಾನದಿ ಹರಿಯುತ್ತದೆ. ಕೆಲವು ಕಡೆ ಶಿಂಷಾ ನದಿಯಿಂದ ನೀರನ್ನು ಎತ್ತಿ ಅದರಿಂದ ನೀರಾವರಿ ಮಾಡುವುದಕ್ಕೆ ಸಾಧ್ಯ ಇದೆ. ಅಂತಹಕಡೆ ಲಿಫ್ಟ್ ಇರಿಗೇಷನ್ ಸ್ಕೀಂಅನ್ನು ಜಾರಿಗೆ ತರಬೇಕು. ಇಂತಹ ಶಾಶ್ವತವಾದ ಕಾರ್ಯಕ್ರಮವನ್ನು ಕೂಡ ಕೈಗೊಳ್ಳುವುದಕ್ಕೆ ಏರ್ಪಾಡು ಮಾಡಬಹುದೆಂದು ಹೇಳಿ ಸಲಹೆ ಮಾಡುತ್ತೇನೆ. ಸ್ವಾಮಿ, ಕೆಲಸಗಳು ಆಗಿಂದಾಗ್ಗೆ ಜಿಲ್ಲಾ ಅಧಿಕಾರಿಗಳಾಗಲಿ ಅಥವಾ ಡಿವಿಜನಲ್ ಲೆವಲ್ ಅಧಿಕಾರಿಗಳಾಗಲಿ ಎಲ್ಲಿ ಕೆಲಸ ಕ್ರಮವಾಗಿ ನಡೆಯುತ್ತಿದೆ, ಎಲ್ಲಿ ನಡೆಯುತ್ತಾ ಇಲ್ಲ ಎನ್ನುವುದನ್ನು ನೋಡದೆ ಹೋದರೆ, ಕೆಲಸಗಳನ್ನು ಮಾಡುವುದರಲ್ಲಿ ತಪ್ಪು ಇದ್ದರೆ ಅದನ್ನು ತಿದ್ದತಕ್ಕವರು ಯಾರು ಎಂದು ನನಗೆ ಅರ್ಥವಾಗುತ್ತಾ ಇಲ್ಲ. ತುಮಕೂರು ಡಿಸ್ಟ್ರಿಕ್ಟಿನಲ್ಲಿ ಡೆಪ್ಯುಟಿ ಕಮಿಷನ್ನರೂ ಇದ್ದಾರೆ. ಅವರಿಗೆ ಪ್ರಥಮ ಬಹುಮಾನ ಕೊಡಬೇಕು. ಆ ಮಹಾರಾಯ ಯಾವಾಗಲೂ ಆಫೀಸಿನಲ್ಲಿಯೇ ಕುಳಿತಿರುತ್ತಾರೆ. ತೊಂದರೆಗಳು ಏನಿದೆ, ಎನ್ನುವುದನ್ನು ಕೂಡ ಗಮನಕ್ಕೆ ತೆಗೆದುಕೊಳ್ಳದೆ ಅವರ ಕಷ್ಟ ಅಧಿಕಾರಿಗಳಿಗೆ ಅರ್ಥವಾಗದೆ ಎಷ್ಟರ ಮಟ್ಟಿಗೆ ಉದಾಸೀನದಿಂದ ಇದ್ದಾರೆ ಎಂದರೆ ಅದನ್ನು ಹೇಳುವುದಕ್ಕಾಗುವುದಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಪರಿಸ್ಥಿತಿ ಹೀಗಿದೆ ಎಂದು ಹೇಳಿದಕ್ಕೆ ಆಲೋಚನೆ ಮಾಡುತ್ತಾ ಇದ್ದೇವೆ ಎಂದು ಹೇಳಿದರು. ಕ್ಷಾಮ ಬಂದು ಜನಗಳನ್ನು ಕೊಂದು ಹಾಕುವವರೆಗೂ ಅವರು ಯೋಚನೆ ಮಾಡುತ್ತಾ ಇರುತ್ತಾರೆ ಎಂದು ಭಾವಿಸುತ್ತೇನೆ. ಹೀಗೆ ಕೆಲವು ಅಧಿಕಾರಿಗಳಿಗೆ ಯಾರಾದರೂ ತಿಳುವಳಿಕೆ ಕೊಟ್ಟು ಅವರು ಕೆಲಸ ಮಾಡದಿದ್ದರೆ ಅವರಿಗೆ ಶಿಕ್ಷೆ ಮಾಡುವ ವಿಧಾನ ಯಾವುದೂ ಇಲ್ಲವೇ ? ಕೆಲವು ಕಡೆ ಕೆಲಸಗಳನ್ನು ಮಾಡಬೇಕೆಂದು ದುಡ್ಡು ಕೊಟ್ಟರು. ಕೆಲಸ ಪ್ರಾರಂಭ ಮಾಡುವುದಕ್ಕೆ ಎರಡು ತಿಂಗಳು ಆಯಿತು. ಆ ಕೆಲಸ ಪ್ರಾರಂಭ ಮಾಡಿದ ಎಂಟು ದಿವಸಗಳ ಮೇಲೆ ಕೆಲಸ ನಿಂತು ಹೋಯಿತು. ಎಕ್ಸಿಕ್ಯೂಟಿವ್ ಇಂಜನೀಯರ್ ಹೋಗಿ ನೋಡುವುದಿಲ್ಲ. ಅಧಿಕಾರಿಗಳಿಗೆ, ಜನಗಳಿಗೆ ಇರತಕ್ಕಂಥ ಕಷ್ಟ ಅರ್ಥವಾಗುವುದಿಲ್ಲ. ಕೆಲಸ ಮಾಡಿದಕ್ಕೆ ರಿಪೋರ್ಟ್ ಇಲ್ಲ. ಇಂತಹ ಪರಿಸ್ಥಿತಿ ಉಂಟಾಗಿದೆ. ಅದಕೋಸ್ಕರ ನಾನು ತಮ್ಮ ಮುಖಾಂತರ ರೆವಿನ್ಯೂ ಮಂತ್ರಿಗಳಿಗೆ ಸಲಹೆ ಮಾಡುವುದೇನೆಂದರೆ ಯಾವ ಅಧಿಕಾರಿ ಆಗಿಂದಾಗ್ಗೆ ಕೆಲಸಗಳನ್ನು ನೋಡಿ ಸರಕಾರಕ್ಕೆ ರಿಪೋರ್ಟ್ ಕಳುಹಿಸಿ ಇಷ್ಟು ಹಣ ಖರ್ಚಾಗಿದೆ, ಇಷ್ಟು ಕೆಲಸಗಳು ಪ್ರಾರಂಭವಾಗಿದೆ, ಇಷ್ಟು ಆಗಬೇಕಾದಂಥ ಕೆಲಸಗಳು ಬಾಕಿ ಇವೆ, ಇಂತಹ ಕಡೆಗಳಲ್ಲಿ ನೀರಾವರಿ ಇದೆ ಎಂದು ವಿವರವಾಗಿ ಯಾವ ಅಧಿಕಾರಿ ರಿಪೋರ್ಟ್ ಕಳುಹಿಸುವುದಿಲ್ಲವೋ ಅವನಿಗೆ ಶಿಕ್ಷೆ ಮಾಡುವ ಕೆಲಸವನ್ನು ಮೊದಲು ಕೈಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಸ್ವಾಮಿ, ನಮ್ಮ ರೆವಿನ್ಯೂ ಮಂತ್ರಿಗಳು ಉತ್ಸಾಹ ತೋರಿಸುತ್ತಾರೆ. ಆದರೆ ಅದಕ್ಕೆ ಹಣ ಬೇಗ ಬೇಗ ತಲುಪುವುದಿಲ್ಲ. ಉದಾಹರಣೆಗೆ ಕುಣಿಗಲ್ ತಾಲ್ಲೂಕಿನ ವಿಷಯ

(ಶ್ರೀ ಎನ್. ಹುಚ್ಚಮಾಸ್ತಿ ಗೌಡ)

ಏನು ಎಂದು ಸಭೆಯ ಮುಂದೆ ಹೇಳಲು ಇಷ್ಟ ಪಡುತ್ತೇನೆ. ಕೆಲವು ಹೋಬಳಿಗಳಲ್ಲಿ ಅಭಾವ ಪರಿಸ್ಥಿತಿ ಇದೆ. 11 ಸಾವಿರ ರೂಪಾಯಿಗಳನ್ನು ಮೊದಲು ಕೊಟ್ಟರು. ಇದನ್ನು ಅಲಾಟ್ ಮಾಡುವುದಕ್ಕೆ ಒಂದು ಕಮಿಟಿಯನ್ನು ಮಾಡಿ ಅವರು ಅಲಾಟ್ ಮಾಡಿದಮೇಲೆ ಅದನ್ನು ಕಂಟ್ರಾಕ್ಟ ರಿಗೆ ಹಂಚಬೇಕಾದರೆ 15 ದಿವಸಗಳಿಗೂ ಮೇಲೆ ಆಯಿತು. ಕಂಟ್ರಾಕ್ಟರಿಗೆ ಹಂಚಿ ಅವನು ಕೆಲಸ ಶುರು ಮಾಡಬೇಕಾದರೆ ಇನ್ನೂ ಹದಿನೈದು ದಿವಸಗಳಾಯಿತು. ಅಷ್ಟು ಹೊತ್ತಿಗೆ ನಮ್ಮ ರೆವಿನ್ಯೂ ಮಂತ್ರಿಗಳು ಅಲ್ಲಿಗೆ ದಯಮಾಡಿಸಿದ್ದರು. ಆಗ ಅವರು ನಿಮ್ಮ ಜಿಲ್ಲೆಗೆ ಲಕ್ಷಾಂತರ ರೂಪಾಯಿ ಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ನಮ್ಮ ಜಿಲ್ಲೆಗೆ ಎಷ್ಟು ಬಂದಿದೆ ಎಂದು ಕೇಳಿದ್ದಕ್ಕೆ 67 ಸಾವಿರ ರೂಪಾಯಿಗಳು ಬಂದಿದೆ ಎಂದು ಹೇಳಿದರು. 67 ಸಾವಿರ ರೂಪಾಯಿಗಳನ್ನು ಹಂಚು ವುದಕ್ಕೆ ಮತ್ತೆ ಒಂದು ತಿಂಗಳು ಬೇಕು. ಈ ರೀತಿ ಕೆಲಸ ನಡೆಸತಕ್ಕಂಥ ವಿಧಾನ ನೋಡಿದರೆ ಪರಿಹಾರ ಕಾರ್ಯ ಹೇಗೆ ನಡೆಯುತ್ತದೆ? ಅದಕ್ಕಾಗಿ ಈ ಕೆಲಸಗಳನ್ನು ಮಾಡತಕ್ಕಂಥ ವಿಧಾನ ಗಳನ್ನು ಬದಲಾವಣೆ ಮಾಡಬೇಕು. ಮಾನ್ಯ ಶಿವಪ್ಪನವರು ಹೇಳಿದಹಾಗೆ ಇದಕ್ಕೆಲ್ಲಾ ಪ್ರತ್ಯೇಕ ಸಿಬ್ಬಂದಿಯನ್ನು ಮಾಡಿದರೆ ಈ ರಾಜ್ಯದಲ್ಲಿ ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಪ್ರದೇಶ ಇದೆಯೋ ಆ ಪ್ರದೇಶಗಳಿಗೆಲ್ಲಾ ತಾತ್ಕಾಲಿಕ ಪರಿಹಾರ ಕಾರ್ಯಕ್ರಮ ಜಾರಿಗೆ ತರಬಹುದು ಮತ್ತು ಶಾಶ್ವತವಾದ ಪರಿಹಾರ ಕಾರ್ಯಕ್ರಮ ಜಾರಿಗೆ ತರಬಹುದು. ಇದಕ್ಕೆ ಒಂದು ಸಮಗ್ರಯೋಜನೆ ಯನ್ನು ತಯಾರು ಮಾಡಿ ಆ ಕೆಲಸವನ್ನು ಪೂರ್ಣಗೊಳಿಸುವುಕ್ಕೆ ಪ್ರತ್ಯೇಕ ಸಿಬ್ಬಂದಿಯನ್ನು ಏರ್ಪಾಡ ಮಾಡಬೇಕೆಂದು ನಾನು ಭಾವಿಸುತ್ತೇನೆ. ಈ ಪ್ರದೇಶಗಳು ಮತ್ತೆ ಮತ್ತೆ ಕ್ಷಾಮಕ್ಕೆ ಒಳಗಾಗ ದಂತೆ ತಪ್ಪಿಸಬೇಕು. ಪ್ರತಿ ಸಾರಿ ಸರ್ಕಾರದವರು ಈ ಸಭೆಯಲ್ಲಿ ಅಭಾವ ಪರಿಸ್ಥಿತಿ ಬಗ್ಗೆ ಒಂದು ಮೋಷನ್ ತಂದು ಅದರಮೇಲೆ ನಾವು ಚರ್ಚೆಮಾಡಿ ಅದರ ಪರಿಹಾರಕ್ಕೆ ಸಲಹೆಗಳನ್ನು ಮಾಡುತ್ತೇವೆ ಅಲ್ಲಿಗೆ ಅದು ಆಖೈರಾಗುತ್ತದೆ. ಯಾವುದಾದರೂ ಶಾಶ್ವತವಾದ ಕಾರ್ಯಕ್ರಮವನ್ನು ಕೈಗೊಂಡು ಮಾಡಿದ್ದೇ ಆದರೆ ಈ ಚರ್ಚೆ ಇಲ್ಲಿ ಪುನಃ ಆಗುವುದಕ್ಕೆ ಅವಕಾಶ ಇಲ್ಲ ಎಂದು ಸಲಹೆಮಾಡಿ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳವರಿಗೆ ಕೂಡಲೇ ಒಂದು ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಳ್ಳ ಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಸಾಧ್ಯವಿರುವ ಕಡೆಗಳಲ್ಲೆಲ್ಲಾ ನೀರಾವರಿ ಯೋಜನೆ ಗಳನ್ನು ಕೈಗೊಳ್ಳಬೇಕು. ಎಲ್ಲಿ ಕೆರೆಗಳನ್ನು ಕಟ್ಟುವುದಕ್ಕೆ ಸಾಧ್ಯವಿದೆ ಅಲ್ಲಿ ಕೂಡಲೇ ಕೆರೆಗಳನ್ನು ಕಟ್ಟಿಸುವ ಕಾರ್ಯಕ್ರಮ ಕೈಗೊಳ್ಳಬೇಕು. ಈ ವರ್ಷದ ಲಿಸ್ಟಿನಲ್ಲಿ ಅಂತಹ ಕೆರೆಗಳನ್ನು ಸೇರಿಸದಿದ್ದರೂ ಕೂಡಲೇ ಅವುಗಳನ್ನು ಸೇರಿಸಿ ಕೆಲಸ ಕೈಗೊಳ್ಳುವಹಾಗೆ ಮಾಡಬೇಕು. ಎರಡನೆಯದು, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮುಖಾಂತರ ಬಾವಿಗಳನ್ನು ತೆಗೆಸಲು ಸಹಾಯ ಮಾಡಬೇಕು. ಎಲ್ಲೆಲ್ಲಿ ನೀರಾವರಿ ಸೌಕರ್ಯಗಳಿರುತ್ತವೆಯೋ ಅಂತಹ ಕಡೆಗಳಲ್ಲಿ ಪ್ರತ್ಯೇಕ ಯೋಜನೆಗಳನ್ನು ಮಾಡಿ ಅದಕ್ಕೆ ಬೇಕಾದಂಥ ಹಣವನ್ನು ಒದಗಿಸಬೇಕು. ಮೂರನೆಯದು, ಕಮ್ಯುನಿಟಿ ವೆಲ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಅದಕ್ಕೆ ಎಷ್ಟು ಹಣವಾದರೂ ಪರವಾಗಿಲ್ಲ. ಲಕ್ಷಾಂತರ ರೂಪಾಯಿಗಳು ಅದಕ್ಕಾಗಿ ಖರ್ಚಾದರು ರೈತರಿಗೆ ಶಾಶ್ವತ ಪರಿಹಾರ ಸಿಕ್ಕುತ್ತದೆಂಬ ಭರವಸೆ ಇದೆ. ಆದಷ್ಟು ಜಾಗ್ರತೆಯಾಗಿ ಶಾಶ್ವತ ಪರಿಹಾರ ಕೆಲಸಕಾರ್ಯಗಳನ್ನು ಸರ್ಕಾರದವರು ಕೈಗೊಳ್ಳಬೇಕೆಂದು ನಾನು ಸಲಹೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಸಿಂಗಾರಿಗೌಡ (ನಾಗಮಂಗಲ).—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ನಿರ್ಣಯ ವನ್ನು ಈ ಸಭೆಯಮುಂದೆ ಇಟ್ಟಂಥ ಕಾಲದಲ್ಲಿ ಏನು ನಮ್ಮ ಮನಸ್ಸಿನಲ್ಲಿ ಕಳವಳವಿತ್ತೋ ಅದು ಹೋಗಿದೆ. ನಮ್ಮ ಮನಸ್ಸಿನಲ್ಲಿದ್ದ ಕಾತುರತೆ ಮಾಯವಾಗಿದೆ. ಕಾರಣ, ಇದೇ ತಿಂಗಳು ಒಂದನೇ ತಾರೀಖು ನಮ್ಮ ಪ್ರಾಂತದಲ್ಲ ಮಳೆ ಬಿದ್ದಿದೆ. ಆದರೆ ಯಾವ ಕೆರೆಯಲ್ಲಿಯೂ ನೀರು ಇಲ್ಲ. ಬಿತ್ತನೆ ಬೀಜದ ಕಾಲವೇನೋ ಮುಗಿದುಹೋಗಿದೆ. ಇದೇ ರೀತಿಯಾಗಿ ಒಂದೇ ಸಮನೆ ನಮ್ಮ ಪ್ರಾಂತದಲ್ಲಿ ಅಭಾವ ತಲೆದೋರುತ್ತಲೇ ಇದೆ. ಅಭಾವ ಇರುವುದನ್ನು ಜಾಗ್ರತೆಯಾಗಿ ನಮ್ಮ ಸರ್ಕಾರದವರು ತಪ್ಪಿಸದೇ ಇದ್ದಪಕ್ಷದಲ್ಲಿ ಅನೇಕ ಜನರು ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಿಗೆ ವಲಸೆ ಬರುತ್ತಾರೆ. ಇದೇ ರೀತಿ ಮುಂದೆಯೂ ಬಿಟ್ಟರೆ ಬಹುಶಃ ಹಳ್ಳಿಗಳಲ್ಲಿ ಜನ ನಿಂತು, ಯಾವುದಾದರೂ ಒಂದು ಕಸಬು ಅಥವಾ ಬೇಸಾಯ ಮಾಡಿಕೊಂಡು ಹೋಗುವ ಒಂದು ಹವ್ಯಾಸವನ್ನು ನಡೆಸಿಕೊಂಡು ಹೋಗದೆ, ಪಟ್ಟಣಗಳ ಕಡೆ ನುಗ್ಗುವ ಪರಿಸ್ಥಿತಿಯನ್ನು ನಾವಾ ಗಿಯೇ ಅವರಿಗೆ ತಂದುಕೊಟ್ಟಂತಾಗುತ್ತದೆ. ಈ ಒಂದು ದೃಷ್ಟಿಯಿಂದ ನಾನು ಸರ್ಕಾರದವರನ್ನು ಪ್ರಾರ್ಥನೆಮಾಡುತ್ತೇನೆ. ಈ ದಿವಸ ಅಭಾವ ತಲೆದೋರಿದೆ. ಅಭಾವ ತಲೆದೋರಿರುವಾಗ ತಾತ್ಕಾಲಿಕವಾದ ಪರಿಹಾರವನ್ನು ಜನಗಳಿಗೆ ಕೊಡುವ ವ್ಯವಸ್ಥೆ ಹಿಂದಿನಿಂದಲೂ ನಡೆದುಕೊಂಡು

ಬಂದಿದೆ. ಅದರಿಂದ ಜನರಿಗೆ ಅಷ್ಟೇನೂ ಪ್ರಯೋಜನವಾಗುವುದಿಲ್ಲ. ನನ್ನ ಹಿಂದೆ ಮಾತನಾಡಿದ ಸ್ನೇಹಿತರು ಕೆಲವು ಶಾಶ್ವತವಾದ ಪರಿಹಾರ ಕ್ರಮಗಳನ್ನು ಮಾಡದೇ ಹೋದಪಕ್ಷದಲ್ಲಿ ರೈತ ಜೀವನ ನಡೆಸುವುದಕ್ಕೆ ಕಷ್ಟವಾಗುತ್ತದೆಂದು ಮನವರಿಕೆ ಮಾಡಿಕೊಟ್ಟರು. ಆದ್ದರಿಂದ ''64. ಫ್ಯಾಮಿನ್ ರಿಲೀಫ್ ವರ್ಕ್ಸ್'' ಪ್ರಕಾರ ಹಣ ಕೊಡಲಿ, ರಿಲೀಫ್ ವರ್ಕ್ಸ್‌ಗೆ ಕೇಂದ್ರ ಸರ್ಕಾರದಿಂದ ಹಣ ಸಹಾಯ ಮಾಡಲಿ ಇದಕ್ಕೆ ಕೇಂದ್ರ ಸರ್ಕಾರ ಹೊಣೆಯಾಗಿರಬೇಕು ಅಥವಾ ರಾಜ್ಯ ಸರ್ಕಾರ ಹೊಣೆಯಾಗಿರಬೇಕು. ಈ ದಿವಸ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವ ಸಲುವಾಗಿ ನಮ್ಮ ಸರ್ಕಾರದವರು ನಮ್ಮ ದೇಶದ ಎರಡು ಜಿಲ್ಲೆಗಳನ್ನು ಆರಿಸಿಕೊಂಡಿದ್ದಾರೆ. ಒಂದು ಚಿತ್ರದುರ್ಗ ಜಿಲ್ಲೆ, ಇನ್ನೊಂದು ಬಿಜಾಪುರ ಜಿಲ್ಲೆ, ಎಲ್ಲಿ ಅಭಾವ ಪ್ರದೇಶ ಜಾಸ್ತಿ ಇದೆಯೋ ಅಂತಹ ಕಡೆ ಸರ್ಕಾರದ ಗಮನವನು ಹರಿಸವುದರ ಜೊತೆಗೆ ಪ್ರತಿಯೊಂದು ಜಿಲ್ಲೆಯಲ್ಲಿರುವ ಅಭಾವ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದರೂ, ಈ ಸಾಲಿನಲ್ಲಿ ಕೇವಲ ಎರಡು ಜಿಲ್ಲೆಗಳನ್ನು ಆರಿಸಿಕೊಂಡಿದ್ದಾರೆ. ಅಲ್ಲಿ ಯಾವ ರೀತಿ ಶಾಶ್ವತ ಪರಿಹಾರಗಳನ್ನು ಒದಗಿಸಿಕೊಡುತ್ತಾರೆ. ಜನತೆಗೆ ನೆಮ್ಮದಿಯನ್ನು ಯಾವ ರೀತಿ ತಂದುಕೊಡುತ್ತದೆಂಬುದನ್ನು ನಾವು ಕಾದು ನೋಡಬೇಕಾಗಿದೆ. ಈಗ ಶಾಶ್ವತ ಪರಿಹಾರ ಕಾಮಗಾರಿಗಳಲ್ಲಿ ಹೆಚ್ಚಿಗೆ ಸಣ್ಣಸಣ್ಣ ನೀರಾವರಿ ಕಾಮಗಾರಿಗಳು ಮತ್ತು ಬಾವಿಗಳನ್ನು ತೆಗೆಯುವ ವ್ಯವಸ್ಥೆಯನ್ನು ಸೇರಿಸಿ ಕೊಂಡಿರುವುದು ಸರಿಯಾಗಿದೆ. ಭಾವಿಯಲ್ಲಿರುವ ನೀರನ್ನು ಹೆಚ್ಚಿಗೆ ಉಪಯೋಗಿಸುವುದಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು.

ಇನ್ನು ಈ ತಾತ್ಕಾಲಿಕವಾದ ಪರಿಹಾರಗಳ ಬಗ್ಗೆ ನಾನು ಮೂರು ನಾಲ್ಕು ವಿಷಯಗಳನ್ನು ಹೇಳುತ್ತೇನೆ. ನಾನು ಸುಮಾರು ಆರೇಳು ವರ್ಷಗಳಿಂದಲೂ ನೋಡುತ್ತಿದ್ದೇನೆ. ಯಾವ ಹಳ್ಳಿಗೆ ಹೋದರೂ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ಇದಕ್ಕೆ ಒಂದು ಆದೇಶವನ್ನು ಸರ್ಕಾರ ಕೊಟ್ಟಿದೆ ಎಂಬುದಾಗಿ ಏನೋ ಹೇಳುತ್ತಾರೆ. ಎಲ್ಲಿ ಭಾವಿ ಇದೆಯೋ ಅಲ್ಲಿ ಮತ್ತೊಂದು ಬಾವಿಯನ್ನು ತೋಡುವ ವ್ಯವಸ್ಥೆಗೆ ಸರ್ಕಾರದವರು ಮಾಡಬಾರದೆಂದು ನಾನು ಮೊದಲೇ ಹೇಳಿದ್ದೇನೆ. ಎಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲವೋ ಅಂತಹ ಕಡೆಗಳಲ್ಲಿ ಅದನ್ನು ಮಾಡಿ ಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈಗ ಇರುವ ಬಾವಿಯನ್ನು ದೊಡ್ಡದು ಮಾಡುವ ಮತ್ತು ಆಳ ಮಾಡುವ ವ್ಯವಸ್ಥೆಯನ್ನು ಸರ್ಕಾರದವರು ಅತಿ ಜರೂರಾಗಿ ಮಾಡಿಕೊಡಬೇಕು. ಆದರೆ ಈಗ ಬಾವಿಯಲ್ಲಿ ಹೆಚ್ಚು ಆಳ ಮಾಡುವ ಕೆಲಸಗಳನ್ನು ಇಂಜನಿಯರಿಂಗ್ ಇಲಾಖೆಗೆ ಸೇರಿಸಿದ್ದಾರೆ. ಇದುವರೆಗೂ ಅವನ್ನು ತಾಲ್ಲೂಕು ಬೋರ್ಡಿಗೆ ವಹಿಸಿದ್ದರು. ಆಗ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿತ್ತು. ಒಂದೊಂದು ಡಿವಿಜನಿನಲ್ಲಿ ಒಬ್ಬ ಎಗ್ಜಿಕ್ಯುಟಿವ್ ಇಂಜಿನಿಯರ್ ಇರುತ್ತಾರೆ. ರೈತಾಪಿಜನಗಳೆಲ್ಲಾ ಇನ್ನುಮುಂದೆ ಅವರಿಗೆ ಅರ್ಜಿ ಹಾಕಿಕೊಳ್ಳಬೇಕೆಂದು ಪತ್ರಿಕೆಗಳ ಮೂಲಕ ಹೇಳಿದ್ದಾರೆ. ಇದು ಸರಿಯಲ್ಲ. ಮತ್ತೆ ತಾಲ್ಲೂಕು ಆಡಳಿತ ಸಮಿತಿಗೆ ಈ ಕಲಸವನ್ನು ವಹಿಸಿ ಕೊಟ್ಟರೆ ಶೀಘ್ರವಾಗಿ ಎಲ್ಲಾ ಕೆಲಸಗಳು ನಡೆಯುತ್ತವೆ. ಎಲ್ಲಿ ಒಂದು ಬಾವಿ ಇದೆಯೋ ಆ ಬಾವಿಯಲ್ಲಿ ಹೆಚ್ಚಿಗೆ ನೀರು ತೆಗೆಯುವುದಕ್ಕಾಗುವುದಿಲ್ಲವೆಂದರೆ, ಅಂತಹ ಕಡೆಗಳಲ್ಲಿ ಮತ್ತೊಂದು ಬಾವಿಯನ್ನು ತೆಗೆಯುವ ವ್ಯವಸ್ಥೆಯನ್ನು ಅತಿ ಜರೂರಾಗಿ ಮಾಡಿಕೊಡಬೇಕು. ಎಲ್ಲಿ ಬಾವಿಗಳಲ್ಲಿ ಹೆಚ್ಚಿನ ಆಳ ತೆಗೆಯುವುದಕ್ಕೆ ಸಾಧ್ಯವಿದೆಯೋ ಅಂತಹ ಕಡೆಗಳಲ್ಲಿ ಬೋರ್ ವೆಲ್‌ರಿಗ್ಸ್ ಕೊಡುವ ವ್ಯವಸ್ಥೆಮಾಡಬೇಕು. ಎಲ್ಲೆಲ್ಲಿ ನೀರಾಡುವ ಸೂಚನೆ ಇದೆಯೋ ಅಂತಹ ಕಡೆಗಳಲ್ಲಿ ಅವನ್ನು ಉಪಯೋಗಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಡಬೇಕು.

ಎರಡನೆಯದಾಗಿ ರೈತಾಪಿಜನಗಳು ಈಗ ಬ್ಯಾಂಕುಗಳಿಂದ ಮತ್ತು ಸರ್ಕಾರದಿಂದ ಸಾಲಗಳನ್ನು ಪಡೆಯುತ್ತಿದ್ದಾರೆ. ಈ ವರ್ಷ ಅಷ್ಟಾಗಿ ಮಳೆ ಬೆಳೆಗಳಿಲ್ಲ. ಈ ಐದು ವರ್ಷಗಳಿಂದಲೂ ಇದೇ ರೀತಿ ಆಗುತ್ತಾಇದೆ. ಅನೇಕ ರೈತಾಪಿಜನಗಳಲ್ಲಿ 1972ನೇ ಇಸವಿಯಲ್ಲಿ ಏನು ಫಸಲು ಇರುತ್ತದೋ ಎಂಬ ನೋವು, ಕೊರಗು ಈಗ ಉಂಟಾಗಿದೆ. ಸರ್ಕಾರದವರು ಅವರಿಗೆ ಏನು ಇಂಪ್ರೂವ್‌ಮೆಂಟ್ ಲೋನ್, ತಕಾವಿ ಲೋನ್, ಬಾವಿ ತೆಗೆಸಲು ಲೋನ್ ಕೊಟ್ಟಿದ್ದಾರೋ ಅವನ್ನು ಅವರಿಗೆ ತೊಂದರೆಯಾಗದಂತೆ ವಸೂಲು ಮಾಡಿಕೊಳ್ಳಬೇಕು.

ಇನ್ನು ಮೂರನೆಯದಾಗಿ ಬಹುಮಟ್ಟಿಗೆ ಹಳ್ಳಿಯ ಜನರು ತಮ್ಮ ಜೀವನವನ್ನು ಉದ್ಧಾರ ಮಾಡಬೇಕು, ತಮ್ಮ ಕುಟುಂಬವನ್ನು ಮುಂದಕ್ಕೆ ತರಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರು ಹೇಳಿದ ಹಾಗೆಲೋನುಗಳನ್ನು ಮಾರ್ಟ್‌ಗೇಜ್ ಬ್ಯಾಂಕ್ ಮೂಲಕ ರಿಜರ್ವ್ ಬ್ಯಾಂಕ್ ಆದೇಶದಂತೆ ಸೆಂಟ್ರಲ್ ಡೆವಲಪ್‌ಮೆಂಟ್ ಬ್ಯಾಂಕಿನವರು ರೈತರಿಗೆ ಒದಗಿಸುತ್ತಿದ್ದರು. ಈ ಮಧ್ಯೆ ಸರ್ಕಾರ ಪ್ರವೇಶಮಾಡಿ ರಿಜರ್ವ್ ಬ್ಯಾಂಕಿನಿಂದಾಗಲೀ ಅಥವಾ ಜಿಲ್ಲಾ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕಿನಿಂದಾಗಲೀ ಬಾವಿ ತೆಗೆಯುವುದಕ್ಕೆ ಮುಂದೆ ಬರುತ್ತಾರೋ ಅಂತಹವರಿಗೆ ಜರೂರಾಗಿ ಸಾಲವನ್ನು ಒದಗಿಸಿಕೊಡಬೇಕು.

(ಶ್ರೀ ಕೆ. ಸಿಂಗಾರಿಗೌಡ)

ನಾಲ್ಕನೇಯದಾಗಿ ಹಳ್ಳಿಗಳಲ್ಲಿ ಹತ್ತಿರ ಹತ್ತಿರ ಕೆಲಸಗಳನ್ನು ತೆಗೆದುಕೊಳ್ಳಬೇಕು. ಒಂದು ಮೈಲಿಯೊಳಗೇ ಹೆಚ್ಚಿಗೆ ಕೆಲಸಗಳು ಸಿಗಬೇಕು. ಸುಮ್ಮನೆ ರಸ್ತೆಗಳಿಗೆ ಮಣ್ಣನ್ನು ಹಾಕುವ ಕೆಲಸ ತೆಗೆದುಕೊಳ್ಳಬಾರದು. ಮಳೆ ಬಂದು ಮಣ್ಣು ಎಲ್ಲಾ ಕೊಚ್ಚಿಕೊಂಡು ಹೋಗುತ್ತದೆ. ಆ ರೀತಿ ಹಣ ವ್ಯಥಾ ವ್ಯಯಮಾಡಬಾರದು. ಮುಖ್ಯವಾಗಿ ದನಕರುಗಳಿಗೆ ಕುಡಿಯುವುದಕ್ಕೆ ನೀರು ಸಿಗಬೇಕು. ಎಲ್ಲೆಲ್ಲಿ ರೈತ ನೀರನ್ನು ಉಪಯೋಗಿಸುವುದಕ್ಕೆ ಸಾಧ್ಯವಿದೆಯೋ ಅಂತಹ ಕಡೆಗಳಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕು. ಹೊಸ ಹೊಸ ಕೆರೆಗಳನ್ನು ನಿರ್ಮಾಣ ಮಾಡುವುದಕ್ಕೆ ಕೂಡಲೇ ಏರ್ಪಾಡು ಮಾಡಬೇಕಾಗಿದೆ. 64. ಫ್ಯಾಮಿನ್ ರಿಲೀಫ್ ವರ್ಕ್ಸ್‌ನಲ್ಲಿ ಕಳೆದ ವರ್ಷದಂತೆ ಈ ವರ್ಷವು ಪಿ. ಡಬ್ಲ್ಯು. ಡಿ. ಯವರು ಕೈಗೆ ಹಾಕಿ ಅವರ ಮೂಲಕ ಆ ಕೆಲಸಗಳನ್ನು ತೆಗೆದುಕೊಳ್ಳಬೇಕು. ಈ ರೀತಿ ತೆಗೆದುಕೊಂಡರೆ ಶಾಶ್ವತ ಪರಿಹಾರ ಕಾಮಗಾರಿ ತೆಗೆದುಕೊಂಡಂತಾಗುತ್ತದೆ. ಸುಮಾರು 8-10 ಹಳ್ಳಿಗಳಲ್ಲಿ ಇರುವವರಿಗೆ ಕೆಲಸಗಳು ಸಿಕ್ಕಿ ಆ ಕೆಲಸಗಳಿಂದ ಅವರ ಜೀವನೋಪಾಯವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಏನು ಬರಗಾಲ ಬಂದಿದೆಯೆಂದು ಹೇಳುತ್ತಾರೋ ಅದಕ್ಕಾಗಿ ಪರಿಹಾರ ಕಾಮಗಾರಿಗಳನ್ನು ಇವರು ತೆಗೆದುಕೊಂಡು ಮುಂದಿನ ಜನವರಿ 15ನೇ ತಾರಿಖಿನವರೆಗೆ ಮುಂದುವರಿಸಬಹುದು. ಆಮೇಲೆ ಮಳೆ ಬಂದರೆ ರೈತಾಪಿ ಜನಗಳಿಗೆ ಕೆಲಸಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮುಂಗಾರು ಮಳೆ ಮಾರ್ಚ್ 25ರ ಮೇಲೆ ಷುರು ಆಗುತ್ತದೆ. ಆದ್ದರಿಂದ ತಕ್ಷಣವೇ ರೈತಾಪಿ ಜನಗಳಿಗೆ ಕೆಲಸ ಕಾರ್ಯಗಳನ್ನು ಒದಗಿಸಿ ಕೊಡುವ ದೊಡ್ಡ ಜವಾಬ್ದಾರಿ ಸರ್ಕಾರದ ಮೇಲೆ ಇರುತ್ತದೆ. ಸುಮ್ಮನೆ ಅಭಾವ ಬಂತು, ಎಲ್ಲೋ ಗಲಾಟೆ ಮಾಡಿದರು ಎಂದು 10 ಸಾವಿರ ರೂಪಾಯಿಗಳನ್ನು ಕೊಟ್ಟು, ಯಾವದೋ ಕೆಲಸಗಳನ್ನು ಮಾಡಿದರು ಎಂಬುದಾಗಿ ಹೇಳಬಾರದು. ರೈತ ತನ್ನದೇ ಆದಂಥ ಸರ್ಕಾರವನ್ನು ರಚನೆಮಾಡಿಕೊಂಡಿರುವ ಕಾಲದಲ್ಲಿ ಮಾನವೀಯತೆ ದೃಷ್ಟಿಯಿಂದ ಸರ್ಕಾರದವರು ಅವನಿಗೆ ಏನು ನೆರವನ್ನು ಕೊಡಬೇಕೆಂಬ ಅರಿವನ್ನು ಮಾಡಿಕೊಳ್ಳಬೇಕು.

ಇನ್ನೊಂದು ಸಲಹೆ. ಮುಂಗಾರು ಫಸಲು ಈಗ ಇಲ್ಲ. ದನಗಳಿಗೆ ಮೇಯುವುದಕ್ಕೆ ಮೇವು ಇಲ್ಲ. ಎಲ್ಲಿ ನೀರಾವರಿ ಪ್ರದೇಶವಿದೆಯೋ ಅಂತಹ ಕಡೆಗಳಲ್ಲಿ ಮಾತ್ರ ಬತ್ತ ಹಾಕಿದ್ದಾರೆ. ಅಲ್ಲಿ ಹುಲ್ಲು ಕೊಂಡುಕೊಂಡು ಬರಬೇಕಾದಂಥ ಪರಿಸ್ಥಿತಿ ಈಗ ಇದೆ. ಎಲ್ಲಿ ಹುಲ್ಲು ಇಲ್ಲ, ಅಲ್ಲಿಗೆ ಹುಲ್ಲನ್ನು ಒದಗಿಸಿಕೊಡುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಬಹುಶಃ ಈ ರೀತಿ ಒದಗಿಸುವುದಕ್ಕೆ ಸರ್ಕಾರಕ್ಕೆ ಕಷ್ಟವಾಗಬಹುದು, ನಮ್ಮಲ್ಲಿ 8—10 ದಿವಸಗಳಿಗೆ ಒಂದು ಲಾರಿ ಹುಲ್ಲನ್ನು ಹಂಚತಕ್ಕ ವ್ಯವಸ್ಥೆ ಇದೆ. ಇದು ಅಷ್ಟು ಸಮರ್ಪಕವಾದ ವ್ಯವಸ್ಥೆಯಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ಮನವಿಮಾಡಿಕೊಳ್ಳುವುದೇನೆಂದರೆ, ಜನವರಿ ಮತ್ತು ಏಪ್ರಿಲ್ ತಿಂಗಳೊಳಗೆ ರೈತರಿಗೆ ಈ ತಕಾವಿ ಸಾಲಗಳ ರೂಪದಲ್ಲಿ ಸಹಾಯ ಮಾಡಿದರೆ, ಅವರು ತಮಗೆ ಬೇಕಾದ ಹುಲ್ಲನ್ನು ಕೊಂಡುಕೊಳ್ಳಬಹುದು , ಮತ್ತು ಇದರಿಂದ ಅವರ ಜಾನುವಾರುಗಳನ್ನು ಸಾಕುವುದಕ್ಕೆ ಅನುಕೂಲವಾಗುತ್ತದೆ.

ಈಗ ಕಂಟೂರ್ ಬಂಡಿಂಗ್ ಕೆಲಸಗಳಿಗಾಗಲಿ, ಕಾಡು ಬೆಳೆಸುವ ಕೆಲಸಕ್ಕಾಗಲಿ, ಅಥವಾ ಪಿ. ಡಬ್ಲ್ಯು. ಡಿ. ಕೆಲಸಗಳಿಗಾಗಲಿ, ಕೊಡುತ್ತಿರುವ ರೂ. 1-31 ರೇಟ್ ಏನಿದೆ ಅದು ಬಹಳ ಕಡಿಮೆ. ಈ ದಿವಸ 50 ಲಕ್ಷ ರೂಪಾಯಿಗಳ ನೆರವು 64. ಫ್ಯಾಮಿನ್—ಬಿ—ರಿಲೀಫ್ ವರ್ಕ್ಸ್—ಇ ಪ್ರಕಾರ ಏನು ಒದಗಿಸಿದ್ದೀರಿ, ಅದು ಏನೂ ಸಾಲದು. ಅದನ್ನು ಇನ್ನೂ ಹೆಚ್ಚಿಸಬೇಕು. ಇದಕ್ಕೆ ಒಂದು ಶಾಶ್ವತ ಪರಿಹಾರವನ್ನು ಮಾಡದಿದ್ದರೆ, ಈ ಸಮಸ್ಯೆಯು ಬಗೆಹರಿಯಲು ಸಾಧ್ಯವಿಲ್ಲ. ಆದ್ದರಿಂದ ದೊಡ್ಡದೊಡ್ಡ ಕೆರೆಗಳನ್ನು ನಿರ್ಮಾಣ ಮಾಡುವುದಕ್ಕೆ ಪಂಪ್‌ಸೆಟ್ಟುಗಳನ್ನು ಇಟ್ಟುಕೊಳ್ಳುವುದಕ್ಕೆ ಸರ್ಕಾರದವರು ಸಹಾಯವನ್ನು ಒದಗಿಸಿ, ನೀರಾವರಿ ಸೌಲಭ್ಯಗಳನ್ನು ಜಾಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡರೆ, ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗುತ್ತದೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

4-00 P. M.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಅಭಾವ ಪರಿಸ್ಥಿತಿಯ ಬಗ್ಗೆ ಈಗಾಗಲೇ ಹಲವು ಸದಸ್ಯರು ಮಾತನಾಡಿ, ಸಭೆಯ ಮುಂದೆ ಅನೇಕ ವಿವರಗಳನ್ನು ಇಟ್ಟಿದ್ದಾರೆ. ಇತ್ತೀಚೆಗೆ ಮಳೆಯಿಂದಾಗಿ ಸ್ವಲ್ಪ ಮಟ್ಟಿಗೆ ಪರಿಸ್ಥಿತಿ ಸುಧಾರಿಸಿದ್ದರೂ

ಕೂಡ ಪೂರ್ಣವಾಗಿ ಅಭಾವ ಪರಿಸ್ಥಿತಿಯಿಂದ ಪಾರಾಗಿದ್ದಾರೆನ್ನುವ ಭ್ರಮೆ ಸರ್ಕಾರಕ್ಕಾಗಲಿ, ಅಥವಾ ಸಭೆಗಾಗಲಿ ಇರಬಾರದು ಎಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಅತ್ಯವಶ್ಯವಾಗಿ ಯಾವಾಗ ಮಳೆ ಬೇಕಾಗಿತ್ತೋ, ಆ ಸಮಯದಲ್ಲಿ ಮಳೆ ಇಲ್ಲದಿದ್ದರೂ ಈಚೆಗೆ ಮಳೆ ಸ್ವಲ್ಪ ಚೆನ್ನಾಗಿ ಆಗಿದೆ. ಆದರೂ ಕೂಡ 16 ಆಣೆ ಬೆಳೆಯಾಗುತ್ತದೆ ಎಂದು ನಿರೀಕ್ಷಿಸುವುದು ಸರಿಯಲ್ಲ. ಮುಂದೆ ಸರಿಯಾಗಿ 2–3 ವಾರ ಮಳೆಯಾದರೂ ಕೂಡ, ಕೋಲಾರ ಜಿಲ್ಲೆಯ ಮಟ್ಟಿಗೆ ಹೇಳುವು ದಾದರೆ, ಅಲ್ಲಿ ಶೇಕಡಾ 50 ಭಾಗ ಮಾತ್ರ ಬೆಳೆ ಬರುವ ನಿರೀಕ್ಷೆ ಇದೆ. ಎಲ್ಲಾ ಕಡೆ ಸಣ್ಣ ಕರೆಗಳು ತುಂಬಿದೆ, ಮತ್ತು ಭತ್ತದ ಫಸಲು ಚೆನ್ನಾಗಿ ಬರುತ್ತದೆ ಎನ್ನುವ ಭಾವನೆ ಸರ್ಕಾರಕ್ಕೆ ಇದ್ದ ಹಾಗೆ ಕಾಣುತ್ತದೆ. ಮಳೆ ಎಲ್ಲಾ ಕಡೆ ಬಿದ್ದದ್ದು ನಿಜ. ಆದರೆ ಕೆಲವು ಕಡೆ ಸಣ್ಣ ನೀರಾವರಿ ಕರೆಗಳು ತುಂಬಿಲ್ಲ. ಆದ್ದರಿಂದ ಅಂತಹ ಪ್ರದೇಶಗಳಲ್ಲಿ ರೈತರ ಕೈಗೆ ಭತ್ತ ಬರುತ್ತದೆಂದು ಹೇಳಲು ಸಾಧ್ಯ ವಿಲ್ಲ. ಅದು ಮುಂದಿನ ಪರಿಸ್ಥಿತಿಯ ಮೇಲೆ ಅವಲಂಬಿಸಿಕೊಂಡಿದೆ. ಮಾನ್ಯ ಶಿವಪ್ಪನವರು ಸಂಕಟ ಬಂದಾಗ ವೆಂಕಟರಮಣ ಅಂದ ಹಾಗೆ, ಅಭಾವ ಪರಿಸ್ಥಿತಿ ಉಂಟಾಗ ಕೂಡಲೇ ಏನಾದರೂ ಮಾಡ ಬೇಕು, ಮತ್ತು ಆದರ ಬಗ್ಗೆ ಒಂದೊಂದು ಜಿಲ್ಲೆಗೆ 4–5 ಲಕ್ಷ ಹಣ ಕೊಟ್ಟು ರಿಲೀಫ್ ಕಾಮಗಾರಿ ಗಳನ್ನು ಪ್ರಾರಂಭಮಾಡುತ್ತಿದ್ದಾರೆಂದು ಹೇಳಿದರು. ಹಾಗೆ ಮಾಡಿದರೆ ಸಾಲದು. ಅದು ಮಾಮೂಲಾಗಿ ನಡೆಯುತ್ತಾ ಇದೆ. ಮಾನ್ಯ ಹುಚ್ಚುಮಾಸ್ತಿಗೌಡರು ಹೇಳಿದ ಹಾಗೆ, ಇವೊತ್ತಿನ ದಿವಸ ಕ್ಷಾಮ ಪರಿಹಾರಕ್ಕೆ ಕೊಟ್ಟಂತಹ ಹಣ ಅದು ಸದುಪಯೋಗವಾಗದೆ, ದಳ್ಳಾಳಿಗಳ ಕೈಗೆ ಸೇರುತ್ತದೆ. ಒಂದು ಊರಿನಲ್ಲಿ ಒಂದು ಕ್ಷಾಮ ಬಂದರೆ, ಅಲ್ಲಿರುವ ಬುದ್ಧಿವಂತ ಜನರು ಈ ಅವಕಾಶವನ್ನುಪಯೋಗಿಸಿಕೊಂಡು ಹಣ ಸಂಪಾದನೆ ಮಾಡುವುದಕ್ಕೆ ಅವಕಾಶವಾಗುತ್ತಿದೆ. ಆದ್ದರಿಂದ ಇದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕೈಗೊಳ್ಳದಿದ್ದರೆ, ಇದೇ ರೀತಿ ಅಭಾವ ಪರಿಸ್ಥಿತಿಯು ಎಲ್ಲಾ ಜಿಲ್ಲೆಗಳಲ್ಲಿ ಹರಡಿ ಇನ್ನೂ ಪರಿಸ್ಥಿತಿ ವಿಕೋಪಕ್ಕೇರುವುದು. ಇದು ಸರ್ಕಾರಕ್ಕೆ ಗೊತ್ತಿದ್ದರೂ ಅಂಥಹ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುತ್ತಿಲ್ಲ. ಕೋಲಾರ, ಬಿಜಾಪುರ ಮುಂತಾದ ಜಿಲ್ಲೆಗಳಲ್ಲಿ ಇಂತಹ ಪರಿಸ್ಥಿತಿಯು ಆಗಾಗ್ಯೆ ಉಂಟಾಗುತ್ತದೆ. ಆದರೂ ಕೂಡ ಇದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕೈಗೊಳ್ಳುವುದರಲ್ಲಿ ಸರ್ಕಾರದವರು ವಿಫಲರಾಗಿ ದ್ದಾರೆ. ಸ್ವಾತಂತ್ರ್ಯ ಬಂದು 23 ವರ್ಷವಾದರೂ ಕೂಡ, ಪ್ರತಿ ವರ್ಷ ಅನೇಕ ಜಿಲ್ಲೆಗಳ ಪ್ರತಿನಿಧಿಗಳು ಸರ್ಕಾರಕ್ಕೆ ನಾನಾ ಸಲಹೆಗಳನ್ನು ಕೊಟ್ಟರೂ, ಇದರ ಬಗ್ಗೆ ಯಾವ ಗಮನವನ್ನೂ ಕೊಟ್ಟಿಲ್ಲ. ಒಂದು ಸಲ ಯಾವುದಾದರೂ ಕಾರ್ಯಕ್ರಮವನ್ನು ಬರಗಾಲ ಪ್ರದೇಶದಲ್ಲಿ ಕೈಗೊಂಡರೆ ಪುನಃ ಪರಿಸ್ಥಿತಿ ಬದಲಾವಣೆಯಾದಮೇಲೆ ಅದನ್ನು ಕೈಬಿಟ್ಟುಬಿಡುತ್ತಾರೆ. ಇದೇ ಪದ್ಧತಿಯನ್ನು ಮುಂದುವರಿಸಿದರೆ, ಇದು ನಿಜವಾಗಿಯೂ ದೇಶಕ್ಕೆ ಒಳ್ಳೆಯದಲ್ಲ; ಮತ್ತು ಇದರಿಂದ ಕೋಲಾರ, ಬೆಂಗಳೂರು, ತುಮಕೂರು, ಚಿತ್ರದುರ್ಗ ಮತ್ತು ಇತರ ಅಭಾವ ಪ್ರದೇಶದ ಜನರಿಗೆ ದ್ರೋಹ ಮಾಡಿದ ಹಾಗಾಗುತ್ತದೆ. ಹಿಂದಿನ ಕಂದಾಯ ಮಂತ್ರಿಗಳಾಗಿದ್ದ ಮಾನ್ಯ ಎಂ. ವಿ. ಕೃಷ್ಣಪ್ಪ ನವರು 250 ಕೋಟಿ ರೂಪಾಯಿಯ ಬೃಹತ್ ಯೋಜನೆ ಒಂದು ತಯಾರಾಗಿದೆ, ಮತ್ತು ಅದನ್ನು ಜಾರಿಗೆ ಕೊಟ್ಟರೆ, ಯಾವ ಪ್ರದೇಶದಲ್ಲಿ ಮಳೆ ಇಲ್ಲ, ಬೆಳೆ ಇಲ್ಲ, ಅಂತಹ ಕಡೆ ನೀರಾವರಿ ಬಾವಿ ಗಳನ್ನು ಶಾಶ್ವತವಾಗಿ ಹೆಚ್ಚಾಗಿ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದ್ದರು. ನಂತರ ಅವರು ಹೋದರು, ಆದರೆ ಆ ಯೋಜನೆ ಸತ್ತುಹೋಗಿದೆಯೇ, ಬದುಕಿದೆಯೇ ಎಂದು ಗೊತ್ತಾಗಿಲ್ಲ. ಮಾನ್ಯ ಆಲೂರು ಹನುಮಂತಪ್ಪನವರು ನೀರಾವರಿ ಮಂತ್ರಿಯಾದ ಸಮಯದಲ್ಲಿ, ಒಂದು ಬೃಹತ್ ಯೋಜನೆಯನ್ನು ತಯಾರು ಮಾಡಿದ್ದೇವೆ, ಕಮ್ಯುನಿಟಿ ವೆಲ್ಸ್ ಮಾಡಿಸಿ ಸಣ್ಣ ಸಣ್ಣ ಹಿಡುವಳಿದಾರರಿಗೆ ಸಹಾಯ ಮಾಡುತ್ತೇವೆ, ವ್ಯವಸಾಯದ ಅಭಿವೃದ್ಧಿ ಮಾಡುತ್ತೇವೆ ಇತ್ಯಾದಿ ಎಲ್ಲಾ ಹೇಳುತ್ತಿದ್ದರು. ಈಗ ಅವರು ನೀರಾವರಿ ಇಲಾಖೆ ಬಿಟ್ಟು ಬಿಟ್ಟು ಆರಣ್ಯಕ್ಕೆ ಹೋಗಿದ್ದಾರೆ. ಈಗಿನ ನೀರಾವರಿ ಮಂತ್ರಿಯವರು ಏನೂ ಹೇಳುವುದಿಲ್ಲ, ಮತ್ತು ಅವರಿಗೆ ಆರೋಗ್ಯ ಚೆನ್ನಾಗಿಲ್ಲ ಇದುವರೆಗೆ ಏನೋ ಒಂದು ಕಾಟಾಚಾರಕ್ಕೆ ಒಂದೊಂದು ಯೋಜನೆ ಮಾಡುತ್ತೇವೆಂದು ಕೊಡುವ ಭರವಸೆಗಳು ನಿಜವಾಗಿಯೂ ಬರಗಾಲ ಪೀಡಿತ ಪ್ರದೇಶಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಮಾಡುವಂತಹ ಉದ್ದೇಶದಿಂದ ಇಲ್ಲ. ಇದರಲ್ಲಿ ಸರ್ಕಾರದವರು ವಿಫಲರಾಗಿದ್ದಾರೆಂದು ನಾನು ಹೇಳಬಯಸುತ್ತೇನೆ. ಅದರಲ್ಲೂ ಕೋಲಾರ ಜಿಲ್ಲೆಯ ಪರಿಸ್ಥಿತಿಯನ್ನು ತೆಗೆದುಕೊಂಡರೆ, ಅಲ್ಲಿ ಮೀಡಿಯಂ ಇರಿಗೇಷನಾಗಲಿ, ಅಥವಾ ಮೇಜರ್ ಇರಿಗೇಷನಾಗಲಿ, ಮಾಡುವುದಕ್ಕೆ ಅವಕಾಶವಿಲ್ಲ. ಏನಾದರೂ ಸಣ್ಣ ನೀರಾವರಿ ಕೆಲಸಗಳನ್ನು, ಕೆರೆಗಳನ್ನು ಮುಂತಾದುವುಗಳನ್ನು ಅಲ್ಲಿ ಮಾಡಲು ಅವಕಾಶ ಇದೆ. ಕೆರೆಗಳಲ್ಲಿ ಬಿದ್ದಂತಹ ಹೂಳು ಮಣ್ಣನ್ನು ತೆಗೆಸಿ, ಇದ್ದ ನೀರಾವರಿ ಬಾವಿಗಳನ್ನು ಉತ್ತಮಪಡಿಸಿ, ಒಂದು ಶಾಶ್ವತವಾಗಿರುವ ಪರಿಹಾರ ಯೋಜನೆಯನ್ನು ಜಾರಿಗೆ ತರುವುದು ಉತ್ತಮವೆಂದು ಹೇಳಬಯಸುತ್ತೇನೆ. 3-4 ವರ್ಷಗಳ ಹಿಂದೆ ಬಾವಿಗಳಿಗೆ ಹೆಚ್ಚಿನ ಹಣವನ್ನು ಕೊಟ್ಟರು. ಆದರೆ ಇತ್ತೀಚೆಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಸಾಲದ ಬಾಕಿ 100ಕ್ಕೆ

(ಶ್ರೀ ಪಿ. ವೆಂಕಟಗಿರಿಯಪ್ಪ)

70 ರಷ್ಟು ಹಣ ವಸೂಲು ಆಗಿದ್ದರೆ ಅವರಿಗೆ ಹಣ ಕೊಡುತ್ತೇವೆ ಬೇರೆಯವರಿಗೆ ಕೊಡುವುದಿಲ್ಲ ಎಂದು ಕಂಡೀಷನ್ ಹಾಕಿರುವುದರಿಂದ ನಮ್ಮ ಕೋಲಾರ ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳನ್ನು ಬಿಟ್ಟು ಬೇರೆ ಯಾವ ತಾಲ್ಲೂಕುಗಳಲ್ಲಿಯೂ ರೈತರಿಗೆ ಸಾಲ ದೊರೆಯುತ್ತಿಲ್ಲ. ಇದರಿಂದ ಆ ಪ್ರದೇಶದ ರೈತರಿಗೆ ತುಂಬಾ ತೊಂದರೆಯಾಗಿದೆ. ಈಗ ಒಂದು ತಾಲ್ಲೂಕಿನಲ್ಲಿ ಸೊಸೈಟಿಯಲ್ಲಿ ಸಾಲ ತೆಗೆದುಕೊಂಡಿರತಕ್ಕ ಸಾಲಗಾರರು ಒಂದು ಸಾವಿರ ಜನರು ಇದ್ದರೆ ಅದರಲ್ಲಿ ಅನೇಕ ಜನ ಸಣ್ಣ ಸಣ್ಣ ರೈತರು ತಾವು ತೆಗೆದುಕೊಂಡಿರತಕ್ಕ ಸಾಲವನ್ನು ವಾಪಸ್ಸು ಕೊಟ್ಟಿದ್ದಾರೆ. ಕೆಲವರು ಸರ್ಕಾರದಲ್ಲಿ ಹೆಚ್ಚು ಪ್ರಭಾವ ಇರತಕ್ಕವರು ಸಾಲವನ್ನು ವಾಪಸ್ಸು ಕೊಡದೆ ರಿಜಿಸ್ಟ್ರಾರ್ ಅವರ ಹತ್ತಿರ ಇನ್‌ಫ್ಲುಯನ್ಸ್ ಮಾಡಿ ಸಾಲವನ್ನು ವಾಪಸ್ಸು ಕೊಡುವುದಕ್ಕೆ ಕಾಲಾವಕಾಶವನ್ನು ತೆಗೆದುಕೊಂಡಿದ್ದಾರೆ. ಇದರಿಂದ ಯಾರೋ ಕೆಲವರು ಬಾಕಿದಾರರಾಗಿದ್ದರೆ ಒಂದು ತಾಲ್ಲೂಕಿನ ಜನಗಳಿಗೇ ಸಾಲವನ್ನು ಕೊಡುವುದಿಲ್ಲ ಎಂದರೆ ಯಾವ ನ್ಯಾಯ ? 100 ಕ್ಕೆ 70 ಭಾಗದಷ್ಟು ಜನ ಸಾಲವನ್ನು ವಾಪಸ್ಸು ಕೊಟ್ಟಿದ್ದರೆ ಅಂಥವರಿಗೆ ಸಾಲವನ್ನು ಕೊಡುತ್ತೇವೆ ಎಂದರೆ ಹೇಗೆ ? ಶೇಕಡಾ 50 ರಷ್ಟು ಬಾಕಿ ವಸೂಲಾಗಿರುವ ಕಡೆ ಸೊಸೈಟಿಗಳು ರೈತರಿಗೆ ಸಾಲವನ್ನು ಕೊಡಿಸುವಂತಹ ವ್ಯವಸ್ಥೆ ಮಾಡಬೇಕು. ಸುಮಾರು 40–50 ಎಂ.ಎಲ್.ಎ. ಗಳು ಸಹಿ ಹಾಕಿ ಒಂದು ಮನವಿಯನ್ನು ನಾವು ಮಾನ್ಯ ಮುಖ್ಯ ಮಂತ್ರಿಗಳಿಗೂ ಮತ್ತು ಹಣಕಾಸಿನ ಮಂತ್ರಿಗಳಿಗೂ ಕಳುಹಿಸಿದ್ದೇವೆ. ಆದರೆ ಅದನ್ನು ಇದುವರೆಗೂ ಪರಿಶೀಲನೆ ಮಾಡಿಲ್ಲ. ನಾವು ಯಾವ ಅಧಿಕಾರಿಗಳ ಹತ್ತಿರ ಹೋಗಿ ಕೇಳಿದರೂ ಕೂಡ ಎಲ್ಲೆಲ್ಲಿ 100ಕ್ಕೆ 70 ಭಾಗ ಸಾಲ ಕೊಟ್ಟು ಹಣ ವಸೂಲಾಗಿಲ್ಲವೋ ಅಂಥಾ ಕಡೆ ಸೊಸೈಟಿಗಳಿಂದ ಸಾಲವನ್ನು ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಕಂದಾಯ ಸಚಿವರಲ್ಲಿ ಮನವಿಮಾಡಿಕೊಳ್ಳುವುದು ಇಷ್ಟೆ. ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಬಾವಿಗಳನ್ನು ತೋಡಿಸುವುದಕ್ಕೆ ಅವಕಾಶ ಇದೆ ಅಂಥಾ ಸ್ಥಳಗಳಲ್ಲಿ ಬಾವಿಗಳನ್ನು ತೆಗೆಯುವುದಕ್ಕೆ ಸಾಲವನ್ನು ಕೊಡುವುದನ್ನು ಖಂಡಿತವಾಗಿಯೂ ನಿಲ್ಲಿಸಬೇಡಿ. ರಿಲೀಫ್ ಕಾಮಗಾರಿಗಳನ್ನು ಕೈಗೊಳ್ಳದಿದ್ದರೂ ಪರವಾಯಿಲ್ಲ. ಅದಕ್ಕೆ ಖರ್ಚು ಮಾಡತಕ್ಕಂಥ ಹಣವನ್ನು ಸೊಸೈಟಿಗಳಿಗೆ ಕೊಟ್ಟು ಅವುಗಳ ಮುಖಾಂತರ ರೈತರಿಗೆ ಹಣಸಹಾಯ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಬಾವಿಗಳನ್ನು ತೋಡಿಸುವುದಕ್ಕೆ ಹಣ ಸಹಾಯ ಮಾಡಿ ಬಾವಿಗಳು ಆಗುವುದಾದರೆ ಅದರಿಂದಲೇ ಪರಿಹಾರ ಕೆಲಸವಾಗುತ್ತದೆ. ಅದು ಶಾಶ್ವತವಾದ ಪರಿಹಾರವಾಗುತ್ತದೆ. ಜನಗಳಿಗೆ ಅದರಿಂದ ಅನುಕೂಲವಾಗುತ್ತದೆ ರಿಲೀಫ್ ಕಾಮಗಾರಿಗೆ ಖರ್ಚು ಮಾಡುವ ಹಣವನ್ನು ಹೆಚ್ಚು ಹೆಚ್ಚಾಗಿ ನೀರಾವರಿ ಬಾವಿಗಳಿಗೆ ಉಪಯೋಗಿಸಬೇಕು ಎಂದು ನಾನು ಹೇಳುತ್ತೇನೆ. ಫೀಡರ್ ಚಾನಲ್‌ಗಳು, ರಸ್ತೆಗಳು ಇವುಗಳನ್ನೆಲ್ಲಾ ಮಾಡುವುದಕ್ಕೆ ಈ ಹಣವನ್ನು ಉಪಯೋಗಿಸುವುದರಿಂದ ಖಂಡಿತಾ ದುರ್ವ್ಯಯವಾಗುತ್ತದೆ. ಅವಶ್ಯಕವಿರುವ ರಸ್ತೆಗಳಿಗೆ ಮಾತ್ರ ಹಣವನ್ನು ಖರ್ಚು ಮಾಡಬೇಕು. ಫೀಡರ್ ಚಾನಲ್, ಕೆರೆ ಡೀಸಿಲ್ಟಿಂಗ್ ಇಂಥವುಗಳಿಗೆಲ್ಲಾ ಈ ಹಣವನ್ನು ಖರ್ಚು ಮಾಡಬಾರದು. ಒಂದುವೇಳೆ ಸರ್ಕಾರದವರು ಜನಗಳಿಗೆ ಸಹಾಯ ಮಾಡಬೇಕು ಎಂದು ರಿಲೀಫ್ ವರ್ಕ್ಸ್ ಅನ್ನು ಕಳೆದ ತಿಂಗಳು ಪ್ರಾರಂಭ ಮಾಡಿದರೂ ಕೂಡ ಅದರಿಂದ ನಮ್ಮ ಜಿಲ್ಲೆಯ ಜನಗಳಿಗೆ ಹೆಚ್ಚು ಪ್ರಯೋಜನವಾಗಿಲ್ಲ. ಏತಕ್ಕೆಂದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಎಲ್ಲಾ ಹುಡುಗರಾದ ಪ್ರೊಬೇಷನರಿ ಆಫೀಸರುಗಳೇ ಇದ್ದಾರೆ. ಎಲ್ಲರೂ 25–30 ವರ್ಷ ವಯಸ್ಸುಳ್ಳವರು. ಡೆಪ್ಯುಟಿ ಕಮೀಷನರೂ ಕೂಡ ಚಿಕ್ಕ ವಯಸ್ಸಿನವರು ಅವರು ಎಲ್ಲರನ್ನೂ ಮೀಟಿಂಗ್ ಕರೆದು ಕ್ರಮಬದ್ಧವಾಗಿ ರೂಲ್ಸ್ ಪ್ರಕಾರ ಕೆಲಸಗಳನ್ನು ಮಾಡುತ್ತಾರೆ. ಬೇರೆ ಜಿಲ್ಲೆಗಳಲ್ಲಿ ಪರಿಹಾರ ಕಾಮಗಾರಿಗಳಿಗೆ ಹಣವನ್ನು ಕೊಟ್ಟು ಜನಗಳಿಗೆ ಕೆಲಸವನ್ನು ಒದಗಿಸಿಕೊಟ್ಟು ಅನುಕೂಲ ಮಾಡಿದರು. ಆದರೆ ನಮ್ಮ ಜಿಲ್ಲೆಯಲ್ಲಿ ಅಸಿಸ್ಟೆಂಟ್ ಕಮೀಷನರು ಈ ತಿಂಗಳು 3ನೇ ತಾರೀಖು ರಿಲೀಫ್ ವರ್ಕಿಗೆ ಸಂಬಂಧಪಟ್ಟ ಕಮಿಟಿ ಮೀಟಿಂಗ್ ಕರೆದಿದ್ದಾರೆ. ಅಲ್ಲಿ ತೀರ್ಮಾನ ಆದನಂತರ ಅವರು ಕೊಡುವ ಕಂಡೀಷನ್‌ಗಳನ್ನು ಅನುಸರಿಸಿ ಕೆಲಸ ಪ್ರಾರಂಭ ಆಗಬೇಕು. ಅನುಭವ ಇಲ್ಲದೇ ಇರುವ ಅಧಿಕಾರಿಗಳನ್ನು ನಮ್ಮ ಜಿಲ್ಲೆಗೆ ಹಾಕಿ ಅದರಿಂದ ನಮಗೆ ಬಹಳ ತೊಂದರೆಯಾಗಿದೆ. ಹಿಂದಿನ ತಿಂಗಳೇ ಬೇರೆ ಕಡೆ ಕ್ಷಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡಿರುವಾಗ ನಮ್ಮ ಜಿಲ್ಲೆಯಲ್ಲಿ ಪರಿಹಾರ ಕಾಮಗಾರಿಗಳನ್ನು ಮಾಡದೆ ಇರುವುದಕ್ಕೆ ಸರ್ಕಾರದವರು ಕಾರಣರೇ, ಅಧಿಕಾರಿಗಳು ಕಾರಣರೇ ಎಂಬುದನ್ನು ತಿಳಿಸಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಮುಖ್ಯವಾಗಿ ನೀರಾವರಿ ಬಾವಿಗಳಿಗೆ ಸರ್ಕಾರದವರು ಹಣಸಹಾಯ ಮಾಡಬೇಕು. ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿನವರು ಸಾಲಕೊಟ್ಟಂತಹ ಹಣದಲ್ಲಿ ಶೇಕಡಾ 70 ಭಾಗ ವಸೂಲು ಮಾಡಿದ ಮೇಲೆ ಮತ್ತೆ ಸಾಲ ಕೊಡಬೇಕೆಂದು ಏನು ಕಂಡೀಷನ್ ಹಾಕಿದ್ದಾರೆ ಅದನ್ನು ಕನಿಷ್ಠ

50 ಪರ್ಸೆಂಟಿಗೆ ಇಳಿಸಬೇಕು. ಸಾಲದ ಬಾಕಿ ಇರುವವರಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಂಡು ಹಣವನ್ನು ವಸೂಲು ಮಾಡಬೇಕು. ಯಾರೋ 100-200 ಜನಗಳು ತಾವು ತೆಗೆದುಕೊಂಡ ಸಾಲದ ಹಣವನ್ನು ಕೊಡದಿದ್ದಪಕ್ಷದಲ್ಲಿ ಇಡೀ ತಾಲ್ಲೂಕಿನ ಜನಗಳಿಗೆ ಸಾಲದ ಸೌಲಭ್ಯವನ್ನು ನಿಲ್ಲಿಸಿ ಜನಗಳಿಗೆ ಅನ್ಯಾಯ ಮಾಡಬೇಡಿ ಎಂದು ನಾನು ಸರ್ಕಾರಕ್ಕೆ ತಿಳಿಸ ಬಯಸುತ್ತೇನೆ.

ಸಾಯಿಲ್ ಕನ್‌ಸರ್‌ವೇಷನ್, ಭೂಸಂರಕ್ಷಣಾ ಕೆಲಸಕ್ಕಾಗಿ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಆ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಈಗ ಇರತಕ್ಕಂಥ ಬದುಗಳು ಎಷ್ಟು ಪ್ರಮಾಣದಲ್ಲಿ ಇರಬೇಕೋ ಅಷ್ಟು ಪ್ರಮಾಣದಲ್ಲಿ ಇಲ್ಲ. ಮಳೆ ಬಂದು ವೇಸ್ಟ್‌ವೇರ್‌ಗಳೆಲ್ಲಾ ಕಿತ್ತುಹೋಗುತ್ತಿವೆ. ನೀರು ನುಗ್ಗುತ್ತದೆ ಬದುಗಳೆಲ್ಲಾ ಕಿತ್ತು ಹೋಗುತ್ತವೆ. ಸಾಯಿಲ್ ಕನ್‌ಸರ್‌ವೇಷನ್ ಕೆಲಸವನ್ನು ಒಳ್ಳೆಯ ಅನುಭವಶಾಲಿಗಳಾದವರು ಮಾಡಿಸುವುದಿಲ್ಲ. ಬಹಳ ಬೇಗ ಬದುಗಳೆಲ್ಲಾ ಕಿತ್ತು ಹೋಗುತ್ತವೆ. ಮಣ್ಣು ಕೊಚ್ಚಿಹೋಗುತ್ತದೆ. ನೀರೂ ಹೋಗುತ್ತದೆ. ಆದ್ದರಿಂದ ಈ ಕೆಲಸಕ್ಕೆ ಹಣವನ್ನು ಖರ್ಚು ಮಾಡಿದರೂ ಪ್ರಯೋಜನವಿಲ್ಲ ದಂತಾಗಿದೆ. ಆದಕಾರಣ ಪ್ರಯೋಜನ ಆಗುವ ರೀತಿಯಲ್ಲಿ ಈ ಸಾಯಿಲ್ ಕನ್‌ಸರ್‌ವೇಷನ್ ಕೆಲಸವನ್ನು ಮಾಡಿಸಬೇಕು ಎಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಕ್ಷಾಮ ಪರಿಹಾರದ ಕಾಮಗಾರಿಗಳಿಗಾಗಿ ಖರ್ಚು ಮಾಡತಕ್ಕಂಥ ಹಣ ಯಾವ ರೀತಿಯಲ್ಲಿಯೂ ದುರುಪಯೋಗವಾಗದಂತೆ ಸರ್ಕಾರದವರು ಎಚ್ಚರಿಕೆಯನ್ನು ವಹಿಸಬೇಕು. ಮಾನ್ಯ ಮಂತ್ರಿಗಳಿಗೆ ಗೊತ್ತಿದೆ ಕೋಲಾರ ಜಿಲ್ಲೆ ಯಲ್ಲಿರುವ ಮಾಲೂರು ತಾಲ್ಲೂಕಿಗೆ ಸುಮಾರು 30-40 ಸಾವಿರ ರೂಪಾಯಿಗಳನ್ನು ಪರಿಹಾರ ಕಾಮಗಾರಿಗಾಗಿ ಕೊಟ್ಟಿದ್ದರು, ಮಾಲೂರು ತಾಲ್ಲೂಕಿನಲ್ಲಿ ತಾಲ್ಲೂಕ್ ಬೋರ್ಡ್ ಚುನಾವಣೆಯು ನಡೆಯುವ ಸಂದರ್ಭದಲ್ಲಿ ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳೊಬ್ಬರು ಅಲ್ಲಿ ಮೂರು ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿಸಿದ್ದಾರೆ. ಆ ಬಗ್ಗೆ ಈ ಸಭೆಯಲ್ಲಿ ಪ್ರಶ್ನೆ ಕೇಳಿದರೆ ಆ ತಾಲ್ಲೂಕು ಬೋರ್ಡ್ ಅಧ್ಯಕ್ಷರು ಜನಗಳಿಗೆ ಸಹಾಯ ಮಾಡಬೇಕು ಎಂದು ಕೆಲಸವನ್ನು ಮಾಡಿಸಿ ದ್ದಾರೆಂದು ಹೇಳಿದರು. ಆದ್ದರಿಂದ ಮಾಲೂರು ಪ್ರಕರಣ ಬೇರೆ ಕಡೆ ಆಗುವುದಕ್ಕೆ ಅವಕಾಶವನ್ನು ಕೊಡಬೇಡಿ. ಈ ಕೆಲಸಗಳನ್ನು ಗ್ರಾಮಸೇವಕರು ಮಾಡಿಸುವಂತೆ ಮಾಡಿ ಹಣವನ್ನು ಹಂಚುವ ವ್ಯವಸ್ಥೆ ಮಾಡಬೇಕು. ಕಂಟ್ರಾಕ್ಟರುಗಳು ಈ ಕೆಲಸಗಳನ್ನು ಮಾಡಿಸಿ ಅವರು ಹಣವನ್ನು ಪಡೆದು ಕೊಳ್ಳುವುದಕ್ಕೆ ಅವಕಾಶವನ್ನು ಕೊಡಬಾರದು. ಶಾಶ್ವತವಾದ ಪರಿಹಾರವನ್ನು ಒದಗಿಸುವುದಕ್ಕಾಗಿ ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡಿ ಅದರ ಪ್ರಕಾರ ಕೆಲಸಗಳನ್ನು ಮಾಡಿಸಬೇಕು. ಮುಖ್ಯವಾಗಿ ನೀರಾವರಿ ಬಾವಿಗಳಿಗೆ ಹೆಚ್ಚು ಹಣ ಸಹಾಯವನ್ನು ಮಾಡಿ ಹೆಚ್ಚು ಹೆಚ್ಚಾಗಿ ನೀರಾವರಿ ಬಾವಿಗಳನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಪಂಚಗಾವಿ (ಅರಭಾವಿ).—ಸ್ವಾಮಿ ಅಧ್ಯಕ್ಷರೇ ಈ ವರ್ಷ ನಾವು ಬಹಳ ಅಘಾದವಾದ ಭೀಕರ ಬರಗಾಲಕ್ಕೆ ತುತ್ತಾಗಿದ್ದೇವೆ. ಆದಕಾರಣ ಈ ಬಗ್ಗೆ ನಾವು ಈ ಚರ್ಚೆಯನ್ನು ಇಂದು ಈ ಮನೆಯಲ್ಲಿ ಪ್ರಾರಂಭ ಮಾಡಿದ್ದೇವೆ. ಬರಗಾಲದ ದೆಶೆಯಿಂದ ಜನಗಳಿಗೆ ಅನುಕೂಲ ಮಾಡಲು ಸರ್ಕಾರದವರು ಏನಾದರೂ ರಿಲೀಫ್ ಕಾಮಗಾರಿಗಳನ್ನು, ಕೆಲಸಗಳನ್ನು ಪ್ರಾರಂಭ ಮಾಡುತ್ತಾರೆ ಎಂದು ತಿಳಿದುಕೊಂಡು ಜನಗಳು ಸರ್ಕಾರದ ಕಡೆ ನೋಡುತ್ತಿದ್ದರು. ಈಗ ಅಲ್ಲಲ್ಲೇ ಪರಿಹಾರ ಕಾಮಗಾರಿಗಳ ಕೆಲಸಗಳು ಪ್ರಾರಂಭವಾಗಿದೆ. ಆದರೆ ಈ ಪರಿಹಾರದ ಸ್ವರೂಪ ಸಾಧಾರಣವಾಗಿ 19ನೇ ಶತಮಾನದಿಂದ ಇಂದಿನವರೆಗೂ ಒಂದೇ ರೀತಿಯಲ್ಲಿ ಮುಂದುವರಿದು ಕೊಂಡು ಬರುತ್ತಿದೆ. 20ನೆಯ ಶತಮಾನವನ್ನು ನಾವು ದಾಟಿದರೂ ಕೂಡ ಈ ಬರಗಾಲ ಪೀಡಿತ ಪ್ರದೇಶಗಳಿಗೆ ಪರಿಹಾರವನ್ನು ಕೊಡತಕ್ಕ ಸ್ವರೂಪ ಬದಲಾವಣೆಯಾಗಿಲ್ಲ ಎಂದು ಹೇಳುವುದಕ್ಕೆ ನನಗೆ ದುಃಖವಾಗುತ್ತದೆ. ನಮ್ಮ ಭಾಗದಲ್ಲಿ ಹಿಂದಿನಿಂದಲೂ ಈ ಪರಿಹಾರ ಕಾಮಗಾರಿಗಳ ಕೆಲಸವನ್ನು ಜನಗಳಿಗೆ ಒದಗಿಸುವಾಗ ಅಧಿಕಾರಿಗಳು ಕೂಲಿ ದರದಲ್ಲಿ ಮೂರನೇ ಒಂದು ಭಾಗವನ್ನು ಕಡಿತ ಮಾಡಿ ಜನಗಳಿಗೆ ಕೂಲಿಯನ್ನು ಕೊಡುತ್ತಿದ್ದರು. ಆದರೆ ಇವೊತ್ತು ಇಂಥಾ ತುಟ್ಟಿ ಕಾಲದಲ್ಲಿಯೂ ಕೂಡ ಹಿಂದಿನ ಹಾಗೆಯೇ ಕೂಲಿಯನ್ನು ಕಡಿತ ಮಾಡಿ ಪರಿಹಾರ ಕಾಮಗಾರಿ ಕೆಲಸ ಮಾಡಿದಂತಹ ಜನಗಳಿಗೆ ಕೂಲಿಯನ್ನು ಹಂಚುತ್ತಿದ್ದಾರೆ. ಈ ರೀತಿ ಕೂಲಿಯಲ್ಲಿ ಕಡಿತ ಮಾಡುವುದರಿಂದ ಒಬ್ಬೊಬ್ಬರಿಗೆ ಒಂದು ದಿವಸಕ್ಕೆ 8 ಆಣೆ 6 ಆಣೆ ಹೀಗೆಲ್ಲಾ ಕೂಲಿ ಸಿಕ್ಕುತ್ತದೆ. ಇದರಲ್ಲಿ ಜನಗಳಿಗೆ ಹೇಗೆ ಹೊಟ್ಟೆ ತುಂಬುತ್ತದೆ, ಅವರು ಹೇಗೆ ಕೆಲಸ ಮಾಡಬೇಕು ಎಂಬುದು ಅತ್ಯಂತ ದುಃಖದ ಮಾತಾಗಿದೆ. ಮನೆಯಲ್ಲಿ ದುಡಿಯುವವರು ಒಬ್ಬರು ಇದ್ದರೆ ತಿನ್ನುವವರು ನಾಲ್ಕಾರು ಜನರಿರುತ್ತಾರೆ. ಗಂಡ ಹೆಂಡತಿ ಇಬ್ಬರೂ ಕೂಡ ಸೇರಿಕೊಂಡು ದುಡಿದರೂ ಕೂಡ

(ಶ್ರೀ ಎ. ಆರ್. ಪಂಚಗಾವಿ)

ಮಕ್ಕಳನ್ನು ಸಾಕುವುದು ಕಷ್ಟವಾಗಿದೆ. ಒಬ್ಬನು ಕೆಲಸಕ್ಕೆ ಹೋಗಬೇಕಾದರೆ 8-10 ರೊಟ್ಟಿಗಳನ್ನು ಕಟ್ಟಿಕೊಂಡು ಹೋಗುತ್ತಾನೆ. ಆತನಿಗೆ ಕೊಡುವ ಸಂಬಳ ಆ ರೊಟ್ಟಿಗೆ ಸಾಲುವುದಿಲ್ಲ. ಇನ್ನು ಆತನು ಯಾವ ರೀತಿ ತನ್ನ ಹೆಂಡತಿ ಮಕ್ಕಳು ಮತ್ತು ತಂದೆತಾಯಂದಿರನ್ನು ಸಾಕುವುದು ಈ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕು ಬರ ಬಂದರೆ ಅದರ ಹೊಡೆತ ಬೀಳುವುದು ಮಕ್ಕಳಿಗೆ, ಮುದುಕರಿಗೆ ಮತ್ತು ಗರ್ಭಿಣಿಯರಿಗೆ. ಬರ ಬಂದ ಕಾಲದಲ್ಲಿ ಇಂತಹವರಿಗೆ ಸೂಕ್ತ ಏರ್ಪಾಡುಗಳನ್ನು ಸರ್ಕಾರದವರು ಮಾಡಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 23 ವರ್ಷಗಳಾದರೂ ಕೂಡ ಹಿಂದಿನ ಪರಿಸ್ಥಿತಿ ಬದಲಾವಣೆಯಾಗಿಲ್ಲ. ನಾವು ಹುಟ್ಟಿದ್ದು ಬರಗಾಲದಲ್ಲಿ, ಬೆಳೆದಿದ್ದು ಬರಗಾಲದಲ್ಲಿ. ಸಾಯುವಾಗಲಾದರೂ ಕೂಡ ಇದರಿಂದ ಮುಕ್ತರಾಗದಿದ್ದರೆ ಹೇಗೆ? ಇದನ್ನು ನಾನು ಅತ್ಯಂತ ದುಃಖದಿಂದ ಹೇಳುತ್ತಿದ್ದೇನೆ. ಇದೇ ಪರಿಸ್ಥಿತಿ ಮುಂದುವರೆಯುವುದಕ್ಕೆ ಅವಕಾಶ ಕೊಡಬಾರದು. ಕೂಲಿ ದರವನ್ನು ಸರ್ಕಾರದವರು ಕೂಡಲೆ ಪುನರ್ವಿಮರ್ಶೆ ಮಾಡಬೇಕು ಮತ್ತು ಈಗ ಕೂಲಿಯಲ್ಲಿ ಮೂರನೇ ಒಂದು ಭಾಗವನ್ನು ಹಿಡಿದುಕೊಂಡು ಅವರಿಗೆ ಏನು ಕೊಡಲಾಗುತ್ತಿದೆ ಅದನ್ನು ಕೂಡಲೇ ನಿಲ್ಲಿಸಬೇಕು. ಎಲ್ಲ ಕಡೆ ಸರ್ಕಾರೀ ನೌಕರರಿಗೆ ತುಟಿಭತ್ಯವನ್ನು ಜಾಸ್ತಿ ಮಾಡಲಾಗುತ್ತಿದೆ. ಆದರೂ ಕೂಡ ಕೇಂದ್ರ ಸರ್ಕಾರ ನೌಕರರು, ರಿಜರ್ವ್ ಬ್ಯಾಂಕ್ ನೌಕರರು ತಮ್ಮ ತುಟ್ಟಿಭತ್ಯ ಜಾಸ್ತಿಕೊಡಬೇಕೆಂದು ಸಂಪು ಹೂಡುತ್ತಿದ್ದಾರೆ. ದೊಡ್ಡ ದೊಡ್ಡ ಸಂಬಳದಾರರಿಗೆ ಕೊಡುತ್ತಿರುವ ತುಟ್ಟಿಭತ್ಯವೇ ಸಾಲದು ಎಂದು ಹೇಳುತ್ತಿರುವಾಗ ಬಡ ಕೂಲಿದಾರರಿಗೆ ಅವರ ಹೊಟ್ಟೆ ಬಟ್ಟೆಗೆ ಸಾಲುವಷ್ಟು ಆದರೂ ಕೂಡ ಕೂಲಿಯನ್ನು ಕೊಡದಿದ್ದರೆ ಅವರು ಯಾವ ರೀತಿ ಕೆಲಸ ಮಾಡಬೇಕು. ಬಡ ಕೂಲಿದಾರರ ಬಗ್ಗೆ ಯಾರಾದರೂ ಯೋಚನೆ ಮಾಡಿದ್ದಾರೆಯೇ ಎಂದು ನಾನು ಕೇಳುತ್ತೇನೆ? ಇವರಿಗೆ ಕೊಡುತ್ತಿರುವ ಕೂಲಿಯನ್ನು ನೋಡಿದರೆ ನಾವು ಇನ್ನೂ ಯಾವ ಶತಮಾನದಲ್ಲಿ ಇದ್ದೇವೆ ಎಂಬುದು ಗೊತ್ತಾಗುತ್ತದೆ. ಇವರಿಗೆ ಕೊಡುತ್ತಿರುವ ಕೂಲಿಯನ್ನು ಕೂಡಲೇ ಮಾರ್ಪಾಡು ಮಾಡದಿದ್ದರೆ ಕಷ್ಟ ಪರಿಸ್ಥಿತಿಯಲ್ಲಿರುವ ಜನರು ಇನ್ನೂ ಕಂಗಾಲಾಗುತ್ತಾರೆ. ಕಾಲಕ್ಕೆ ತಕ್ಕಂತೆ ಇವರ ಸಂಬಳವನ್ನು ಬದಲಾವಣೆ ಮಾಡದಿದ್ದರೆ ಇನ್ನು ಮುಂದೆ ಈ ಜನರು ಸಹನೆಯಿಂದ ಇರುವುದಿಲ್ಲ ಎಂದು ಹೇಳುತ್ತಿದ್ದೇನೆ. ಈ ಬಡ ಜನರಿಗೆ ಕೆಲಸ ಕೊಡುವಾಗಲೂ ಕೂಡ 5-6 ಮೈಲಿ ದೂರ ಹೋಗಿ ಕೆಲಸ ಮಾಡಬೇಕು ಎಂದು ಹೇಳುತ್ತಾರೆ. ಆ ರೀತಿ ಇರುವ ಸ್ಥಳದಿಂದ 5-6 ಮೈಲಿ ದೂರ ಹೋಗಿ ಕೆಲಸ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಹಿಂದೆ ರೂಪಾಯಿಗೆ 28 ಸೇರು ಜೋಳ ಸಿಗುತ್ತಿದ್ದ ಕಾಲದಲ್ಲಿ ಕೆಲಸ ಹುಡಿಕಿಕೊಂಡು ಗುಳೆಕಟ್ಟಿಕೊಂಡು ಹೋಗುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ತಮ್ಮ ದನಕರುಗಳನ್ನು ಬಿಟ್ಟು ಬೇರೆ ಊರುಗಳಿಗೆ ಹೋಗುವುದು ಕಷ್ಟ. ಯಾವ ಮನುಷ್ಯ ಯಾವ ಸ್ಥಳದಲ್ಲಿ ಇರುತ್ತಾನೋ ಆ ಸ್ಥಳದಲ್ಲಿಯೇ ಅಗಲೀ ಅಥವಾ ಒಂದೆರಡು ಮೈಲಿ ಸುತ್ತಳತೆಯೊಳಗೆಯಾಗಲೀ ಕೆಲಸ ಒದಗಿಸಿಕೊಡುವುದಕ್ಕೆ ತಕ್ಕ ಏರ್ಪಾಡನ್ನು ಸರ್ಕಾರದವರು ಮಾಡಬೇಕು. ಮತ್ತು ಕಾಲಮಾನ ಪರಿಸ್ಥಿತಿಗನುಗುಣವಾಗಿ ಅವರ ಸಂಬಳವನ್ನು ಕೂಡ ಹೆಚ್ಚು ಮಾಡದಿದ್ದರೆ ಚೆನ್ನಾಗಿರುವುದಿಲ್ಲವೆಂದು ಹೇಳುತ್ತೇನೆ. ಬರ ಬಂದಕಾಲದಲ್ಲಿ ಮುದುಕರು, ಮಕ್ಕಳು, ಗರ್ಭಿಣಿ ಹೆಂಗಸರು, ಅನಾಥರು ಮತ್ತು ಅಂಗವಿಹೀನರುಗಳಿಗೆ ಆಹಾರವನ್ನು ಒದಗಿಸುವ ಬಗ್ಗೆ ತಕ್ಕ ಏರ್ಪಾಡನ್ನು ಮಾಡಬೇಕು. ಇಂತಹವರ ಸಲುವಾಗಿ ಇದುವರೆಗೆ ಯಾವ ಒಂದು ಏರ್ಪಾಡನ್ನು ಸಹ ಮಾಡಿಲ್ಲ. ಕಳೆದ 5 ವರ್ಷಗಳಿಂದಲೂ ಬರ ಬಂದಿತ್ತು. ಈಗ ನಾವು 6ನೇ ವರ್ಷದಲ್ಲಿ ಇದ್ದೇವೆ ಈ ವರ್ಷವೂ ಬರ ಬಂದಿದೆ. ದುಡಿಯುವುದಕ್ಕೆ ಸಾಧ್ಯವಿಲ್ಲದಿರುವವರ ಬಗ್ಗೆ ಏನೂ ಮಾಡಿಲ್ಲ. ಇಂತಹವರಿಗೆ ದಿನಕ್ಕೆ ಒಂದು ಊಟ ಸಿಗುವುದು ಕೂಡ ಕಷ್ಟವಾಗಿದೆ. ಸುಗ್ಗಿ ಕಾಲದಲ್ಲಿ ಇಂತಹವರಿಗೆ ಯಾರಾದರೂ ಕೂಡ ಸಹಾಯ ಮಾಡುತ್ತಾರೆ. ಆದರೆ ಬರಗಾಲದಲ್ಲಿ ಯಾರೂ ಸಹಾಯ ಮಾಡುವುದಿಲ್ಲ. ಇಂತಹ ಸಲುವಾಗಿ ಸರ್ಕಾರದವರು ಬರಗಾಲದಲ್ಲಿ ಅನ್ನ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ಇವರುಗಳು ಬದುಕುವುದು ಕಷ್ಟವಾಗುತ್ತದೆ. ಬರಗಾಲ ಬಂದ ಕೂಡಲೇ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕು. ನಮ್ಮ ಭಾಗದ ಕಲೆಕ್ಟರ್ ಅವರು ಪರಿಹಾರ ಕಾಮಗಾರಿಯನ್ನು ಕೈಕೊಳ್ಳುವ ಬಗ್ಗೆ ಸ್ವಲ್ಪ ಸಮಯ ಕಾದು ನೋಡೋಣ ಎಂದು ಹೇಳುತ್ತಾರೆ. ಇದರಿಂದ ಬಡ ಜನರಿಗೆ ಬಹಳ ಕಷ್ಟವಾಗುತ್ತಾ ಇದೆ. ಜೂನ್ ತಿಂಗಳಲ್ಲಿ ಮಳೆ ಬರದಿದ್ದರೆ ಕೂಡಲೇ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಂಡು ಜನರಿಗೆ ಕೆಲಸ ಒದಗಿಸಬೇಕು. ಮಳೆ ಬಂದ ಕೂಡಲೇ ಈ ಪರಿಹಾರ ಕಾಮಗಾರಿ ಕೆಲಸಗಳನ್ನು ನಿಲ್ಲಿಸುವುದು ಕೂಡ ಸರಿಯಲ್ಲ. ಮಳೆ ಬಂದಕೂಡಲೇ ಬೆಳೆ ಬರುವುದಿಲ್ಲ. ಮಳೆ ಬಂದ 8-10 ದಿನಗಳು ಜನರಿಗೆ ಕೆಲಸ ಸಿಕ್ಕಿದರೂ ಕೂಡ ನಂತರ ಕೆಲಸ ಸಿಗುವುದಿಲ್ಲ. ಆದ್ದರಿಂದ ಮಳೆಯಾಗಿ ಬೆಳೆಯಾಗುವ

ವರೆಗೂ ಕೂಡ ಕೆಲಸ ಒದಗಿಸಬೇಕು. ಸಕಾಲಕ್ಕೆ ಮಳೆ ಬರದೆ ಬಿತ್ತಿದ ಬೆಳೆಗಳು ಒಣಗಿ ಹೋಗಿರುತ್ತದೆ. ಮಳೆ ಬಂದರೂ ಕೂಡ ಎರಡಾಣೆಯಿಂದ ನಾಲ್ಕಾಣೆಯವರೆಗೆ ಮಾತ್ರ ಬೆಳೆ ಕೈಗೆ ಸಿಗುತ್ತದೆ. ಆದ್ದರಿಂದ ಮುಂದಿನ ಬೆಳೆ ಕೈಗೆ ಸಿಗುವವರೆಗೂ ಕೂಡ ಪರಿಸ್ಥಿತಿಯನ್ನು ನೋಡಿಕೊಂಡು ಜನರಿಗೆ ಕೆಲಸ ಒದಗಿಸಬೇಕು. ಗೋಕಾಕ ತಾಲ್ಲೂಕ್‌ನ ಪೂರ್ವ ಭಾಗದಲ್ಲಿ, ಕೌಜಲಗಿ ಪತ್ತು ಚಂದರಗೆ ಮುಂತಾದ ಪ್ರದೇಶಗಳಲ್ಲಿ ಎರೆ ಭೂಮಿ ಇದೆ. ಹಿಂಗಾರು ಮಳೆಯಿಂದ ಈ ಪ್ರದೇಶದಲ್ಲಿ ಯಾವ ಬೆಳೆಯೂ ಕೂಡ ಆಗುವುದಿಲ್ಲ. ಈ ಪ್ರದೇಶಗಳಲ್ಲಿ ಜೂನ್ ತಿಂಗಳಲ್ಲಿ ಮಳೆಯಾದರೆ ಮಾತ್ರ ಬೆಳೆಯಾಗುತ್ತದೆ. ಜೂನ್ ತಿಂಗಳು ಬಿಟ್ಟು ಮತ್ತೆ ಬೇರೆ ಯಾವ ತಿಂಗಳಲ್ಲಿ ಮಳೆಯಾದರೂ ಕೂಡ ಬೆಳೆಯಾಗುವುದಿಲ್ಲ. ಅಂದರೆ ಇಡೀ ವರ್ಷ ಬರಗಾಲವಿರುತ್ತದೆ. ನಮ್ಮ ಪಕ್ಕದ ಜಿಲ್ಲೆಯಲ್ಲಿಯೂ ಕೂಡ ಇದೇ ಪರಿಸ್ಥಿತಿ ಇದೆ. ಜೂನ್ ತಿಂಗಳಲ್ಲಿ ಮಳೆ ಬಾರದಿದ್ದರೆ ಇಡೀ ವರ್ಷ ಪರಿಹಾರ ಕಾಮಗಾರಿ ಕೆಲಸವನ್ನು ನಮ್ಮ ಭಾಗದಲ್ಲಿ ಕೈಕೊಳ್ಳಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಅಲ್ಲಿಯ ಜನರು ಬೇರೆ ಊರುಗಳಿಗೆ ಕೆಲಸ ಹುಡಿಕಿಕೊಂಡು ಹೋಗಬೇಕಾಗುತ್ತದೆ. ದನಕರುಗಳನ್ನು ಮಾರಬೇಕಾಗುತ್ತದೆ. ದನಕರುಗಳನ್ನು ಮಾರಿದ ಮೇಲೆ ಅವರ ಆರ್ಥಿಕ ಪರಿಸ್ಥಿತಿ ವಿಪರ್ಯಾಸವಾಗುತ್ತದೆ, ಮುಂದೆ ಮಳೆ ಬಂದಾಗ ದನಕರುಗಳನ್ನು ಕೊಳ್ಳಲು ಅವರಲ್ಲಿ ಹಣವಿರುವುದಿಲ್ಲ. ಬಡವರಿಗೆ ತಮ್ಮ ಎತ್ತುಗಳನ್ನು ಮಾರಿದ ಮೇಲೆ ಮತ್ತೆ ಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಎತ್ತುಗಳನ್ನು ಕೊಂಡುಕೊಳ್ಳಲು ಸರ್ಕಾರದವರೇ ಸಹಾಯ ಮಾಡಬೇಕೆಂದು ನಾನು ಹೇಳುವುದಿಲ್ಲ. ಕ್ಷಾಮ ಬಂದ ಕೂಡಲೇ ಪರಿಹಾರ ಕಾಮಗಾರಿ ಕೆಲಸಗಳನ್ನು ಪ್ರಾರಂಭ ಮಾಡಬೇಕೆಂದು ನಾನು ಒತ್ತಿ ಹೇಳುತ್ತೇನೆ.

4-30 P.M.

ಕ್ಷಾಮ ಪರಿಹಾರ ಕಾರ್ಯಗಳಿಗಾಗಿ ಸ್ವಲ್ಪ ಹೆಚ್ಚು ಹಣ ಕೊಟ್ಟು ಪರಿಹಾರ ಕಾರ್ಯಗಳು ಬೇಗ ಆಗುವಂತೆ ಮಾಡುವುದು ಉತ್ತಮ. ಹೀಗೆ ನಮ್ಮ ಭಾಗದಲ್ಲಿ ಬರಗಾಲಕ್ಕೆ ತುತ್ತಾಗಿರುವ ಭಾಗಗಳು ಬಹಳ ಹೆಚ್ಚಾಗಿರುವುದರಿಂದ ಇವರ ಕಡಗೆ ಸರಕಾರ ಸ್ವಲ್ಪ ಹೆಚ್ಚು ಲಕ್ಷ ಕೊಟ್ಟು ವಿಚಾರ ಮಾಡಬೇಕು. ನಮ್ಮ ಭಾಗದಲ್ಲಿ ಕಳೆದ 23 ವರ್ಷಗಳಿಂದಲೂ ನಮ್ಮ ಭಾಗದಲ್ಲ ಕ್ಷಾಮ ಆಗಾಗ್ಗೆ ಬರುತ್ತಿವೆ ಮತ್ತು ಇದಕ್ಕಾಗಿ ಅನೇಕ ಯೋಜನೆಗಳನ್ನೂ ಮಾಡಿದ್ದಾರೆ. ಆದರೆ ಆ ಯೋಜನೆಗಳೆಲ್ಲಾ ಪೂರ್ತಿಯಾಗದೇ ಅರ್ಧದಲ್ಲೇ ಉಳಿದಿದೆ. ಇದರಿಂದಾಗಿ ಇಲ್ಲಿನ ಜನರಿಗೆ ಬಹಳ ಕಷ್ಟವಾಗಿದೆ. ನಮ್ಮ ಭಾಗದಲ್ಲಿ ಘಟಪ್ರಭಾ ಯೋಜನೆ ಮಾಡಬೇಕು ಎಂದು ಇದಕ್ಕಾಗಿ ಮೊದಲನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸುಮಾರು ಐದಾರು ಕೋಟಿಯಷ್ಟು ಹಣವನ್ನು ಒದಗಿಸಿ ಸ್ವಲ್ಪಮಟ್ಟಿನ ಖರ್ಚು ಮಾಡಿದ್ದಾರೆ. ಈ ಯೋಜನೆಯನ್ನು 1956 ರಲ್ಲೇ ಮಾಡಬೇಕೆಂದು ಸರಕಾರದ ಮೇಲೆ ಒತ್ತಾಯ ತರುತ್ತಿದ್ದರೂ ಇದರ ಕಾರ್ಯ ಬೇಗ ಆರಂಭವಾಗದೇ ಈಚೆಗೆ ಪ್ರಾರಂಬ ಮಾಡಿದ್ದಾರೆ ಮತ್ತು ಇದರ ಪ್ರಗತಿ ಕೂಡ ಆಗಿರುವುದು ಬಹಳ ಕಡಿಮೆ, ನಮ್ಮ ಬಾಗದ ಜನಕ್ಕೆ ಇಂತಹ ಒಂದು ಯೋಜನೆಯಿಂದ ಬಹು ಅನುಕೂಲವಾಗುತ್ತದೆ ಮತ್ತು ಸ್ವಲ್ಪಮಟ್ಟಿನ ನೀರಾವರಿಗೂ ಅನುಕೂಲವಾಗುತ್ತದೆ. ಈ ಯೋಜನೆ ಪೂರ್ಣವಾದರೆ ಕೆಲವಾರು ನೀರಾವರಿ ಯೋಜನೆಗಳನ್ನು ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎನ್ನುವ ಆಸೆಯನ್ನು ನಮ್ಮ ಭಾಗದ ಜನ ಇಟ್ಟುಕೊಂಡಿದ್ದಾರೆ. ನಮ್ಮ ಭಾಗ ಹಿಂದೆ ಮುಂಬಯಿ ರಾಜ್ಯದಲ್ಲಿ ಇದ್ದಾಗ ಈ ಯೋಜನೆ ಆಗಬೇಕಾಗಿತ್ತು. ಆದರೆ ಆಗ ರಾಜ್ಯಗಳ ಪುನರ್ವಿಂಗಡಣೆ ವಿಚಾರ ಬಂದುದರಿಂದ ನಮ್ಮ ಭಾಗದವರು ಕೂಡ ಕನ್ನಡ ರಾಜ್ಯಕ್ಕೆ ಬಂದರೆ ಬಹಳ ಅನುಕೂಲವಾಗುತ್ತದೆ ಎಂದು ನಾವೆಲ್ಲ ಒಂದಾಗಿ ಕನ್ನಡ ರಾಜ್ಯಕ್ಕೆ ಬರಬೇಕಾಯಿತು, ಇದರಿಂದಾಗಿ ಆಗ ಮಾಡಿದ ಯೋಜನೆಗಳೆಲ್ಲಾ ತಲೆಕೆಳಗಾದವು ಮತ್ತು ನಮ್ಮ ಭಾಗದಲ್ಲಿ ಇದ್ದ ಉತ್ತಮವಾದ ಭಾಗ ಮಹಾರಾಷ್ಟ್ರಕ್ಕೆ ಹೋಯಿತು. ಇದನ್ನು ಪಡೆಯಲು ನಮ್ಮ ರಾಜ್ಯದವರು ಯಾವುದೇ ಪ್ರಯತ್ನವನ್ನು ಇದುವರೆಗೆ ಮಾಡಲಿಲ್ಲ. ಹಡಲಗ, ಆಜರಾ ಮತ್ತು ಇನ್ನಿತರ ಭಾಗಗಳು ಮಹಾರಾಷ್ಟ್ರಕ್ಕೇ ಹೋಗಿವೆ. ಈಗ ಮಾಡಿರುವ ಯೋಜನೆಯನ್ನಾದರೂ ಪೂರ್ತಿ ಮಾಡಿದರೆ ನಮ್ಮ ಭಾಗದಲ್ಲಿ ಸುಮಾರು ಒಂದೂವರೆ ಲಕ್ಷ ಎಕರೆಗಳಷ್ಟು ಕಡಿಮೆ ಭೂಮಿಗೆ ನೀರಿನ ಸೌಕರ್ಯ ಸಿಗುತ್ತದೆ. ನಮ್ಮ ಭಾಗದಲ್ಲಿರುವ ಎರಗಟ್ಟಿ ಹಾಗೂ ಇನ್ನಿತರ ಭಾಗಗಳಲ್ಲಿ ಶಾಶ್ವತವಾದ ನೀರಾವರಿ ಯೋಜನೆಗಳನ್ನು ತೆಗೆದು ಕೊಂಡು ಫಲಪ್ರದವಾದ ಬೆಳೆಗಳನ್ನು ಮಾಡಲು ಅವಕಾಶ ಇತ್ತು ಮತ್ತು ಇಲ್ಲಿರುವ ಭೂಮಿ ಕೂಡ ಬಹಳ ಯೋಗ್ಯವಾದುದಾಗಿದೆ. ಆದರೆ ಈಗ ಖಾಯಂ ನೀರಾವರಿ ಸೌಕರ್ಯ ಇಲ್ಲದೆ ಬರಗಾಲಕ್ಕೆ ಆ ಭಾಗದವರು ತುತ್ತಾಗಬೇಕಾಗಿದೆ. ಇದಕ್ಕೆ ಒಂದು ತಕ್ಕ ಯೋಜನೆಯನ್ನು ಮಾಡಬೇಕೆಂದು ಸುಮಾರು 4-6 ವರ್ಷಗಳಿಂದಲೂ ಸರಕಾರಕ್ಕೆ ಮನವಿ ಮಾಡುತ್ತಿದ್ದರೂ ಇದುವರೆಗೆ ಯಾವುದೂ

(ಶ್ರೀ ಎ. ಆರ್. ಪಂಚಗಾವಿ)

ಆಗಲಿಲ್ಲ, ಈಗ ಇಲ್ಲಿ ನೀರಾವರಿ ಯೋಜನೆ ಆರಂಭ ಮಾಡಿದ್ದರೂ ಅದೂ ಇನ್ನೂ ಫೌಂಡೇಷನ್ ಸ್ಟೇಜಿನಲ್ಲೇ ಇದೆ. ಈ ಯೋಜನೆ ಮುಕ್ತಾಯವಾಗಬೇಕಾದರೆ ಸುಮಾರು ಇಪ್ಪತ್ತು ವರ್ಷಗಳಾದರೂ ಬೇಕಾಗಬಹುದು ಮತ್ತು ಇದರ ಖರ್ಚು ಕೂಡ ಮೂವ್ವತ್ತೈದು ಕೋಟಿಯವರೆಗೆ ಹೋಗಬಹುದು ಎಂದು ಇದ್ದುದು ಈಗ ಇದು ಮುಗಿಯುವ ವೇಳೆಗೆ ಸುಮಾರು 100–135 ಕೋಟಿಯವರೆಗೆ ಹೋಗಬಹುದು ಇಲ್ಲ ಇದಕ್ಕೂ ಜಾಸ್ತಿ ವೆಚ್ಚವಾಗಬಹುದು. ಈ ಯೋಜನೆ ಪೂರ್ಣವಾದ ನಂತರ ನಮ್ಮ ಭಾಗದಲ್ಲಿರುವ ಬಾಗಲಕೋಟೆ ಬಾದಾಮಿ ಸವದತ್ತಿ ಗೋಕಾಕ ಹಾಗೂ ಇನ್ನೂ ಕೆಲವು ಭಾಗಗಳಿಗೆ ನೀರಾವರಿ ಸೌಕರ್ಯ ಸಿಕ್ಕಿ ಬರಗಾಲದ ಕಷ್ಟದಿಂದ ಸ್ವಲ್ಪ ಮಟ್ಟಿಗೆ ಅನುಕೂಲ ಪಡೆಯಬಹುದು. ನಮ್ಮ ಭಾಗದಲ್ಲಿ ಈ ನೀರಾವರಿ ಯೋಜನೆ ಬೇಗ ಆಗಿದ್ದರೆ ಸುಮಾರು ಮೂರುವರೆ ಲಕ್ಷ ಎಕರೆಗಳಲ್ಲಿ ದವಸ ಧಾನ್ಯ ಬೆಳೆಯಲು ಅನುಕೂಲವಾಗುತ್ತಿತ್ತು. ಈಗ ಬಂದಿರುವ ಬರಗಾಲವನ್ನು ತಪ್ಪಿಸಲು ತಕ್ಕ ಪರಿಹಾರ ಕ್ರಮಗಳನ್ನು ಮಾಡುವುದು ಅವಶ್ಯ ಇದೆ. ಆದರೆ ಇಂದು ನಡೆಯುತ್ತಿರುವ ಕೆಲಸಗಳನ್ನು ನೋಡಿದರೆ ಅವು ಬಹಳ ವಿಳಂಬವಾಗುತ್ತಿವೆ. ಇದರಿಂದ ಯಾವ ರೀತಿಯ ಪರಿಹಾರವೂ ತಕ್ಷಣದಲ್ಲಿ ಸಿಗುವುದಿಲ್ಲ. ಮಲಪ್ರಭಾ ಯೋಜನೆಯ ಕೆಲಸ ಬಹಳ ನಿಧಾನದಿಂದ ಆಗುತ್ತಿದೆ. ಇದು ಇನ್ನೂ ಫೌಂಡೇಷನ್ ಸ್ಟೇಜಿನಲ್ಲೇ ಇದೆ. ಈ ಯೋಜನೆ ಕೆಲಸ ಮುಗಿಯಲು ಇನ್ನೂ ಬಹಳ ಕಾಲ ಬೇಕಾಗುತ್ತದೆ ಇದಕ್ಕಾಗಿ ನಮ್ಮ ಕಡೆಗಳಲ್ಲ ಸಣ್ಣ ಸಣ್ಣ ಕೆರೆಗಳನ್ನು ತೆಗೆದುಕೊಂಡು ದುರಸ್ತು ಮಾಡುವುದು ಅಗತ್ಯ ಇದೆ. ನಮ್ಮ ಕಡೆ ಹೆಚ್ಚು ಕೆರೆಗಳಾಗಲೀ ಭಂಡಾರಗಳಾಗಲೀ ಇಲ್ಲ. ಆದರು ಇರುವ ಸಣ್ಣ ಕೆರೆಗಳನ್ನು ಬೇಗನೇ ದುರಸ್ತು ಮಾಡಿ ನಮ್ಮ ಭಾಗದ ಜನಕ್ಕೆ ಅನುಕೂಲ ಮಾಡಿದರೆ ಇಂದಿನ ತುಟ್ಟಿಕಾಲದಲ್ಲಿ ಸ್ವಲ್ಪಮಟ್ಟಿನ ಅನುಕೂಲ ಸಿಕ್ಕಿ ಬದುಕಬಹುದು. ಇಂದಿನ ತುಟ್ಟಿ ಕಾಲದಲ್ಲಿ ಬಡವರಿಗೆ ಬದುಕಲು ಸರಿಯಾದ ಉತ್ಪನ್ನ ಕೂಡ ಸಿಗುತ್ತಿಲ್ಲ. ಕೂಲಿ ಕೂಡ ಇಲ್ಲಿ ಜನಕ್ಕೆ ಮೂವತ್ತು ಪೈಸೆಯಿಂದ ಐವತ್ತು ಪೈಸೆ ದಿನಕ್ಕೆ ಸಿಗುವುದೇ ಕಷ್ಟವಾಗಿದೆ. ಹೀಗಿರುವಾಗ ಇಂತಹ ಬಡ ಜನರು ಬದುಕುವುದಾದರೂ ಹೇಗೆ. ಇಂತಹ ಒಂದು ಕಷ್ಟ ಪರಿಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗದೆ ಜನತೆಗೆ ಸಹಾಯ ಮಾಡಬೇಕು. ಹಾಗೆ ಸರಕಾರ ಮಾಡದೇ ಹೋದರೆ ಜನತೆಯ ಸಹನೆ ಮೀರಿ ಮುಂದೆ ಇದೇ ಜನ ಸತ್ಯಾಗ್ರಹ ಮಾಡಬೇಕಾಗಿ ಬಂದೀತು ಎನ್ನುವ ಒಂದು ಎಚ್ಚರಿಕೆಯನ್ನೂ ಸರಕಾರಕ್ಕೆ ಈ ಸಂದರ್ಭದಲ್ಲ ಕೊಡಲು ಇಚ್ಛಿಸುತ್ತೇನೆ. ಕಳೆದ ಹದಿನಾರು ವರ್ಷಗಳಿಂದಲೂ ನಾವು ಬರಗಾಲದ ಬಗ್ಗೆ ಇಲ್ಲಿ ಹೇಳುತ್ತಲೇ ಬರುತ್ತಿದ್ದೇವೆ. ಇದರ ಬಗ್ಗೆ ಈಚೆಗೆ ಸ್ವಲ್ಪ ಲಕ್ಷ ಕೊಟ್ಟು ಕೆಲಸ ಮಾಡುತ್ತಿದ್ದಾರೆ. ಆದರೆ ಇದನ್ನು ಇನ್ನೂ ಸ್ವಲ್ಪ ತ್ವರಿತದಿಂದ ವಿಚಾರ ಮಾಡಬೇಕಾಗಿದೆ. ನಮ್ಮ ಭಾಗಗಳು ಇಲ್ಲಿಗೆ ಬರದೇ ಮುಂಬಯಿ ರಾಜ್ಯದಲ್ಲಿದ್ದರೆ ಇಷ್ಟು ಹೊತ್ತಿಗೆ ಇಲ್ಲಿನ ನೀರಾವರಿ ಕೆಲಸಗಳೆಲ್ಲಾ ಪೂರ್ತಿಯಾಗಿ ಮುಗಿದು ಜನತೆಗೆ ಅನುಕೂಲವಾಗುತ್ತಿತ್ತು. ಆದರೆ ಇಲ್ಲಿನ ರಾಜ್ಯ ಸರಕಾರ ಕೇಂದ್ರಕ್ಕೆ ಮಂಜೂರಿಗಾಗಿ ಕಾಯುತ್ತಿದ್ದೇವೆ ಎಂದು ಹೇಳುವುದು ತಪ್ಪು. ರಾಜ್ಯ ಸರಕಾರ ಇದಕ್ಕೆ ಹೇಗಾದರೂ ಮಾಡಿ ದುಡ್ಡು ಒದಗಿಸಿ ಇದರ ಕೆಲಸ ಮಾಡಲೇಬೇಕು ಎಂದು ಒತ್ತಾಯದಿಂದ ಹೇಳುತ್ತೇನೆ ಮತ್ತು ಶಾಶ್ವತವಾದ ಪರಿಹಾರವಾಗಲೇಬೇಕು. ಈಗ ಪರಿಹಾರ ಕಾರ್ಯಕ್ರಮಗಳನ್ನು ಮಾಡುವ ನೀತಿಯಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕು. ಬರಗಾಲದಲ್ಲಿ ನಮ್ಮ ಭಾಗದಲ್ಲಿರುವ ಬಡ ಜನರು ಇದೇ ಸ್ಥಿತಿಯನ್ನು ಮುಂದುವರಿಸಿಕೊಂಡು ಬಂದರೆ ಸರಕಾರದ ನೀತಿಯನ್ನು ಅವರು ಸಹಿಸಲಾರರು ಎನ್ನುವ ಮಾತನ್ನು ಇಲ್ಲಿ ನಾನು ಒತ್ತಿ ಹೇಳುತ್ತೇನೆ. ಹೊಸ ಪರಿಸ್ಥಿತಿಗೆ ಅನುಸಾರವಾಗಿ ಈಗಿರುವ ರೀತಿಗಳನ್ನು ಬದಲಾವಣೆ ಮಾಡಬೇಕು ಮತ್ತು ಪರಿಹಾರದ ಕೆಲಸಗಳನ್ನು ಕಂಟ್ರಾಕ್ಟರುಗಳಿಗೆ ಕೊಡುವುದನ್ನು ತಪ್ಪಿಸಬೇಕು. ಹೊಸದಾಗಿ ಕೆಲಸಗಳನ್ನು ಕೊಡುವಾಗ ಕಂಟ್ರಾಕ್ಟರುಗಳಿಗೆ ಕೊಡುವುದು ಬೇಡ. ಪಿ.ಡಬ್ಲ್ಯೂ.ಡಿ. ಹಾಗೂ ತಾಲ್ಲೂಕು ಡೆವಲಪ್‌ಮೆಂಟು ಬೋರ್ಡುಗಳಿವೆ. ಇವರಿಗೆ ಇಂತಹ ಕೆಲಸಗಳನ್ನು ಕೊಡಬೇಕು. ಬೇರೆ ಇತರರಿಗೆ ಈ ಕೆಲಸಗಳನ್ನು ಕೊಡುವುದು ಬೇಡ.

ಅಮೇಲೆ ಜಿಲ್ಲಾಧಿಕಾರಿಗಳು ಸರಕಾರದ ಮಂಜೂರಾತಿಗಾಗಿ ಕಾಯದೆ ಎಲ್ಲಿ ಮಳೆ ಬರುವುದಿಲ್ಲವೋ ಅಂತಹ ಕಡೆಗಳನ್ನು ಸರಿಯಾಗಿ ನೋಡಿಕೊಂಡು ಬಂದು ಅಲ್ಲಿ ಆಗಿಂದಾಗ್ಗೆ ಬೇಗನೇ ಕೆಲಸಗಳನ್ನು ಪ್ರಾರಂಭ ಮಾಡಲೇ ಬೇಕು. ಇದರ ಕಡೆಗೆ ಸರಕಾರ ಸರಿಯಾದ ವ್ಯವಸ್ಥೆ ಮಾಡಬೇಕು. ಪ್ರತಿಯೊಂದಕ್ಕೂ ಡೆಪ್ಯುಟಿ ಕಮಿಷನರವರು ಸರಕಾರದ ಕಡೆಗೆ ಕಾಯುತ್ತಾ ಕುಳಿತರೆ ಕೆಲಸಗಳಾಗುವುದು ಕಷ್ಟವಾಗುತ್ತದೆ ಮತ್ತು ಜನತೆಗೆ ಸಾಕಷ್ಟು ಪರಿಹಾರವೂ ಸಿಗುವುದಿಲ್ಲ ಆದಷ್ಟು ನೀರಾವರಿ ಕಾಮಗಾರಿಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು, ಇದಕ್ಕಾಗಿ ಸಣ್ಣ ನೀರಾವರಿ ಯೋಜನೆಗಳು, ಮಧ್ಯಮ ನೀರಾವರಿ ಯೋಜನೆಗಳು ಮತ್ತು ಲಿಫ್ಟ್ ಇರಿಗೇಷನ್

ಯೋಜನೆಗಳು ಇವನ್ನು ಮಾಡಿ ಆದಷ್ಟು ಹೆಚ್ಚು ನೀರಾವರಿ ಯೋಜನೆಗಳಿಗೆ ಪ್ರಾಶಸ್ತ್ಯ ಕೊಡಬೇಕು. ಬರಗಾಲವನ್ನು ಶಾಶ್ವತವಾಗಿ ಪರಿಹಾರ ಮಾಡಲು ಮತ್ತು ಚೆನ್ನಾಗಿ ಕೆಲಸಗಳನ್ನು ಮಾಡಲು ಅನುಭವಿ ಅಧಿಕಾರಗಳನ್ನು ಇಲ್ಲಿಗೆ ನೇಮಿಸಬೇಕು. ಈಚೆಗೆ ಮೈನರ್ ಇರಿಗೇಷನ್ ಇನ್‌ವೆಸ್ಟಿಗೇಷನ್ ಇಲಾಖೆ ಎಂದು ಸರಕಾರ ಮಾಡಿದೆ. ಇದರಲ್ಲಿ ಪಿ.ಡಬ್ಲ್ಯು.ಡಿ.ಯಲ್ಲಿ ಯಾವ ಅಧಿಕಾರಿ ಬೇಕಾಗಿಲ್ಲವೋ ಅಂತಹ ಅನುಪಯೋಗವಾದ ಅಧಿಕಾರಿಗಳನ್ನು ಇಂತಹ ಇನ್‌ವೆಸ್ಟಿಗೇಷನ್ ಇಲಾಖೆಗೆ ಕಳುಹಿಸುತ್ತಾರೆ. ಇದರಿಂದಾಗಿ ಇಲ್ಲಿ ಕೆಲಸಗಳು ಮೂರು, ನಾಲ್ಕು ವರ್ಷಗಳು ನಿಧಾನವಾಗುತ್ತವೆ ಮತ್ತು ಮೊದಲು ಮಾಡಿದ ಯೋಜನೆಗಳೆಲ್ಲಾ ತಲೆಕೆಳಗಾಗುವ ಸ್ಥಿತಿ ಬಂದಿದೆ. ಇಂತಹ ಮೈನರ್ ಇರಿಗೇಷನ್ ಇನ್‌ವೆಸ್ಟಿಗೇಷನ್ ಇಲಾಖೆ ಎನ್ನುವುದನ್ನು ಸರಕಾರ ಕೂಡಲೇ ರದ್ದು ಮಾಡಬೇಕು. ಇಲ್ಲದಿದ್ದರೆ ಪರಿಹಾರ ಕಾರ್ಯಕ್ರಮಗಳ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಮೈನರ್ ಇನ್‌ವೆಸ್ಟಿಗೇಷನ್ ಇಲಾಖೆಯಲ್ಲಿ ಎಸ್ಟಿಮೇಟುಗಳು ಪ್ಲಾನುಗಳು ಬಂದಾಗ ಅದನ್ನು ಸರಿಯಾಗಿ ಪರಿಷ್ಕಾರ ಮಾಡಿ ಒಪ್ಪಬೇಕು ಇಲ್ಲದೇ ಇದ್ದರೇ ಇಲ್ಲಿನ ಕೆಲಸಗಳು ಸರಿಯಾಗ ನಿರ್ವಹಣೆ ಮಾಡಲು ಆಗುವುದಿಲ್ಲ. ಇನ್ನು ಮುಂದಾದರೂ ಸರಕಾರ ಇದರ ಕಡೆಗೆ ಹೆಚ್ಚು ನಿಗಾ ಕೊಟ್ಟು ಕೆಲಸ ಮಾಡಿ ಅಲ್ಲಲ್ಲಿ ಬಾವಿ ಕೆಲಸಗಳನ್ನು ಹಾಗೂ ಇನ್ನಿತರ ಬರಗಾಲದ ಕೆಲಸಗಳನ್ನು ಬೇಗನೇ ಆಗುವಂತೆ ಮಾಡಿಸಬೇಕು. ಬಾವಿಗಳನ್ನು ಮಾಡಲು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಜನಕ್ಕೆ ಸಾಲ ಕೊಡುತ್ತಿದ್ದಾರೆ ಮತ್ತು ಕಮ್ಯೂನಿಟಿ ವೆಲ್ಸ್‌ಗಾಗಿ ಸಾಲ ಕೊಡುತ್ತಿದ್ದಾರೆ. ಇದರಿಂದ ಬಡ ರೈತಾಪಿ ಜನಕ್ಕೆ ಬಹಳ ಅನುಕೂಲವಾಗುತ್ತದೆ, ನಾಲ್ಕಾರು ರೈತರು ಒಂದೇ ಕಡೆ ಸೇರಿ ನೀರನ್ನು ತೆಗೆದುಕೊಳ್ಳುವ ಅನುಕೂಲವನ್ನು ಅಲ್ಲಲ್ಲಿ ಮಾಡಿಕೊಡುತ್ತಿರುವುದರಿಂದ ಬಡ ಜನಕ್ಕೆ ಇದರಿಂದ ಬಹಳ ಅನುಕೂಲವಾಗಿದೆ. ಆದರೆ ನಮ್ಮ ಭಾಗದಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿಲ್ಲ ಇದೂ ಅಲ್ಲದೆ ಬಾವಿಗಳನ್ನು ತೆಗೆಸುವುದಕ್ಕೆ ಮೊದಲು ಅಲ್ಲಲ್ಲಿ ಗ್ರೌಂಡು ವಾಟರ್ ಸೋರ್ಸ್ ಚೆನ್ನಾಗಿದೆಯೋ ಎನ್ನುವುದನ್ನು ಪರಿಶೀಲನೆ ಮಾಡಿ ಆ ನಂತರ ಬಾವಿಗಳನ್ನು ತೆಗೆಸಿದರೆ ಅನುಕೂಲವಾಗುತ್ತದೆ. ಇಲ್ಲದೆ ಕೆಲವು ವೇಳೆ ಬಾವಿಯನ್ನು ತೋಡಿಸಿದರೂ ನೀರು ಸಿಗುವುದು ಕಷ್ಟವಾಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು ಮತ್ತು ನಾನು ಈ ಮೊದಲೇ ಹೇಳಿರುವ ಸೂಚನೆಗಳನ್ನೆಲ್ಲಾ ಸರ್ಕಾರದವರು ಲಕ್ಷಕ್ಕೆ ತೆಗೆದುಕೊಂಡು ಶಾಶ್ವತವಾದ ಕ್ರಮಗಳನ್ನು ಬರಗಾಲಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ಬೇಗನೇ ಕೈಗೊಳ್ಳಬೇಕೆಂದೂ ಸಲಹೆ ಮಾಡುತ್ತೇನೆ. ಪರಿಹಾರಗಳು ಬಡ ಜನಕ್ಕೆ ಬೇಗನೇ ಸಿಗಲಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಸನ್ಮಾನ್ಯ ಸಭಾಧ್ಯಕ್ಷರೇ, ಇಂದು ರಾಜ್ಯದಲ್ಲಿ ತಲೆದೋರಿರುವ ಕ್ಷಾಮಡಾಮರುಗಳ ನಿವಾರಣೆಯ ಅಂಗವಾಗಿ ನಮ್ಮ ಮುಂದೆ ಇಂದು ಮಾನ್ಯ ರೆವಿನ್ಯೂ ಮಂತ್ರಿಗಳು ಒಂದು ಬೇಡಿಕೆಯನ್ನಿಟ್ಟಿದ್ದಾರೆ. ಇದೊಂದು ಬಹಳ ಹಾಸ್ಯಾಸ್ಪದವಾದ ಬೇಡಿಕೆ. ದೇಶದಲ್ಲಿ ಈಗ ಉಂಟಾಗಿರತಕ್ಕ ಕ್ಷಾಮವನ್ನು ತಡೆಗಟ್ಟಲು ಈಗ ಬಿದ್ದಿರತಕ್ಕ ಮಳೆ ಕೇವಲ ತುಂತುರು ಹನಿ ಮಳೆಯೆಂದು ನನ್ನ ಭಾವನೆ. ಆದ್ದರಿಂದ ಕ್ಷಾಮವನ್ನು ತಡೆಗಟ್ಟಲು ಈ ಮಳೆಯಿಂದ ಸಾಧ್ಯವಿಲ್ಲ. ಅಷ್ಟೇ ಅಲ್ಲ ಈಗ ಮಳೆ ಬಿದ್ದಿರುವುದಾದರೂ ಕೂಡ ಅದೇನೋ ಒಂದು ಗಾದೆಯನ್ನು ಹೇಳುತ್ತಾರಲ್ಲಾ "ಊರೆಲ್ಲಾ ಹಾಳಾದ ಮೇಲೆ ಊರುಬಾಗಿಲನ್ನು ಹಾಕಿದರು" ಎಂದಹಾಗಿದೆ. ಇಂದು ದೇಶದಲ್ಲಿ ಸಂಭವಿಸಿರತಕ್ಕ ಕ್ಷಾಮವನ್ನು ನಿವಾರಣೆ ಮಾಡಲು ಸರ್ಕಾರದವರು ನಾಲ್ಕು ಡಿವಿಜನ್ನಿಗೂ ಸುಮಾರು ಎರಡುವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಹಣದಲ್ಲಿ ಒಂದೊಂದು ಜಿಲ್ಲೆಗೂ ಎಷ್ಟೆಷ್ಟು ಹಣವನ್ನು ಒದಗಿಸಿದ್ದಾರೆ ಎಂಬುದನ್ನು ಈ ವರದಿಯಲ್ಲಿ ನಮೂದಿಸಿದ್ದಾರೆ. ಮೈಸೂರು ಡಿವಿಜನ್ನಿಗೆ 98 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದರೂ ಅದರಲ್ಲಿ 38 ಲಕ್ಷ 65 ಸಾವಿರ ರೂಪಾಯಿಗಳನ್ನು ಡಿವಿಜನಲ್ ಕಮಿಷನರಲ್ಲಿ ರಿಜರ್ವ್ ಫಂಡಾಗಿ ಇಟ್ಟಿರಬೇಕೆಂದು ಹೇಳಿದ್ದಾರೆ. ಯಾರಿಗಾಗಿ ಹೀಗೆ ಅಷ್ಟು ಹಣವನ್ನು ಮುಡುಪಾಗಿಟ್ಟಿರಬೇಕು ಮಂತ್ರಿಗಳ ಹಿಂಬಾಲಕರಾಗಿರತಕ್ಕ ಕಂಟ್ರಾಕ್ಟರುಗಳಿಗೋ ಅಥವಾ ಅವರು ಹೇಳತಕ್ಕ ದಳ್ಳಾಳಿಗೆ ಸಹಾಯ ಮಾಡುವುದಕ್ಕೆ ಹಾಗೆ ಹಣವನ್ನು ರಿಜರ್ವಾಗಿಟ್ಟಿರಬೇಕೆಂದು ಕಾಣುತ್ತದೆ. ಮುಖ್ಯವಾಗಿ ಈ ಹಣದಿಂದ ಕ್ಷಾಮಕ್ಕೆ ತುತ್ತಾಗಿರತಕ್ಕ ಜನರಿಗೇನೂ ಸಹಾಯವಾಗುವುದಿಲ್ಲ. ಈ ಹಣವೆಲ್ಲಾ ಯಾರಿಗೋ ಯಾವುದೋ ಉದ್ದೇಶ ಸಾಧನೆಗೆ ವಿನಿಯೋಗ ಮಾಡತಕ್ಕ ಹಣವಾಗಿದೆ. ಅಲ್ಲದೆ ಯಾವ ಜಿಲ್ಲೆಯಲ್ಲಿ ಹೆಚ್ಚಿಗೆ ಕ್ಷಾಮ ಉಂಟಾಗಿದೆ ಎಲ್ಲಿ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿದೆ ಎಂಬುದನ್ನು ವಿವೇಚನೆ ಮಾಡದೆ ಎಲ್ಲ ಕಡೆಗೂ ಹಣವನ್ನು ಒಂದೇ ದಾಮಾಷದಲ್ಲಿ ಒದಗಿಸಿದ್ದಾರೆ. ಇದು ಬಹಳ ವಿಚಿತ್ರ. ಮಾನ್ಯ ರೆವಿನ್ಯೂ ಸಚಿವರು ರಾಜ್ಯಾದ್ಯಂತವೂ ತಿರುಗಾಡಿ ಯಾವ ಯಾವ ಪ್ರದೇಶದ ಪರಿಸ್ಥಿತಿ ಹೇಗಿದೆ ಎಂಬುದನ್ನು ಕಣ್ಣಾರ ಮನಗಂಡು ಈ ವರದಿಯನ್ನು ತಯಾರಿಸಿಲ್ಲ. ಇವರು ನಾಲ್ಕು ಗೋಡೆಗಳ ಮಧ್ಯೆ ಇಲ್ಲೇ ಕುಳಿತು ಇದನ್ನು

(ಶ್ರೀ ಬಿ. ದೊಡ್ಡಬೋರೇಗೌಡ)

ತಯಾರಿಸಿದ್ದಾರೆ. 1968ನೇ ವರ್ಷದ ಕ್ಷಾಮ ಪರಿಹಾರ ನಿಧಿಯನ್ನು ಖರ್ಚುಮಾಡಿದ ಬಗ್ಗೆ ವಿಶೇಷ ಟೀಕೆಗಳಾಗಿದ್ದವು. 1968ನೇ ವರ್ಷದ ಕ್ಷಾಮ ಪರಿಹಾರದ ಹಣವನ್ನು ತಾಲ್ಲೂಕ್ ಬೋರ್ಡ್ ಚುನಾವಣೆಗಳಲ್ಲಿ ತಮ್ಮ ಪಕ್ಷದ ಸದಸ್ಯರನ್ನು ಗೆಲ್ಲಿಸುವುದಕ್ಕಾಗಿ 3 ತಿಂಗಳಲ್ಲಿ 8 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರು. ಈ ಬಗ್ಗೆ ಬೇಕಾದಷ್ಟು ಟೀಕೆಗಳು ಬಂದಿದ್ದವು. ಸರ್ಕಾರದವರು ಸ್ವಜನಪಕ್ಷಪಾತದಿಂದ ಹಣವನ್ನು ಖರ್ಚುಮಾಡಿದ್ದಾರೆಂಬ ಅಪಾದನೆಗಳು ಆ ದಿವಸ ಬಂದಿದ್ದವು. ಹಿಂದೆ ನಮ್ಮ ಜಿಲ್ಲೆಯಲ್ಲಿ ಸರ್ಕಾರದವರು ಕ್ಷಾಮ ನಿವಾರಣೆಗಾಗಿ ಹಣವನ್ನು ಖರ್ಚುಮಾಡಿ ಕೆಲವು ಲಿಂಕ್ ರೋಡುಗಳನ್ನೂ ಗೋಕಟ್ಟೆಗಳನ್ನೂ ಮತ್ತು ಕೆಲವು ಸಾಲುಮರಗಳನ್ನು ನೆಡಿಸಿದ್ದರು. ಅವುಗಳೊಂದು ಈ ದಿವಸ ಇಲ್ಲ ಅವುಗಳು ಇರುವುದನ್ನು ಯಾರಾದರೂ ಈ ದಿವಸ ತೋರಿಸಿದರೆ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಆಗ ಖರ್ಚುಮಾಡಿದ ಹಣವೆಲ್ಲಾ ದುರ್ವಿನಿಯೋಗವಾಗಿದೆ. ಇನ್ನು ಮುಂದೆ ಹಾಗೆ ಆಗಬಾರದು ಹಣ ಹಾಗೆ ಅಲ್ಲಿ ದುರ್ವಿನಿಯೋಗವಾದ ಸಂದರ್ಭದಲ್ಲಿ ಒಬ್ಬ ಅಧಿಕಾರಿಯನ್ನು ವಿಚಾರಣೆಗೆ ಗುರಿಪಡಿಸಿ ಆತನ ಸಂಬಳ ಸಾರಿಗೆಗಳನ್ನು ನಿಲ್ಲಿಸಲಾಗಿದ್ದಿತು. ಅದರೆ ಆದರ ಅಖ್ಯೆರು ತೀರ್ಮಾನ ಏನಾಯಿತೆಂಬುದು ತಿಳಿಯಲಿಲ್ಲ. ಕೆಲವು ಸ್ಥಳೀಯ ಮುಖಂಡರ ಒತ್ತಾಯಕ್ಕೆ ಸರ್ಕಾರದವರು ಮಣಿದು ಇಂಥ ಕೆಲಸಕ್ಕೆ ಬಾರದ ಕಡೆ ಹಣವನ್ನು ವ್ಯಯ ಮಾಡುತ್ತಿದ್ದಾರೆ. ಹಿಂದೆ ಎಷ್ಟು ಹಣವನ್ನು ವ್ಯಯ ಮಾಡಿದ್ದಾರೋ ಅದೆಲ್ಲಾ ಹಾಳಾದಂತೆಯೇ, ಅದರಲ್ಲಿ ಒಂದು ಕಾಸೂ ಕೂಡ ಊರ್ಜಿತವಾಗಿಲ್ಲ ಎಂದು ಹೇಳುತ್ತೇನೆ. ದೇಶದಲ್ಲಿ ಹಣವನ್ನು ಯಾವತ್ತೂ ಶಾಶ್ವತವಾದ ಕೆಲಸಗಳಿಗೆ ಮಾತ್ರ ಬಳಸಬೇಕು. ಆದುದರಿಂದ ಈಗಲಾದರೂ ಸರ್ಕಾರದವರು ಹಣವನ್ನು ಶಾಶ್ವತವಾಗಿ ಉಳಿಯತಕ್ಕ ಕೆರೆಕಟ್ಟೆಗಳನ್ನು ಜೀರ್ಣೋದ್ಧಾರಮಾಡುವುದಕ್ಕೆ ಅವುಗಳಲ್ಲಿ ತುಂಬಿರತಕ್ಕ ಹೂಳನ್ನು ತೆಗೆಯುವುದಕ್ಕೆ ವಿನಿಯೋಗಿಸಬೇಕೆಂದು ಒತ್ತಾಯಮಾಡುತ್ತೇನೆ. ಆನೇಕ ಕೆರೆಗಳಲ್ಲಿ ಹೂಳು ತುಂಬಿ ಬೆಳೆಗೆ ಸಾಕಾಗುವಷ್ಟು ನೀರನ್ನು ಶೇಖರಣೆ ಮಾಡುವುದಕ್ಕಾಗುತ್ತಿಲ್ಲ. ಆದ್ದರಿಂದ ಈ ಹೂಳನ್ನು ತೆಗೆಸುವುದಕ್ಕೆ ಸರ್ಕಾರದವರು ಹಣವನ್ನು ಉಪಯೋಗ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮಲ್ಲಿ ಅನೇಕ ಗ್ರಾಮಗಳಲ್ಲಿ ಜನರಿಗೆ ಕುಡಿಯುವ ನೀರಿನ ಬಾವಿಗಳ ಸೌಕರ್ಯವಿಲ್ಲ. ಜನರು ನೀರಿಗಾಗಿ ಬಹಳ ತೊಂದರೆ ಪಡುತ್ತಿದ್ದಾರೆ. ಅದನ್ನು ಕಣ್ಣಾರೆ ನೋಡಬೇಕೆಂದು ನಾನು ರೆವಿನ್ಯೂ ಮಂತ್ರಿಗಳಿಗೆ ಆಹ್ವಾನಿಸಿದ್ದೆನು. ಆದರೆ ಅವರಿಗೆ ಅವರ ರಾಜಕೀಯ ಗೊಂದಲದಲ್ಲಿ ಬರುವುದಕ್ಕೆ ಸಾಧ್ಯವಾಗಿಲ್ಲ.

ಇನ್ನು ಕಂದಾಯದ ರಿಮಿಷನ್ನಿನ ಬಗ್ಗೆ ನಾಲ್ಕಾಣೆಗಿಂತ ಕಡಮೆ ಬೆಳೆ ಆಗಿದ್ದರೆ ಮಾತ್ರವೇ ರಿಮಿಷನ್ ಸಿಕ್ಕುವುದು ಎಂದು ಹೇಳುತ್ತಿದ್ದಾರೆ. ಆದರೆ ನಮ್ಮಲ್ಲಿ ಅನೇಕ ಗ್ರಾಮಗಳಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಮಳೆ ಬೆಳೆಗಳಿಲ್ಲದೆ ಅವು ಸದಾ ಕ್ಷಾಮಕ್ಕೆ ತುತ್ತಾಗಿದ್ದರೂ ಮತ್ತು ಅಲ್ಲಿ ಏನೂ ಬೆಳೆಯದೆ ಇದ್ದಾಗ್ಯೂ ಸ್ಥಳೀಯ ಗ್ರಾಮಾಧಿಕಾರಿಗಳು ಅಲ್ಲಿ 12 ಆಣೆ ಬೆಳೆಯಾಗಿದೆ ಎಂದು ಪಹಣಿಯನ್ನು ಬರೆದು ಕಳುಹಿಸುತ್ತಿದ್ದಾರೆ. ಅದನ್ನು ನೋಡಿ ಮಂತ್ರಿಗಳು ನಮಗಿಲ್ಲಿ ಉತ್ತರವನ್ನು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಮಂತ್ರಿಗಳು ಖುದ್ದು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಮುಂದಕ್ಕೆ ಕ್ಷಾಮ ನಿವಾರಣೆ ಹಣವನ್ನು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡುಗಳಿಗೆ ವಹಿಸದೆ ಅದನ್ನು ಪಿ.ಡಬ್ಲ್ಯೂ.ಡಿ.ಗೆ ವಹಿಸಬೇಕೆಂದು ಒತ್ತಾಯ ಮಾಡುತ್ತೇನೆ. ಏಕೆಂದರೆ ಹಿಂದೆ ಸರ್ಕಾರದವರು ಸ್ಥಳೀಯ ಮುಖಂಡರ ಒತ್ತಾಯಕ್ಕೆ ಮಣಿದು ಹಣವನ್ನು ಅವರ ಹೇಳಿದ ಹಾಗೆ ಅವರ ಏಜಂಟರಿಗೆ ಖರ್ಚುಮಾಡಲು ಕೊಟ್ಟಿದ್ದರಿಂದ ನಮ್ಮ ಮಂಡ್ಯಾ ಜಿಲ್ಲೆಯಲ್ಲಿ ಯಾವುದೋ ಒಂದು ಗೋ–ಕಟ್ಟೆಯನ್ನು 500 ರೂಪಾಯಿಗಳಲ್ಲಿ ರಿಪೇರಿಯಾಗುವುದನ್ನು 2-3 ಸಾವಿರ ರೂಪಾಯಿಗಳವರೆಗೆ ಖರ್ಚುಮಾಡಿದ್ದರು. ಸರ್ಕಾರದವರು ಹೀಗೆ ಕಂಟ್ರಾಕ್ಟರ ಮೂಲಕ ಮಾಡಿಸತಕ್ಕ ಕೆಲಸಗಳಲ್ಲಿ ಶೇ. 75 ಅವರ ಜೇಬಿಗೆ ಇನ್ನುಳಿದ 25ರಷ್ಟು ಹಣ ಆ ಕೆಲಸಕ್ಕೆ ವಿನಿಯೋಗವಾಗುವುದು, ಹೇಗೆ ಮಾಡುವುದು ಬಹಳ ಪಾಪದ ಕೆಲಸ. ಹೀಗಾದರೆ ದೇಶಾಭಿವೃದ್ಧಿಯ ಕೆಲಸಗಳು ಹೇಗೆ ಆಗುತ್ತವೆ ? ನಾನು ಕಳೆದ ಒಂದೆರಡು ವರ್ಷಗಳಿಂದಲೂ ಆ ಲೋಕಪಾವನೀ ನದಿಯ ಅಕ್ಕಪಕ್ಕದಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮನ್ನು ಜಾರಿಗೆ ತರಬೇಕೆಂದು ಸರ್ಕಾರದವರಲ್ಲಿ ಒಂದೇ ಸಮನಾಗಿ ಒತ್ತಾಯ ಮಾಡುತ್ತಲೇ ಬಂದಿದ್ದೇನೆ. ಆದರೆ ಇಲ್ಲಿಯವರೆಗೂ ಏನೂ ಪ್ರಯೋಜನವಾಗಿಲ್ಲ. ಆ ಸ್ಕೀಮು ಇನ್ನೂ ಹಾಗೇ ಸ್ಕೀಮಾಗೇ ಉಳಿದಿದೆ. ಅದನ್ನು ಕಾರ್ಯರೂಪಕ್ಕೆ ತಂದರೆ ಸುಮಾರು 2 ಗ್ರಾಮಗಳಿಗೆ ಶಾಶ್ವತವಾದ ಉಪಕಾರವಾಗುವುದು. ಸರ್ಕಾರಕ್ಕೆ ಅಂಥ ಶಾಶ್ವತವಾದ

ಅನುಕೂಲವನ್ನು ಜನಗಳಿಗೆ ಮಾಡಿಕೊಡಬೇಕೆಂಬ ಆಕಾಂಕ್ಷೆ ಇದ್ದರೆ ಇಂಥ ಕೆಲಸಗಳನ್ನು ಅವರು ಕೈಗೊಳ್ಳುತ್ತಿದ್ದರು. ಈಗ ಹಿಂದೆ ಇದ್ದಹಾಗೇ ಯಾವ ಚುನಾವಣೆಗಳೂ ಇರುವುದಿಲ್ಲ. ಚುನಾವಣೆ ಬರುವುದು ಇನ್ನ 1972ರ ಮೇಲೆ ಮಾತ್ರ. ಆದ್ದರಿಂದ ಅದಕ್ಕಾಗಿ ಈಗಲೇ ಹಣವನ್ನು ಖರ್ಚು ಮಾಡಿದರೆ ಯಾವ ಪ್ರಯೋಜನವೂ ಇಲ್ಲ. ಕ್ಷಾಮ ನಿವಾರಣೆಯ ಹಣದ ಬಗ್ಗೆ ಸರಿಯಾಗಿ ಜನತೆಗೆ ಸೇರಿದೆಯೋ ಎಂಬುದನ್ನು ಪರಿಶೀಲಿಸಲು ಒಂದು ಅಧಿಕಾರಿಗಳ ನೆರೆ ನೇಮಕ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಈ ಹಣವನ್ನು ನಿಮಗೆ ಬೇಕಾದ ಯಾವುದಾದರೂ ಒಂದು ತಾಲ್ಲೂಕಿಗೇ ಆಗಲಿ, ಯಾವುದಾದರೂ ಒಂದು ಜಿಲ್ಲೆಗೇ ಆಗಲಿ ಖರ್ಚು ಮಾಡುವಾಗ ಉಪಯೋಗವಾಗುವಂತಹ ಕೆಲಸ ಮಾಡಿ: ರಾಜ್ಯದಲ್ಲಿರತಕ್ಕಂಥ 26 ಸಾವಿರ ಗ್ರಾಮಗಳು ಏನು ಇವೆ ನನ್ನ ಅನುಭವದ ಪ್ರಕಾರ ಹೇಳುವುದಾದರೆ ಆ ಗ್ರಾಮಗಳೆಲ್ಲಾ ಅಭಾವಕ್ಕೆ ತುತ್ತಾಗಿರುವ ಸನ್ನಿವೇಶ ಇದೆ. ಅದಕ್ಕೋಸ್ಕರ ನಾನು ಹೇಳುವುದು ಏನೆಂದರೆ ನೀರಾವರಿ ಯೋಜನೆಗಳನ್ನು ಕೈಗೊಂಡರೆ ಮಾತ್ರ ಈ ಬಡತನ ನಿವಾರಣೆಯಾಗಿ ಕ್ಷಾಮ ಮತ್ತೆ ತಲೆದೋರುವುದಿಲ್ಲ. ಹಾಗಿಲ್ಲದೆ ನೀವು ಬೇರೆ ಯೋಜನೆಗಳನ್ನು ಮಾಡಿದರೆ ಅದರಲ್ಲಿ ಕಿಂಚಿತ್ ಕೂಡ ನಿಜವಾಗಿಯೂ ಜನತೆಗೆ ಉಪಯೋಗವಾಗುವುದಿಲ್ಲ ಎಂದು ಹೇಳುತ್ತೇನೆ. ಈ 23 ವರ್ಷದಿಂದಲೂ ಕೂಡ ನೀವು ಏನು ಮಾಡಿದ್ದೀರಿ ಎನ್ನುವುದನ್ನು ಯೋಚನೆ ಮಾಡಿ. ನಿಮ್ಮ ಮಾಸ್ಟರ್ ಪ್ಲಾನ್‌ನಿಂದ ನೀರಾವರಿ ಯೋಜನೆಗಳು ಎಷ್ಟು ಫಲಕೊಟ್ಟಿವೆ ಎನ್ನುವುದನ್ನೂ ಸಹ ನೋಡಿ. ನಮ್ಮ ರಾಷ್ಟ್ರದಲ್ಲಿ ಹಿಂದುಳಿದ ದೇಶ ಎಂದರೆ ತಮಿಳುನಾಡು. ಅಲ್ಲಿ ಶೇಕಡ $23\frac{1}{4}$ರಷ್ಟು ನೀರಾವರಿ ಆಗಿದ್ದರೆ ನಮ್ಮಲ್ಲಿ ಶೇಕಡ $8\frac{1}{4}$ರಷ್ಟು ನೀರಾವರಿ ಆಗಿದೆ ಎಂದು ನೀವೇ ಹೇಳಿದ್ದೀರಿ. ಪಕ್ಕದ ರಾಜ್ಯದಲ್ಲಿ ಇರುವ ಹಾಗೆ ನಮ್ಮ ರಾಜ್ಯದಲ್ಲೂ ಕೂಡ ನೀರಾವರಿ ಯೋಜನೆ ಮಾಡುವುದಕ್ಕೆ ಸಾಧ್ಯ ಇದೆ. ಹೀಗಿರುವಾಗ ನಮ್ಮ ಹಣವನ್ನೆಲ್ಲಾ ಈ ನೀರಾವರಿ ಯೋಜನೆಗಳಿಗೆ ಉಪಯೋಗಿಸಿದ್ದರೆ, ಲಿಫ್ಟ್ ಇರ್ರಿಗೇಷನ್‌ಗೆ ಉಪಯೋಗಿಸಿದರೆ ತುಂಬಾ ಅನುಕೂಲವಾಗುತ್ತಿತ್ತು. ತಾವು ಹೇಳುತ್ತೀರಿ ಬೋರ್‌ವೆಲ್ ಮಿಷನ್‌ನಿಂದ ಬಾವಿಯನ್ನು 24 ಗಂಟೆಯಲ್ಲಿ 120 ಅಡಿ ಆಳ ಮಾಡುತ್ತೇವೆಂದು. ಇದನ್ನು ಜಪಾನ್‌ನಿಂದ ಮತ್ತು ಇಂಗ್ಲೆಂಡ್‌ನಿಂದ ತರಿಸಿ ಬೆಂಗಳೂರಿನಲ್ಲಿರುವ ಹೆಬ್ಬಾಳ್‌ನಲ್ಲಿ ಟ್ರೈಯಲ್ ನೋಡುವುದಕ್ಕೆ ಇಟ್ಟಿದ್ದೀರಿಯೇ ಹೊರತು ಇದರ ಬಗ್ಗೆ ಜನತೆಗೆ ಕಿಂಚಿತ್ ಕೂಡ ಸಹಾಯ ಮಾಡಿಲ್ಲ. ಶ್ರೀಮಾನ್ ನಾಗಪ್ಪನವರೂ ಸಹ ತಮ್ಮ ಬಾವಿಗೆ ಎಂಟು ಸಾವಿರ ರೂಪಾಯಿ ಖರ್ಚು ಮಾಡಿ 25 ಅಡಿ ಆಳ ಮಾಡಿಸಿದ್ದಾರೆ. ಆದರೆ ನೀರು ಬಂದಿಲ್ಲ. ಆದರೂ ಮಾನ್ಯ ನಾಗಪ್ಪನವರು ತಮ್ಮ ಬಾವಿಯಲ್ಲಿ ನೀರು ತುಂಬಿಹೋಗಿದೆ ಎಂದು ಹೇಳುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ನೆರವನ್ನು ನೀಡಿದ್ದಾರೆಯೇ? ಹೆಬ್ಬಾಳ್‌ನಲ್ಲಿ ಇದಕ್ಕೆ ನಿಮ್ಮ ಇಂಜನೀಯರ್‌ಸ್ನನ್ನು ಇಟ್ಟಿದ್ದೀರಿ. ಯಾವನಾದರೂ ಒಬ್ಬ ಬೋರ್‌ವೆಲ್ ಮಿಷನ್ ಬೇಕು ಎಂದು ಕೇಳಿದರೆ 8-10 ಜನರು ಸೇರಿ ಬಾವಿಗಾಗಿ ಒಬ್ಬೊಬ್ಬರೂ ಒಂದೊಂದು ಸಾವಿರ ರೂಪಾಯಿ ಡಿಪಾಸಿಟ್ ಮಾಡಿದರೆ ಸಪ್ಲೈ ಮಾಡುತ್ತೇವೆ ಎಂದು ಹೇಳುತ್ತಾರೆ. ನೀವು ಈಗ ಸೋಷಿಯಲಿಸಮ್ ಎಂದು ಹೇಳುತ್ತೀರಿ. ನೀವು ಮಾಡುತ್ತಾ ಬರುವುದು ಅದಕ್ಕೆ ತದ್ವಿರುದ್ಧವಾಗಿದೆ. ಒಬ್ಬೊಬ್ಬರು ಮುಂದೆ ಬಂದು ಇದಕ್ಕೆ ಡಿಪಾಸಿಟ್ ಮಾಡುವುದು ಅಷ್ಟು ಸುಲಭವಲ್ಲ. ಯಾರು ಮುಂದೆ ಬರುತ್ತಾರೋ ಅವರಿಗೆ ರಿಯಾಯಿತಿ ದರದಲ್ಲಿ ಬೋರ್‌ವೆಲ್ ಮಿಷನ್ ಕೊಟ್ಟು ಬಾವಿ ತೆಗೆಸುವ ಚಳುವಳಿ ಮಾಡಿ. ಹಿಂದೆ ನಮ್ಮ ದೇಶದಲ್ಲಿ ಸಹಕಾರ ಸಂಘಗಳ ಬಗ್ಗೆ ಏನು ಒಂದು ಚಳುವಳಿ ಆಯಿತೋ ಅದರಂತೆ ಬೋರ್‌ವೆಲ್ ಮಿಷನ್ ಕೊಟ್ಟು ಬಾವಿ ತೆಗೆಸುವ ಚಳುವಳಿ ಮಾಡಿ. ಈ ಸಣ್ಣಪುಟ್ಟ ಕಂಟ್ರಾಕ್ಟುದಾರರ ಬೆಳವಣಿಗೆಗೆ ಅವಕಾಶ ಕೊಡಬೇಡಿ. ಈ ಕಂಟ್ರಾಕ್ಟರುಗಳು ಯಾವ ಕೆಲಸವನ್ನು ತೆಗೆದುಕೊಂಡರೂ ಅವರ ಹತ್ತಿರ ಖಾಯಂ ಆಗಿ ಇರತಕ್ಕ ಕೂಲಿಗಾರರು 8-10 ಜನ ಏನು ಇದ್ದಾರೋ ಅವರ ಹತ್ತಿರವೇ ಕೆಲಸ ಮಾಡಿಸುತ್ತಾರೆಯೇ ಹೊರತು ಸಮಗ್ರವಾಗಿ ಎಲ್ಲಾ ಕಾರ್ಮಿಕರಿಗೂ ಸರಿಯಾಗಿ ಕೆಲಸ ಕೊಡುವುದಿಲ್ಲ. ಅಗ್ರಿಕಲ್ಚರಲ್ ಬಾಬಿಗೆ ಒಂದು ಹೆಣ್ಣಾಳು ಕೂಲಿ 1-35 ಪೈಸೇ ಎಂದು ಮಾಡಿದ್ದೀರಿ. ಆ ಕೂಲಿಗೆ ಯಾರೂ ಬರುವುದಿಲ್ಲ. ಶ್ರೀಮಾನ್ ವಿಠಲದಾಸಶೆಟ್ಟರು ಲೆವಿ ರೂಪದಲ್ಲಿ ಉತ್ತಮ ದರ್ಜೆ ಅಕ್ಕಿಯನ್ನು 78 ಪೈಸೇಗೆ ಕೊಂಡು ಅದಕ್ಕೆ ಇತರ ಎಲ್ಲಾ ಖರ್ಚು ಸೇರಿಸಿದರೆ 0-88 ಪೈಸೇ ಬಿದ್ದಿದ್ದರೆ ಅದನ್ನು ಸಹಕಾರ ಸಂಘಗಳ ಮೂಲಕ 1.12 ಪೈಸೆಗೆ ಮಾರಾಟ ಮಾಡುತ್ತಿದ್ದೀರಿ. ಇದರಿಂದ ತಮಗೆ ಕ್ವಿಂಟಾಲ್‌ಗೆ ಲಾಭ ಬರುವುದು 24 ರೂಪಾಯಿ. ನೀವು ಒಂದು ಹೆಣ್ಣಾಳಿಗೆ ನಿಗದಿ ಮಾಡಿರುವ ಕೂಲಿ 1.35 ಪೈಸೇ. ಈ ಧಾರಣೆ ಕೊಟ್ಟು ಬಡಜನರು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಏನಾದರೂ 4–5 ಜನ ಮಕ್ಕಳು ಇದ್ದರೆ ಅವರು ಏನೂ ಮಾಡುವುದಕ್ಕೂ ಸಾಧ್ಯವಿಲ್ಲ. ಈಗ ನಿಗದಿ ಮಾಡಿರುವ ಕೂಲಿಯಿಂದ ಈ ಅಕ್ಕಿಗೆ ಇಷ್ಟೊಂದು ಧಾರಣೆ ಮಾಡಿರುವಾಗ ಬಾಕಿ ಇದರ ಜೊತೆಗೆ ಬೇಕಾದ ಎಣ್ಣೆ ವಗೈರೆಗಳನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವೇ? ಈ ಸಣ್ಣಪುಟ್ಟ ಕಂಟ್ರಾಕ್ಟುದಾರರು ಅವರ ಹತ್ತಿರ ಇರುವ ಕಾರ್ಮಿಕರಿಂದ 8-10 ದಿವಸ ಕೆಲಸ ಮಾಡಿಸಿ 3 ಸಾವಿರ ರೂಪಾಯಿಯನ್ನು

(ಶ್ರೀ ಬಿ. ದೊಡ್ಡಬೋರೇಗೌಡ)

ಸಂಪಾದನೆ ಮಾಡುತ್ತಾರೆ. ಈ ಅಧಿಕಾರಿಗಳು ಅವರ ಅನುಯಾಯಿಗಳಾಗಿರುತ್ತಾರೆ, ಇಂತಹವರಿಗೆ ಮುಂದೆ ಅವಕಾಶ ಕೊಡಬೇಡಿ. ಜನತೆಯು ಇದನ್ನು ಸಹಿಸಲು ಸಾಧ್ಯವಿಲ್ಲ. ಮೈಸೂರು ರಾಜ್ಯದಲ್ಲಿ ನಿಷ್ಠಾವಂತರಾದ ಜನರು ಇದುವರೆವಿಗೂ ಮುಂದೆ ಒಳ್ಳೆಯದಾಗಬಹುದೆಂದು ಆಶಿಸಿದ್ದರು. ಆದರೆ ಇದುವರೆವಿಗೆ ಆದದ್ದಾದರು ಏನು ? ಇನ್ನುಮುಂದೆ ಇದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ. ಕಾಲ ಸಮೀಪಿಸುತ್ತಾ ಇದೆ ಎಂದು ನಿಮಗೆ ಎಚ್ಚರಿಕೆ ಕೊಡುತ್ತೇನೆ. ಈಗಲಾದರೂ ಕೂಡ ನೀವು ಜನಗಳ ಕಷ್ಟಸುಖಗಳಲ್ಲಿ ಪಾಲುಗೊಂಡು ಸಹಾಯ ಮಾಡಿ ಅವರುಗಳಿಗೆ ರಾಜಮಹಾರಾಜರುಗಳಂಥ ವೈಭವ ಏನೂ ಬೇಡ. ನೀವು ವಾಸ ಮಾಡುವಂಥ ಮನೆ ಬೇಡ. ಅನೇಕ ಗ್ರಾಮಗಳಲ್ಲಿ ಮಳೆ ಹುಯ್ಯದೆ ಕುಡಿಯುಲಿಕ್ಕೆ ನೀರೂ ಸಹ ಇಲ್ಲ. ಮೇಲುಕೋಟೆ, ದುದ್ದ, ಮಂಡ್ಯ ಮುಂತಾದ ಕಡೆಗಳಲ್ಲಿ 12 ಮೈಲಿಗಳವರೆಗೆ ಯಾವ ಕೆರೆಯೂ ತುಂಬಿಲ್ಲ. ಕುಡಿಯಲಿಕ್ಕೂ ನೀರೂ ಇಲ್ಲ. ನೀವು ಅಂತಹ ಕಡೆ ಪ್ರವಾಸ ಮಾಡಿದರೆ ಗೊತ್ತಾಗುತ್ತದೆ. ಈವೊತ್ತಿನ ದಿವಸ ಲೋಕಪಾವನಿಯಲ್ಲಿ 200-300 ಕ್ಯೂಸೆಕ್ಸ್ ಅಷ್ಟು ನೀರು ಹರಿಯುತ್ತದೆ. ಅಲ್ಲಿ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಹೀಗಿರುವಾಗ ಏತದ ನೀರಾವರಿ ಯೋಜನೆಗಳನ್ನು ಏತಕ್ಕೆ ಮಾಡಬಾರದು? ಕೆರೆಗಳಲ್ಲಿ ಹೂಳು ತೆಗೆಸುವ ವ್ಯವಸ್ಥೆಯನ್ನು ಮಾಡಿ. ತಾಲ್ಲೂಕು ಬೋರ್ಡುಗಳಿಗೆ ಕ್ಷಾಮನಿಧಿ ಹಣ ಕೊಡಬೇಡಿ. ಡಿವಿಷನಲ್ ಕಮೀಷನರಿಗೆ 50 ಪರ್ಸೆಂಟು ಅಂಶ ಏನು ರಿಸರ್ವ್ ಮಾಡಿ ಇಟ್ಟಿದ್ದೀರಿ ಈ ಹಣವನ್ನು ಜನತೆಗೆ ಎಲ್ಲಿ ತೊಂದರೆ ಇದೆಯೋ ಅಂತಹ ಕಡೆ ನೋಡಿ ಕೆಲಸ ಮಾಡಿಸಿದರೆ ಒಳ್ಳೆಯ ಹೆಸರು ಬರುತ್ತದೆ. ಮಾನ್ಯ ರೆವಿನ್ಯೂ ಸಚಿವರು ಬಹಳ ನಿಷ್ಠಾವಂತರು. ತಾವು ರಾಜಕೀಯ ಗೊಂದಲದಲ್ಲಿ ಸಿಕ್ಕಿ ಒಂದು ಕೆಟ್ಟ ಅಪ್ರಕೃತಿಗೆ ಈಡಾಗಬೇಡಿರೆಂದು ನಾನು ಕಳಕಳಿಯಿಂದು ಮನವಿ ಮಾಡಿಕೊಳ್ಳುತ್ತೇನೆ. ನೀವು ವಾಸ ಮಾಡತಕ್ಕಂಥ ಮನೆಗೆ ಇರುವ ಸೌಲಭ್ಯಗಳಾವುವೂ ನಮ್ಮ ಜನತೆಗೆ ಬೇಡ. ಅವರಿಗೆ ಕೆಲಸ ಒದಗಿಸಿಕೊಟ್ಟು ಕೆಲಸಕ್ಕೆ ತಕ್ಕಂತ ಕೂಲಿ ಕೊಟ್ಟರೆ ಸಾಕು. ಅವರ ಹೊಟ್ಟೆ ತುಂಬಿಕೊಳ್ಳುವುದಕ್ಕೆ 1/2 ಕೆ.ಜಿ ಅಕ್ಕಿ ಸಮಾನ್ಯವಾದ ವಸತಿ ಉದ್ಯೋಗ, ಕುಡಿಯಲಿಕ್ಕೆ ನೀರು ಇಷ್ಟುಕೊಟ್ಟರೆ ಸಾಕು. ಶ್ರೀಮಾನ್ ಶಿವಪ್ಪನವರು ಹೇಳಿದರು ಅವರ ಗ್ರಾಮಗಳಲ್ಲಿ ಕುಡಿಯಲಿಕ್ಕೆ ನೀರನ್ನು 8-10 ಮೈಲಿಗಳ ದೂರದಿಂದ ತರುತ್ತಾರೆ ಎಂದು. ಆದ್ದರಿಂದ ನಾನು ಹೇಳುವುದು ಈಗಿನ ಧೋರಣೆಯನ್ನು ಮುಂದುವರೆಸಿಕೊಂಡು ಹೋಗಬೇಡಿ ಎಂದು. ಜನತೆಯ ಕಷ್ಟವನ್ನು ತಿಳಿದುಕೊಂಡು ನಿಮ್ಮ ಏಜೆಂಟ್ಸ್ ಕೈಗೆ ಹಣ ಕೊಡದೆ ನೇರವಾಗಿ ಪಿ ಡಬ್ಲ್ಯೂ.ಡಿ. ಇಲಾಖೆಯ ಯೋಗ್ಯ ಅಧಿಕಾರಗಳ ಕೈಗೆ ಹಣಕೊಟ್ಟು ರಾಜ್ಯದಲ್ಲಿ ಕ್ಷಾಮಡಾಮರುಗಳು ಏನು ಇವೆಯೋ ಅವಕ್ಕೆ ಒಂದು ಖಾಯಂ ಪರಿಹಾರ ಯೋಜನೆಯನ್ನು ಮಾಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಂಡು, ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎನ್. ರಾಮೇಗೌಡ (ಸಿರಾ).—ಮಾನ್ಯ ಅಧ್ಯಕ್ಷರೇ, ಈಗತಾನೇ ಮಾನ್ಯ ಸ್ನೇಹಿತರನೇಕರು ಅಭಾವ ಪರಿಸ್ಥಿತಿ ವಿಷಯದಲ್ಲಿ ಸಾಕಷ್ಟು ಅವರ ಅನುಭವಗಳನ್ನು ಹೇಳಿದ್ದಾರೆ. ಈಗ ನಮಗೆ ಸರ್ಕಾರದವರು ಒದಗಿಸಿಕೊಟ್ಟಿರತಕ್ಕಂಥ ಒಂದು ರಿಪೋರ್ಟ್ ನೋಡಿದರೆ ಅದರಲ್ಲಿ ಮೊದಲನೇ ಪೇಜಿನಲ್ಲಿ ಕೊನೇ ಪ್ಯಾರಾದಲ್ಲಿ ಈ ರೀತಿ ಇದೆ :

> "In Bangalore Division, rainfall has been inadequate in some parts of the taluks of Chitradurga, Challakere, Molakalmuru, Jagalur, Hiriyur, Hosadurga and Holalkere of Chitradurga district and the taluks of Tumkur, Kunigal, Gubbi, Tiptur and Madhugiri of Tumkur District are badly affected by drought."

ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಯಾವ ತಾಲ್ಲೂಕುಗಳು ತೀವ್ರವಾದಂಥ ಅಭಾವ ಪರಿಸ್ಥಿತಿಗೆ ತುತ್ತಾಗಿವೆಯೋ ಅಂಥಾ ತಾಲ್ಲೂಕುಗಳನ್ನು ಅವರ ರಿಪೋರ್ಟ್‌ನಲ್ಲಿ ಬಿಟ್ಟುಬಿಟ್ಟು ಬೇರೆ ರಿಪೋರ್ಟ್ ಮಾಡಿ ನಮಗೆ ಒದಗಿಸಿರತಕ್ಕಂಥಾದ್ದು ಬಹಳ ಶೋಚನೀಯವಾದ ವಿಷಯ. ತುಮಕೂರು ಜಿಲ್ಲೆಯಲ್ಲಿ ಶಿರಾ, ಪಾವಗಡ ಇವೂ ಕೂಡ ಬಹಳ ತೀವ್ರವಾದ ಅಭಾವಕ್ಕೆ ಒಳಗಾದಂಥ ಪ್ರದೇಶಗಳು. ಕಳೆದ 6—7 ವರ್ಷಗಳಿಂದಲೂ ಈ ಪ್ರದೇಶಗಳು ತೀವ್ರವಾದಂಥ ಅಭಾವಕ್ಕೆ ತುತ್ತಾಗಿದ್ದು ಈ ವರ್ಷವೂ ಕೂಡ ಎಲ್ಲದಕ್ಕಿಂತಲೂ ಹೆಚ್ಚಿನ ಅಭಾವವನ್ನು

ಎದುರಿಸುತ್ತಾ ಇದೆ. ಸಿರಾ ಮತ್ತು ಪಾವಗಡ ತಾಲ್ಲೂಕುಗಳನ್ನು ಈ ರಿಪೋರ್ಟ್‌ನಲ್ಲಿ ನಮೂದು ಮಾಡದೆ ಇರುವುದು ಬಹಳ ವಿಷಾದನೀಯವಾದ ವಿಷಯ. ಬಹುಶಃ ತಪ್ಪಾಗಿ ಪ್ರಿಂಟ್ ಆಗಿರಬಹುದು ಅಥವಾ ಗೊತ್ತಿಲ್ಲದೆ ಆಗಿರಬಹುದು. ಮಾನ್ಯ ಕಂದಾಯ ಸಚಿವರು ಉತ್ತರ ಕೊಡುವಾಗಲಾದರೂ ಈ ಎರಡು ತಾಲ್ಲೂಕುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಬೇಕು ಎಂದು ನಾನು ಅವರಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

5–00 P.M.

ಈ ತಾಲ್ಲೂಕುಗಳು ಪದೇ ಪದೇ ಕ್ಷಾಮಕ್ಕೆ ತುತ್ತಾಗತಕ್ಕ ಪ್ರದೇಶಗಳು. ಕೆಲವು ವೇಳೆ ಪ್ರತಿ ವರ್ಷವೂ ಕೂಡ ಹಂಗಾಮಿ ಪರಿಹಾರ ಕಾರ್ಯಗಳನ್ನು ಸರ್ಕಾರದವರು ಒದಗಿಸುತ್ತಿದ್ದಾರೆ. ಜನಗಳಿಗೆ ಕೂಲಿ ಸಿಕ್ಕಿ ತನ್ಮೂಲಕ ಆಹಾರ ಸಿಕ್ಕಲಿ ಎನ್ನುವ ದೃಷ್ಟಿಯಿಂದ ತಾತ್ಕಾಲಿಕವಾಗಿ ಕೆಲವು ಪರಿಹಾರ ಕೆಲಸಗಳನ್ನು ಒದಗಿಸಿ ಕೊಟ್ಟು ಜನರಿಗೆ ಅನುಕೂಲ ಮಾಡತಕ್ಕ ಪದ್ಧತಿಯನ್ನು ಇಟ್ಟು ಕೊಂಡಿದ್ದಾರೆ. ತಾತ್ಕಾಲಿಕ ಪರಿಹಾರ ಕೆಲಸಗಳಿಗಾಗಿ ಪ್ರತಿವರ್ಷವೂ ಒಂದೊಂದು ತಾಲ್ಲೂಕಿಗೆ ಐದಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕ ಯೋಜನೆಯನ್ನು ಸರ್ಕಾರ ಇಟ್ಟುಕೊಂಡಿದೆಯೋ ಎನ್ನುವುದನ್ನು ಅವರೇ ತೀವ್ರವಾಗಿ ಪರಿಶೀಲನೆ ಮಾಡಬೇಕು. ಎಲ್ಲಿ ಸತತವಾಗಿ ಅಭಾವ ಪರಿಸ್ಥಿತಿ ಇರುತ್ತದೆ, ಎಲ್ಲೆಲ್ಲಿ ಬಹುಕಾಲದಿಂದಲೂ ಅಭಾವಕ್ಕೆ ತುತ್ತಾಗತಕ್ಕ ಪ್ರದೇಶಗಳಿವೆ, ಅಂಥ ಪ್ರದೇಶಗಳಲ್ಲಿ ಖಾಯಂ ಆದ ಪರಿಹಾರ ಕಾರ್ಯಗಳನ್ನು ಮಾಡದೇ ಹೋದರೆ ತುರ್ತು ಮತ್ತು ತಾತ್ಕಾಲಿಕವಾದ ಪರಿಹಾರ ಕಾರ್ಯಗಳಿಂದ ಸರ್ಕಾರದ ಹಣ ಖರ್ಚಾಗುತ್ತದೆ ಮತ್ತು ಅಲ್ಪ ಸ್ವಲ್ಪ ಪ್ರಯೋಜನ ಜನರಿಗೆ ಅನುಕೂಲವಾಗುವುದಕ್ಕೆ ಅವಕಾಶ ವಾಗುತ್ತದೆಯೇ ವಿನಾ ಖಾಯಂ ಆದ, ಶಾಶ್ವತವಾದ ಪರಿಹಾರಕ್ಕೆ ಅವಕಾಶವಾಗುವುದಿಲ್ಲ. ಕೆಲವು ಪ್ರದೇಶಗಳಲ್ಲಿ ಶಾಶ್ವತವಾದ ಪರಿಹಾರ ಕಾರ್ಯಗಳಿಗೆ ಅವಕಾಶವಿದೆ. ಉದಾಹರಣೆಗಾಗಿ ಕೆಲವು ವಿಚಾರಗಳನ್ನು ಹೇಳುತ್ತೇನೆ.

ಸಿರಾ ತಾಲ್ಲೂಕಿನಲ್ಲಿ ಗಾಯತ್ರಿ ಜಲಾಶಯವಿದೆ. ಈ ಜಲಾಶಯದ ಕೋಡಿಗೆ ಕ್ರೆಸ್ಟ್ ಗೇಟು ಗಳನ್ನು ಹಾಕಿದರೆ ಅದರ ಕೆಳಗೆ ಈಗ ಇರುವ 6 ಸಾವಿರ ಎಕರೆ ಅಚ್ಚುಕಟ್ಟಿನ ಜೊತೆಗೆ ಇನ್ನೂ ಐದಾರು ಸಾವಿರ ಎಕರೆ ಸಾಗುವಳಿಯಾಗುವುದಕ್ಕೆ ಅವಕಾಶವಾಗುತ್ತದೆ. ಈ ಪ್ರದೇಶ ಕ್ಷಾಮ ಪೀಡಿತ ಪ್ರದೇಶ ಈ ಜಲಾಶಯಕ್ಕೆ ಕ್ರೆಸ್ಟ್ ಗೇಟುಗಳನ್ನು ಹಾಕಿದರೆ ಅನುಕೂಲವಾಗುತ್ತದೆ ಎಂದು ಹೇಳಿದರೂ ಕೂಡ ಪಬ್ಲಿಕ್ ವರ್ಕ್ಸ್ ಇಲಾಖೆಯವರು ನೀರಿನ ಅಳತೆ ಮಾಡುತ್ತಿದ್ದೇವೆ, ಎಂಬ ಕಾರಣ ಕೊಟ್ಟು ಆ ಕೆಲಸವನ್ನು ಮುಂದೂಡುತ್ತಿದ್ದಾರೆ. ಅದಕ್ಕೆ ಯಾವ ಕಾರ್ಯಕ್ರಮವನ್ನೂ ಕೂಡ ಹಾಕಿಕೊಂಡಿಲ್ಲ. ಅನೇಕ ಸಂದರ್ಭದಲ್ಲಿ ನೀರಿನ ಅಳತೆ ಮಾಡಿದ್ದೇವೆ ಎಂದು ಹೇಳಿದ್ದಾರೆ, ಸಾಕಷ್ಟು ನೀರು ಒದಗುತ್ತದೆ ಎಂದು ಕೂಡ ಅಭಿಪ್ರಾಯ ಪಟ್ಟಿದ್ದಾರೆ. ಇಂಥ ಪರಿಸ್ಥಿತಿ ಇರುವಾಗ ಕ್ರೆಸ್ಟ್ ಗೇಟುಗಳನ್ನು ಹಾಕಿದರೆ ಹೆಚ್ಚಾಗಿ ಐದು ಸಾವಿರ ಎಕರೆ ಸಾಗುವಳಿಗೆ ಬಂದು ಅದರಿಂದ ಅಭಾವ ಪೀಡಿತ ಪ್ರದೇಶದ ರೈತರಿಗೆ ಅನುಕೂಲವಾಗುತ್ತದೆ ಮತ್ತು ಆ ಮೂಲಕ ಆ ಭಾಗದ ಜನರಿಗೂ ಅನುಕೂಲವಾಗುತ್ತದೆ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು. ಈ ವರ್ಷ ಸುಮಾರು ಒಂದು ವಾರದಿಂದ ಮಳೆಯಾಗಿ ಕೋಡಿ ಮೇಲೆ ಐದು ಅಡಿ ನೀರು ಹರಿದು ಎಲ್ಲ ನೀರು ವ್ಯರ್ಥವಾಗಿದೆ ಆದುದರಿಂದ ಸರ್ಕಾರದವರು ಈಗಲಾದರೂ ಗಾಯತ್ರಿ ಜಲಾಶಯದ ಕೋಡಿಗೆ ಕ್ರೆಸ್ಟ್ ಗೇಟುಗಳನ್ನು ಹಾಕಿಸಿಕೊಡುವುದಕ್ಕೆ ಅನುಕೂಲ ಮಾಡಿ ಐದಾರು ಸಾವಿರ ಎಕರೆ ಜಮೀನು ನೀರಾವರಿ ಸಾಗುವಳಿಗೆ ಬರುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸಿರಾ ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಲ್ಲಿ ಹೆಚ್ಚು ನೀರಾವರಿ ಕಾಮಗಾರಿ ಗಳನ್ನು ಮಾಡುವುದಕ್ಕೆ ಅವಕಾಶವಿಲ್ಲದೆ ಇದ್ದರೂ, ಬೇರೆ ಕಡೆಯಿಂದ ನೀರನ್ನು ತರುವುದಕ್ಕೆ ಅಥವಾ ನೀರಾವರಿಗೆ ಅನುಕೂಲವಾಗುವಂಥ ದೊಡ್ಡ ದೊಡ್ಡ ತೊರೆಗಳು ನೀರನ್ನು ಒದಗಿಸಿ ಕೊಡುವ ಪರಿಸ್ಥಿತಿ ಇಲ್ಲದೇ ಇಧ್ದರೂ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಐದಾರು ಸಾವಿರ ನೀರಾವರಿ ಬಾವಿಗಳಿದ್ದು, ನೀರಾವರಿ ಬಾವಿಗಳಿಂದ ವ್ಯವಸಾಯ ಮಾಡಿಕೊಂಡು ಎಂಥ ಕ್ಷಾಮ ಬಂದರೂ ಅರ್ಧ ಎಕರೆ, ಒಂದು ಎಕರೆ ಪ್ರದೇಶದಲ್ಲಿ ಬಾವಿಯ ಆಸರೆಯಿಂದ ಸಾಗುವಳಿ ಮಾಡಿ ಜೀವನ ಮಾಡ ತಕ್ಕ ಪರಿಸ್ಥಿತಿ ಇದೆ. ಜಮೀನುಗಳಲ್ಲಿ ಬದು ಹಾಕತಕ್ಕ ಕಾರ್ಯವನ್ನು ಏರ್ಪಾಡು ಮಾಡಿ, ಜಮೀನ್ದಾರರು ಅದಕ್ಕೆ ಒಪ್ಪಲಿ ಅಥವಾ ಒಪ್ಪದೆ ಇರಲಿ ಪ್ರತಿಯೊಂದು ಜಮೀನಿನಲ್ಲಿಯೂ ಕೂಡ ಬದು ಗಳನ್ನು ಹಾಕಿಸಲೇಬೇಕು ಎನ್ನುವ ಕಾನೂನು ಮಾಡಿ, ಅದಕ್ಕಾಗಿ ಖರ್ಚಾಗುವ ಹಣವನ್ನು ಸಾಲ

(ಶ್ರೀ ಬಿ. ಎನ್. ರಾಮೇಗೌಡ)

ವಾಗಿ ಪರಿಗಣಿಸಿ ಸಂಬಂಧಪಟ್ಟವರಿಂದ ವಸೂಲು ಮಾಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಸಿರಾ, ಪಾವಗಡ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಭೂಮಿಯಲ್ಲಿ ಸಾಕಾದಷ್ಟು ನೀರಿದೆ. ಆ ನೀರನ್ನು ಮೇಲೆ ತರತಕ್ಕ ಏರ್ಪಾಡನ್ನು ಸರ್ಕಾರ ಮಾಡಬೇಕು. ಇದಕ್ಕೆ ಸಾಯಿಲ್ ಕನ್‌ಸರ್ವೇಷನ್ ಸಂಬಂಧದಲ್ಲಿ ಯಾವರೀತಿ ರೈತನು ಒಪ್ಪಲಿ ಒಪ್ಪದೆ ಇರಲಿ ಬದುಗಳನ್ನು ಹಾಕಿ, ಅದನ್ನು ಸಾಲವಾಗಿ ಪರಿಗಣಿಸಿ ವಸೂಲು ಮಾಡುತ್ತಾರೆಯೋ ಅದೇ ರೀತಿಯಲ್ಲಿ ನಾನು ಹೇಳಿದ ಮೂರು ತಾಲ್ಲೂಕು ಗಳಲ್ಲಿ ಬೋರ್‌ವೆಲ್ ತೆಗೆಯುವ ವ್ಯವಸ್ಥೆಯನ್ನು ಮಾಡಿ, ಅದಕ್ಕೆ ಬೇಕಾದ 20–25 ಬೋರ್‌ವೆಲ್ ಯಂತ್ರಗಳನ್ನು ಒದಗಿಸಿಕೊಟ್ಟು ಹತ್ತು ವರ್ಷ ಕಾಲ ಬಾವಿಗಳನ್ನು ತೆಗೆದು ನೀರನು ಒದಗಿಸುವ ವ್ಯವಸ್ಥೆಯನ್ನು ಮಾಡಿದರೆ ಪ್ರತಿಯೊಂದು ಬಾವಿಯ ಆಸರೆಯಿಂದ ಮೂರು ಎಕರೆ ತರಿ ಜಮೀನು ಸಾಗುವಳಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಸುಮಾರು ಆರು ಸಾವಿರ ಬಾವಿಗಳನ್ನು ಮಾಡಿದರೆ ಅದರಿಂದ 20 ಸಾವಿರ ಎಕರೆ ಭೂಮಿಯಲ್ಲಿ ಸಾಗುವಳಿ ಮಾಡುವುದಕ್ಕೆ ಅವಕಾಶವಾಗು ತ್ತದೆ. ಆಗ ಇಷ್ಟು ಕ್ಷಾಮ ಪರಿಸ್ಥಿತಿಯನ್ನು ಎದುರಿಸಬೇಕಾದ ಸಂದರ್ಭವಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಈ ಬಗ್ಗೆ ಸರ್ಕಾರದಲ್ಲಿ ಮನವಿ ಮಾಡಿಕೊಂಡಿದ್ದೆ, ಮತ್ತು ಕೇಂದ್ರ ಸರ್ಕಾರದ ಪ್ರತಿನಿಧಿಗಳು ಅಭಾವ ಪರಿಸ್ಥಿತಿಯನ್ನು ಪರಿಶೀಲನೆ ಮಾಡುವುದಕ್ಕಾಗಿ ಪ್ರವಾಸ ಬಂದಾಗ ಅವರಲ್ಲಿ ಕೂಡ ಮನವಿ ಮಾಡಿದೆ. ಸರ್ಕಾರದವರು ಈಗಲಾದರೂ ಎಲ್ಲೆಲ್ಲಿ ನೀರಾವರಿ ಬಾವಿಗಳಿಂದ ವ್ಯವಸಾಯ ಮಾಡತಕ್ಕ ಸಾಧ್ಯತೆಯಿದೆಯೋ ಅಂಥ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿ, ಅದಕ್ಕೆ ಖರ್ಚಾಗುವ ಹಣವನ್ನು ಸಾಲವಾಗಿ ಪರಿಗಣಿಸಿ ರೈತರಿಂದ ವಸೂಲು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಕಮ್ಯೂನಿಟಿ ವೆಲ್ಸ್ ಸಹ ಮಾಡುವುದಕ್ಕೆ ಅವಕಾಶವಿದೆ. ದೇಶಾದ್ಯಂತ ಕಮ್ಯೂನಿಟಿ ವೆಲ್ಸ್ ಮಾಡಿ, ನಾಲ್ಕಾರು ಜನ ರೈತರು ಸೇರಿಕೊಂಡು ಒಂದೊಂದು ಭಾವಿಯ ಆಸರೆಯಲ್ಲಿ 20–30 ಎಕರೆ ಸಾಗುವಳಿ ಮಾಡುವುದಕ್ಕೆ ಇರುವ ಅವಕಾಶವನ್ನು ಕೂಡ ಸರ್ಕಾರದವರು ಉಪಯೋಗಿಸಿ ಕೊಳ್ಳಬೇಕು. ಅಭಾವ ಪೀಡಿತ ಪ್ರದೇಶಗಳಲ್ಲಿ ಈ ರೀತಿಯ ಕಮ್ಯೂನಿಟಿ ವೆಲ್ಸ್ ತೆಗೆದು ಅವುಗಳ ಮುಖಾಂತರ ನೀರನ್ನು ಹಾಯಿಸಿ ರೈತರಿಗೆ ಅನುಕೂಲ ಮಾಡುವುದಕ್ಕಾಗಿ ಕ್ಷಾಮ ಪರಿಹಾರಕ್ಕಾಗಿ ಕೊಡತಕ್ಕ ಹಣದಲ್ಲಿ ಇವುಗಳಿಗೆ ಖರ್ಚು ಮಾಡಿ, ಬಾವಿಗಳಲ್ಲಿ ನೀರು ಚೆನ್ನಾಗಿ ಕಂಡುಬಂದು ಅದರಿಂದ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ ಎನ್ನುವ ಪರಿಸ್ಥಿತಿ ಇದ್ದರೆ ಮುಂದೆ ಅದರ ಅನುಕೂಲವನ್ನು ಪಡೆಯತಕ್ಕ ರೈತರಿಂದ ಖರ್ಚಾಗಿರತಕ್ಕ ಹಣವನ್ನು ಸಾಲವೆಂದು ಪರಿಗಣಿಸಿ ವಸೂಲು ಮಾಡು ವುದಕ್ಕೆ ಅವಕಾಶವಿರುತ್ತದೆ. ಕಮ್ಯೂನಿಟಿ ವೆಲ್ಸ್ ಏರ್ಪಾಡು ಮಾಡತಕ್ಕುದು ಬಹಳ ಮುಖ್ಯ ವಾದುದು.

ಎಲ್ಲೆಲ್ಲಿ ಬಾವಿಗಳು ಜಾಸ್ತಿ ಇವೆಯೋ ಅಂಥ ಕಡೆಗಳಲ್ಲಿ ಬಾವಿಗಳನ್ನು ಆಳಪಡಿಸತಕ್ಕ ಕೆಲಸಕ್ಕೆ ಸಾಕಷ್ಟು ಹಣ ಈಗ ಸಿಕ್ಕುತ್ತಿಲ್ಲ. ಒಂದೊಂದು ತಾಲ್ಲೂಕಿಗೆ 20–30 ಸಾವಿರ ರೂಪಾಯಿಗಳನ್ನು ಇದಕ್ಕಾಗಿ ಒದಗಿಸಿಕೊಟ್ಟರೆ ಯಾವ ರೀತಿಯಲ್ಲಿಯೂ ಬಾವಿಗಳನ್ನು ಆಳಪಡಿಸತಕ್ಕ ಕೆಲಸಕ್ಕೆ ಈ ಹಣ ಸಾಕಾಗುವುದಿಲ್ಲ. ಎಲ್ಲಿ ಬಾವಿಗಳಿಂದ ನೀರನ್ನು ಉಪಯೋಗಿಸಬೇಕಾದ ಪರಿಸ್ಥಿತಿ, ಎಲ್ಲಿ ಬಾವಿಗಳನ್ನು ಆಳಪಡಿಸಬೇಕಾದ ಅವಶ್ಯಕತೆ ಇದೆ ಅಲ್ಲಿಗೆ ಹೆಚ್ಚು ಹಣ ಒದಗಿಸಬೇಕೆಂದು ಪ್ರಾರ್ಥಿಸು ತ್ತೇನೆ. ಕೆಲವು ಕಡೆ ಹುಲ್ಲಿನ ಅಭಾವವಿದೆ, ಅಲ್ಲಿಗೆ ಪುಕ್ಕಟೆಯಾಗಿ ಹುಲ್ಲನ್ನು ತರಿಸಿಕೊಡುತ್ತಿದ್ದಾರೆ, ಅದು ಒಳ್ಳೆಯದು. ಕೆಲವು ವೇಳೆ ಯಾರಾದರೂ ಮುಂದೆ ಬಂದು ಅಭಾವವಿರುವ ಕಡೆಗೆ ಹುಲ್ಲನ್ನು ತರುವುದಾಗಿ ಹೇಳಿದರೆ ಆಗ ಸರಕಾರದ ಬಳಿ ಇರುವ ವಾಹನಗಳನ್ನು ಪುಕ್ಕಟ್ಟೆಯಾಗಿ ಕೊಟ್ಟು ಹುಲ್ಲನ್ನು ಸಾಗಿಸಲು ಅವಕಾಶಮಾಡಿಕೊಡಬೇಕಾದ್ದು ಬಹಳ ಮುಖ್ಯವಾದುದು, ತಾತ್ಕಾಲಿಕ ಪರಿಹಾರ ಒದಗಿಸಲು ಹೆಚ್ಚು ಗಮನ ಕೊಡದೆ ಖಾಯಂ ಪರಿಹಾರ ನೀಡಲು ಹೆಚ್ಚು ಗಮನಕೊಟ್ಟರೆ ಅನುಕೂಲವಾಗುವುದು. ಈಗ ಪ್ರಾರಂಭಿಸಿರುವ ತಾತ್ಕಾಲಿಕ ಪರಿಹಾರ ಕಾಂಗಾರಿಗಳನ್ನು ಇನ್ನೂ ಕೆಲವು ದಿವಸ ಮುಂದುವರಿಸಿ, ತೀವ್ರ ಅಭಾವವಿರುವ ಕಡೆಗಳಲ್ಲಿ ತಾತ್ಕಾಲಿಕವಾಗಿ ಕಂದಾಯದ ವಸೂಲಿಯನ್ನು ನಿಲ್ಲಿಸುವುದಕ್ಕೆ ಬದಲಾಗಿ ಅದನ್ನು ಸಂಪೂರ್ಣವಾಗಿ ರದ್ದುಮಾಡಬೇಕು ಎಂದು ಪ್ರಾರ್ಥಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿ ಸುತ್ತೇನೆ.

† ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ಬರಗಾಲ ಪರಿಸ್ಥಿತಿಯನ್ನು ನಾವು ಪ್ರತಿ ವರ್ಷ ಚರ್ಚೆ ಮಾಡುತ್ತೇವೆ, ಅನೇಕ ಸೂಚನೆಗಳನ್ನು ರಾಜ್ಯ ಸರಕಾರಕ್ಕೆ ಕೊಡುತ್ತೇವೆ. ಇದು ಮನುಷ್ಯನಿಗೆ ರೋಗ ಬಂದಾಗ ಪರಿಹಾರದ ಕಡೆಗೆ ಗಮನ ಕೊಡುವ

ರೀತಿಯಲ್ಲಿವೆ. ಕೆಲವು ಸದಸ್ಯರು ಹೇಳಿದಂತೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಕನಿಷ್ಟ ಬರಗಾಲವಾದರೂ ದೂರವಾಗಬಹುದು ಎಂಬ ಆಸೆ ಜನರಿಗಿತ್ತು. ಸ್ವಾತಂತ್ರ್ಯ ಬಂದು 23 ವರ್ಷಗಳಾದರೂ ಕೂಡ ಪ್ರತಿ ವರ್ಷವೂ ಬರಗಾಲ ಬರುತ್ತಲೇ ಇದೆ, ಜನರು ಕ್ಷಾಮಕ್ಕೆ ತುತ್ತಾಗುತ್ತಿದ್ದಾರೆ. ಬರಗಾಲದಿಂದ ಆಗುವ ತೊಂದರೆಯೆಷ್ಟು ಎಂಬುದನ್ನು ಹೇಳಬೇಕಾಗಿಲ್ಲ. ಬರಗಾಲ ಪರಿಹಾರ ಬಹಳ ಪವಿತ್ರವಾದ ಕಾರ್ಯ, ಅದನ್ನು ಪರಿಹಾರಮಾಡಲು ಬಹಳ ತೀವ್ರವಾಗಿ ಕ್ರಮ ಕೈಕೊಳ್ಳಬೇಕು ಎಂದು ಈಗ ಕೆಲವು ಮಾನ್ಯ ಸದಸ್ಯರು ಹೇಳಿದರು. ರಾಜ್ಯ ಸರಕಾರ ತನ್ನ ಬಜೆಟ್ ತಯಾರು ಮಾಡುವಾಗ ಇದರ ಬಗ್ಗೆ ಯೋಚನೆಮಾಡಬೇಕು. ಕೆಲವುವೇಳೆ ಸಪ್ಲಿಮೆಂಟರಿ ಬಜೆಟ್ ತಯಾರಿಸುವುದುಂಟು. ಮೊದಲೇ ಯೋಚಿಸಿ ಇದಕ್ಕಾಗಿ ಬಜೆಟ್ಟಿನಲ್ಲಿ ಅವಕಾಶಮಾಡದೆ ಬರಗಾಲ ಬಂದಮೇಲೆ ಸಪ್ಲಿಮೆಂಟರಿ ಬಜೆಟ್ ತಯಾರಿಸುವ ವಾಡಿಕೆ ಇದೆ. ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಕಾರ್ಯಗಳು ನಡೆಯುತ್ತಲಿವೆ. ಮೂರನೆ ಯೋಜನೆ ಮುಗಿದು ನಾಲ್ಕನೆಯ ಯೋಜನೆಯ ಎರಡನೆಯ ವರ್ಷದಲ್ಲಿದ್ದೇವೆ. ಆದರೂ ಕೂಡ ಇನ್ನೂ ಬರಗಾಲ ಬರಲು ಅವಕಾಶ ಇದ್ದೇ ಇದೆ ಎಂದು ಹೇಳಲು ನಾಚಿಗೆಯಾಗುವುದಿಲ್ಲವೇ ? ಇದನ್ನು ಸರಕಾರ ಯೋಚಿಸಬೇಕು. ತುಮಕೂರು ಜಿಲ್ಲೆಯ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಹೇಳಿದ್ದಾರೆ. ಪ್ರತಿ ವರ್ಷ ಸದಸ್ಯರು ಆ ಬಗ್ಗೆ ಸೂಚನೆ ಕೊಡುತ್ತಿದ್ದಾರೆ, ಅಲ್ಲಿ ಸರಾಸರಿ ಮಳೆ ಎಷ್ಟು ಬರುವುದು ಎಂಬುದಕ್ಕೆ ರಿಕಾರ್ಡಿದೆ, ಬೆಳೆಯೆಷ್ಟಾಗುತ್ತದೆ ಎಂಬುದಕ್ಕೆ ಲೆಕ್ಕವಿದೆ. ಆದರೂ ಕೂಡ ಮತ್ತೆ ಈಗ ಸಲಹೆ ನೀಡಬೇಕಾಗಿದೆ. ಇವಕ್ಕೆ ಅವಕಾಶ ಕೊಡದಂತೆ ಇಂಥ ಕೆಲವು ಜಿಲ್ಲೆಗಳಲ್ಲಿ ಅಥವ ತಾಲ್ಲೂಕುಗಳಲ್ಲಿ ಮಳೆ ಎಲ್ಲಿ ಸರಿಯಾಗಿ ಬರುವುದಿಲ್ಲ ಎಂದು ಗೊತ್ತಾಗಿದೆ ಅಂಥ ಕಡೆಗಳಲ್ಲಿ ಕೆಲವು ಕೈಗಾರಿಕೆಗಳನ್ನು ತೆರೆದು ಜನತೆಗೆ ಅನುಕೂಲ ಕಲ್ಪಿಸಬೇಕು, ಆಕಾಶ ತೋರಿಸುತ್ತಾ ಕೂಡಬಾರದು. ಕಂದಾಯ ಮಾಫಿ ಮಾಡುತ್ತೇವೆ, ಬಾವಿ ತಗೆಸುತ್ತೇವೆ ಎಂದು ಹೇಳಿದರೆ ಸಾಲದು. ಹಾಗೆ ಮಾಡಿ ಜನರಿಗೆ ಕನಿಷ್ಠ ಉಪಜೀವನಕ್ಕೆ ಅವಕಾಶ ಮಾಡಿಕೊಡಬೇಕು. ಕೆಲವು ಕಡೆ ರಾಮೆಟೀರಿಯಲ್ಸ್ ದೊರೆಯುವುದಿಲ್ಲ. ಎಂದು ನೆಪ ಹೇಳಿದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಬರಗಾಲಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುವಾಗ ಸಬ್ಸಿಡಿ ಕೊಡದೆ ಇರುವಾಗ ವಾಸ್ತವಿಕವಾಗಿ ಬರಗಾಲ ದೂರ ಮಾಡಬೇಕೆಂದಿದ್ದರೆ ಬರಗಾಲಕ್ಕೆ ತುತ್ತಾಗುವ ಕೆಲವಾರು ಜಿಲ್ಲೆಗಳಲ್ಲಿ ಅಥವ ತಾಲ್ಲೂಕುಗಳಲ್ಲಿಯಾದರೂ ಆರಿಸಿ ಅಲ್ಲಿ ಕೆಲವು ಮುಖ್ಯವಾದ ಕೈಗಾರಿಕೆಗಳನ್ನು ಸ್ಥಾಪಿಸಿ ಜನರಿಗೆ ಕೆಲಸಕಾರ್ಯ ಒದಗಿಸಬೇಕು. ಇದನ್ನು ಯೋಜನೆಯಲ್ಲಿ ಸೇರಿಸಿ ನಾನ್-ಪ್ಲಾನ್ಡ್ ಎಂದು ಬೇಕಾದರೂ ಮಾಡಿ ರಾಜ್ಯ ಸರಕಾರ 10-15 ವರ್ಷಗಳ ಖಾಯಮಾದ ಕಾರ್ಯಕ್ರಮ ಕೈಗೊಳ್ಳಬಹುದು. ಆದರೆ ಹಾಗೆ ಮಾಡುವುದಿಲ್ಲ. 1964 65 ರಲ್ಲಿ ಒಬ್ಬ ಕಂಟ್ರಾಕ್ಟರಿಗೆ ಎಗನೂರು ಮತ್ತು ಮಿಡಗಲ್ ದಿನ್ನೆಯ ಎರಡು ಕೆರೆಗಳನ್ನು ರಿಪೇರಿಮಾಡಲು ಅರ್ಧ ಲಕ್ಷ ರೂಪಾಯಿ ಕೊಟ್ಟು ಕೆಲಸ ಮಾಡಿಸಿದರು. ಆದರೆ ಕಟ್ಟಿದ ಮೂರು ತಿಂಗಳಲ್ಲೇ ಆ ಕೆರೆಗಳು ಒಡೆದುಹೋಗಿವೆ. ರಾಜಕೀಯಕ್ಕಾಗಿ ಆ ಕಂಟ್ರಾಕ್ಟರಿಗೆ ಕೆಲಸ ಕೊಟ್ಟರು. ಇದಕ್ಕಿಂತ ಅನ್ಯಾಯ ಬೇರೆ ಇಲ್ಲ. ಇದಕ್ಕಿಂತ ಹೆಚ್ಚು ಪಾಪ ಮಾಡುವುದಕ್ಕೆ ಸಾಧ್ಯವೇ ? ಇದನ್ನು ವಿಚಾರಮಾಡಬೇಕು. ಹೀಗೆ ಇನ್ನೂ ಅನೇಕ ವಿಷಯಗಳನ್ನು ಸಭೆಯಲ್ಲಿ ಸರಕಾರದ ಗಮನಕ್ಕೆ ತಂದರೂ ಕೂಡ ಪರಿಶೀಲನೆ ಮಾಡಿಲ್ಲ. ಈಗ ಮಾನ್ಯ ಮಂತ್ರಿಗಳು ಈ ಸಭೆ ಬರಗಾಲದ ಪರಿಸ್ಥಿತಿಯನ್ನು ಗಮನಿಸಬೇಕು ಎಂದು ಸೂಚಿಸಿದ್ದಾರೆ. ಹಾಗೆ ಮಾಡುವಾಗ ಪರಿಸ್ಥಿತಿ ಹೀಗಿದೆ, ಇಂಥ ಕಡೆ ಇಂಥ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದಿದ್ದೇವೆ, ಇದರ ಬಗ್ಗೆ ಚರ್ಚೆ ಮಾಡಿ ಎಂದು ಹೇಳಿದ್ದರೆ ಒಪ್ಪಬಹುದಾಗಿತ್ತು. ಈ ಸಭೆಯಲ್ಲಿ ನಾವು ಕೊಡುವ ಸಲಹೆಗಳು ಪ್ರೊಸೀಡಿಂಗ್ಸ್‌ನಲ್ಲಿ ಇರುತ್ತವೆಯೇ ಹೊರತು ಕಾರ್ಯರೂಪಕ್ಕೆ ಬರುವುದಿಲ್ಲ. ಈಗ ಹೈದರಬಾದು ಕರ್ನಾಟಕದಲ್ಲಿ ಅನೇಕ ಹಳ್ಳಿಗಳಿವೆ, ಮಳೆಗಾಲದಲ್ಲಿ ಅವುಗಳಲ್ಲ ಬೇಕಾದಷ್ಟು ನೀರು ಹರಿಯುವುದು, ಆ ನೀರನ್ನು ಕೆರೆಗಳಿಗೆ ತಿರುಗಿಸಿ ಅಥವ ಸಣ್ಣ ಅಣೆಗಳನ್ನು ಕಟ್ಟಿ ಶೇಖರಿಸಿದರೆ ಅದರಿಂದ 50ರಿಂದ 200 ಎಕರೆಗಳ ಸಾಗುವಳಿ ಮಾಡಬಹುದು. ಆದರೆ ಹಾಗೆ ಮಾಡದಿರುವುದರಿಂದ ಆ ನೀರು ಸಮುದ್ರಕ್ಕೆ ಹೋಗಿ ಸೇರುತ್ತಿದೆ. ಒಂದು ಸಲ ಹೋಗಿ ನೋಡಿದರೆ ಇದು ಗೊತ್ತಾಗುವುದು. ಈ ವಿಚಾರವನ್ನು ಅನೇಕ ಸಲ ಈ ಸಭೆಯಲ್ಲಿ ಹೇಳಿದ್ದಾಯಿತ್ತು. ಆದರೆ ಆ ಕಡೆ ಗಮನಕೊಟ್ಟಿಲ್ಲ. ಬರಗಾಲವನ್ನು ಹೋಗಲಾಡಿಸಲು ಏನು ಬೇಕಾದರೂ ಮಾಡಬಹುದು, ನಾವು ಬೇಡವೆನ್ನುವುದಿಲ್ಲ.

ರಾಯಚೂರಿನ ಒಂದು ಉದಾಹರಣೆ ಹೇಳುವುದಾದರೆ ಆ ಒಂದು ತಾಲ್ಲೂಕಿನಲ್ಲಿ ಸಾಮಾನ್ಯವಾಗಿ 70 ಬಾವಿಗಳನ್ನು ತೆಗೆಸಲಾಗಿದೆ, ಇಂತಹ ಒಂದು ಕಾರ್ಯಕ್ರಮ ಹಾಕಿಕೊಂಡರೆ ಯಾವ ದೃಷ್ಟಿಯಿಂದಲೂ ಬರಗಾಲ ದೂರವಾಗುವುದಿಲ್ಲ. ಇದರಲ್ಲಿ ತಮಗೆ ಆಸಕ್ತಿ ಇಲ್ಲ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲ ಕೊಡುತ್ತೇವೆ ಎಂದು ಹೇಳುತ್ತೀರಿ. ಈ ಸಾಲ ಯಾರಿಗೆ ಕೊಡುವುದು ? 5 ಅಥವಾ 10 ಎಕರೆ ಇರತಕ್ಕವರಿಗೆ ಅಲ್ಲ. ಒಂದು ಸಾವಿರ ರೂಪಾಯಿ ಒಂದು

(ಶ್ರೀ ಎಂ. ನಾಗಪ್ಪ)

ಎಕರೆಗೆ ಅಸೆಸ್ ಮಾಡಬೇಕೆಂದು ಲ್ಯಾಂಡ್ ರೆವಿನ್ಯೂ ಸರ್ಕ್ಯುಲರ್ ಇದೆ. ಮಾರ್ಕೆಟ್ ರೇಟು ಏನಾದರೂ ಇರಲಿ ತಹಸೀಲ್ದಾರರು ಅಸೆಸ್ ಮಾಡುವುದು 500 ರೂಪಾಯಿ. ಅಂದಮೇಲೆ ತಾವು 20 ಅಥವಾ 25 ಎಕರೆ ಜಮೀನು ಯಾರಿಗೆ ಇರುತ್ತದೆ ಅಂಥವರಿಗೆ ಸಾಲ ಕೊಡುತ್ತೀರಿ. 5 ಎಕರೆ ಗಿಂತ ಕಡಿಮೆ ಇರತಕ್ಕ ಮನುಷ್ಯನಿಗೆ ಫ್ಯಾಮಿನ್ ರಿಲೀಫ್ ವರ್ಕ್ಸ್‌ನಲ್ಲಿ ಹಣ ಕೊಟ್ಟರೆ ವಾಸ್ತವಿಕ ವಾಗಿ ಅವನು ಅದನ್ನು ಉಪಯೋಗಿಸಿಕೊಳ್ಳಬಲ್ಲ ಮತ್ತು ಕನಿಷ್ಠ ಪ್ರತಿಯೊಂದು ತಾಲ್ಲೂಕಿನಲ್ಲೂ ನೂರು ನೂರು ಬಾವಿಗಳನ್ನು ತೆಗೆಸಲು ಒಂದು ಯೋಜನೆ ಪ್ರಾರಂಭ ಮಾಡಿದರೆ ಹೆಚ್ಚು ಅನುಕೂಲ ವಾದೀತು. ಅಂತಹ ಆಲೋಚನೆಯೇ ಇಲ್ಲ. ತುಂಗಭದ್ರಾಪ್ರಾಜೆಕ್ಟ್ ಬಂದಮೇಲೆ ರಾಯಚೂರು ತಾಲ್ಲೂಕಿನ ಅರ್ಧಭಾಗ, ಕೊಪ್ಪಳ, ಕುಷ್ಟಗಿ, ದೇವದುರ್ಗ ಇವೆಲ್ಲಾ ಅಂಡರ್‌ಗ್ರೌಂಡ್ ವಾಟರ್ ಸರ್ವೆ ಮಾಡಿಸಿರಿ ಎಂದು ಪ್ರತಿಸಲ ಬೇಡಿಕೆ ಸಲ್ಲಿಸಿದರೂ ಕೂಡ ಈಗ ಕೊಪ್ಪಳ ತಾಲ್ಲೂಕಿನಲ್ಲಿ ಮಾತ್ರ ಸರ್ವೆ ಮಾಡಿಸಿದ್ದಾರೆ. ಇನ್ನು ಉಳಿದ ತಾಲ್ಲೂಕುಗಳಲ್ಲಿ ಸರ್ವೆ ಆಗಬೇಕಾದರೆ 25 ವರ್ಷ ಆಗಬೇಕು. ಇದರ ಬಗ್ಗೆ ಆಸಕ್ತಿ ಇಲ್ಲ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಸಮಗ್ರವಾದ ಒಂದು ಮಾಸ್ಟರ್‌ಪ್ಲಾನ್ ತಯಾರು ಮಾಡಬೇಕು. ಅತಿವೃಷ್ಟಿ, ಅನಾವೃಷ್ಟಿ ಆದಾಗ ಬಾವಿ ಗಳನ್ನು ತೆಗೆಸಿ ಅಂತ ಅನ್ನುವುದು ಸರಿಯಲ್ಲ. ಶಾಶ್ವತವಾದ ಪರಿಹಾರ ಸಿಕ್ಕತಕ್ಕ ಕೆಲಸಕಾರ್ಯ ಗಳನ್ನು ಮಾಡಿದ್ದೇ ಆದರೆ ಈ ಬರಗಾಲವನ್ನು ತಡೆಯಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲವೇ ಹೋದರೆ ಇದನ್ನು ಪ್ರತಿವರ್ಷ ಚರ್ಚೆ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ರಾಜ್ಯದ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಭಾಗದಲ್ಲಿ ಅತಿವೃಷ್ಟಿಯಿಂದ ಬರತಕ್ಕ ಬರಗಾಲ ಯಾವುದು, ಅನಾವೃಷ್ಟಿಯಿಂದ ಬರತಕ್ಕ ಬರಗಾಲ ಯಾವುದು ಅದಕ್ಕೆ ಬೇಕಾದಂತಹ ಪರಹಾರ ಯಾವುದು ಅಂತ ಅನ್ನುವುದನ್ನು ಸರ್ಕಾರದವರು ಯೋಚನೆ ಮಾಡಿ ಅದಕ್ಕೆ ಸಮಗ್ರವಾದ ಒಂದು ಯೋಜನೆ ಯನ್ನು ತಯಾರು ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ರಸ್ತೆಗಳ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಫಾಲೋ ಅಪ್ ವರ್ಕ್ ಇಲ್ಲದೆ ಈ ರೀತಿ ರಸ್ತೆಗಳನ್ನು ಮಾಡುತ್ತಾ ಹೋದರೆ ಅದರಿಂದ ಹಣ ವೃಥಾ ವ್ಯಾಯವಾಗುವುದಲ್ಲದೆ ಯಾವ ಲಾಭವೂ ಆಗುವುದಿಲ್ಲ. ಆದ್ದರಿಂದ ಫಾಲೋ ಅಪ್ ವರ್ಕ್ ಮಾಡಬೇಕೆಂದು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ಗಾಗಲೀ, ಪಿ.ಡಬ್ಲ್ಯು.ಡಿ. ಗಾಗಲೀ, ಸರ್ಕಾರದವರು ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರಸ್ತೆಗಳಿಗಾಗಿ ಬರಗಾಲದಲ್ಲಿ ಕೊಟ್ಟ ಜಮೀನಿನ ಮೇಲೆ ಕೂಡ ಲ್ಯಾಂಡ್ ರೆವಿನ್ಯೂ ಹಾಕುತ್ತಾ ಇದ್ದಾರೆ. ಇನ್ನೂವರೆಗೂ ಅದನ್ನು ರದ್ದು ಮಾಡಿಲ್ಲ, ರದ್ದು ಮಾಡುವುದಕ್ಕೆ ಆದೇಶ ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರದವರು ತೀವ್ರ ವಾಗಿ ಯೋಚನೆ ಮಾಡಿ ಸೂಕ್ತವಾದ ಆದೇಶ ಕೊಡಬೇಕೆಂದು ಅಧ್ಯಕ್ಷರ ಮೂಲಕ ಕೇಳಿಕೊಳ್ಳು ತ್ತೇನೆ. ಇನ್ನು ಹೆಚ್ಚು ಸಮಯ ತೆಗೆದುಕೊಳ್ಳದೆ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಚುರ್ಚಿಹಾಳ್ ಮಠ್ (ಮುಂಡರಗಿ).—ಸನ್ಮಾನ್ಯ ಅಧ್ಯಕ್ಷರೇ, ಈ ಬರಗಾಲದ ವಿಷಯವಾಗಿ ಇದುವರೆಗೂ ಅನೇಕರು ಮಾತನಾಡಿದ್ದಾರೆ. ಅನೇಕ ವರ್ಷಗಳಿಂದ ಬರಗಾಲ ಪರಿಹಾರ ಯೋಜನೆ ಅಂತ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಕೈಕೊಂಡರೂ ಕೂಡ ಶಾಶ್ವತ ವಾದ ಬರಗಾಲ ನಿವಾರಣೆ ಇನ್ನೂ ಅನೇಕ ಕಡೆ ಆಗಿಲ್ಲ. ಇದಕ್ಕೆ ಒಂದು ಶಾಶ್ವತವಾದ ಯೋಜನೆ ಅಗತ್ಯ ಅನ್ನುವಂತಹ ಸೂಚನೆಯನ್ನು ಅನೇಕ ಮಾನ್ಯ ಸದಸ್ಯರು ಮಾಡಿದ್ದಾರೆ. ನಮ್ಮ ರಾಜ್ಯ ದಲ್ಲಿ ಸತತವಾಗಿ ಬರಗಾಲ ಬರತಕ್ಕ ಪ್ರದೇಶಗಳ ಬಗ್ಗೆ ಶಾಶ್ವತವಾದ ಯೋಜನೆಗಳನ್ನು ಕೈ ಕೊಳ್ಳುವಂತಹ ಕಾರ್ಯಕ್ರಮದ ಬಗ್ಗೆ ಒಂದು ಪಟ್ಟಿಯನ್ನು ಸರ್ಕಾರದವರು ಮಾಡಿದ್ದಾರೆ. ಅದರಲ್ಲಿ ಧಾರವಾಡ ಜಿಲ್ಲೆಯ ಮುಂಡರಗಿ, ಗದಗ್, ನರಗುಂದ ಮೊದಲಾದ ತಾಲ್ಲೂಕುಗಳನ್ನು ಸೇರಿಸದೇ ಇದ್ದದ್ದು ನಿಜವಾಗಿಯೂ ವಿಷಾದಕರ. ಏತಕ್ಕೆಂದರೆ ಮುಂಬೈ ರಾಜ್ಯದಲ್ಲಿ ಈ ತಾಲ್ಲೂಕುಗಳು ಇದ್ದಾಗ ಇವು ಸತತವಾಗಿ ಬರಗಾಲ ಪೀಡಿತ ಪ್ರದೇಶಗಳು ಅನ್ನುವಂತ ಅಂಶ ವನ್ನು ಅವರು ಕಾಣಿಸಿದ್ದರು. ಆದ್ದರಿಂದ ಮೊದಲು ಆ ತಾಲ್ಲೂಕುಗಳಿಗೆ ಪರಿಹಾರ ಯೋಜನೆ ಯನ್ನು ಮಾಡಿ ನಂತರ ಉಳಿದ ತಾಲ್ಲೂಕುಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ ಮುಂಬೈ ರಾಜ್ಯದಲ್ಲಿ ಆದದ್ದು ಉಂಟು. ಮುಂಡರಗಿ ತಾಲ್ಲೂಕು ಬರಗಾಲದ ಯಾವ ಪರಿಸ್ಥಿತಿಯಲ್ಲಿ ಇದೆ ಅನ್ನುವಂತಹದು ಸರ್ಕಾರದವರ ಈ ಒಂದು ರೆಕಾರ್ಡ್‌ನಿಂದ ಗೊತ್ತಾಗುತ್ತದೆ.

Statement showing the details of Scarcity under Famine in Mundargi Taluk from 1932 to 1969.

1933–34 Famine

| | |
|---|---|
| 1934–35 | Famine |
| 1936–41 | Information not available |
| 1941–42 | Continuously |

5–30P.M.

1969-70ರ ವರೆಗೆ ನೋಡಿದರೆ ಆ ಭಾಗದಲ್ಲಿ ಸ್ಕೇರ್‌ಸಿಟಿ ಎಷ್ಟಿದೆ ಎನ್ನುವುದು ಸರಕಾರದ ಒಂದು ರೆಕಾರ್ಡ್‌ನಿಂದ ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ. ಈ ರೀತಿ ಸತತವಾಗಿ ಸ್ಕೇರ್‌ಸಿಟಿ ಇದ್ದರೂ ಕೂಡ ಅಲ್ಲಿ ಕ್ಷಾಮ ಪರಿಹಾರದ ಯೋಜನೆಯನ್ನು ಕೈಗೊಂಡಿಲ್ಲ. ಸರಕಾರ ಮನಸ್ಸಿಟ್ಟು ಈಗಲಾದಲೂ ಆ ಭಾಗದಲ್ಲಿ ಕೆಲವು ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ನಮ್ಮ ಮಿತ್ರರಾದ ನಾಗಪ್ಪನವರು ಹೇಳಿದಂತೆ ಕೆಲವು ಕಡೆ ಮಳೆ ಇಲ್ಲದೆ ಇರುವುದು ಕೆಲವು ಕಡೆ ಹೆಚ್ಚು ಮಳೆ ಬೀಳುವುದು ಕೂಡ ಕಂಡುಬರುತ್ತದೆ. ನಮ್ಮಲ್ಲಿ ಬಹಳ ವಿಚಿತ್ರ ವಿಷಯವೇನೆಂದರೆ ಬಿತ್ತನೆ ಮಾಡಿದಾಗ ಮಳೆ ಬಾರದೆ, ಬಿತ್ತಿದ ಬೀಜ ಕೆಟ್ಟು ಹೋಗುವುದು, ಮತ್ತು ಕೆಲವು ಕಡೆ ಹೆಚ್ಚಾಗಿ ಮಳೆ ಬಂದು ಪೀಕು ಕೆಟ್ಟುಹೋಗುವುದು. ಈ ರೀತಿಯ ವಿಚಿತ್ರವಾದ ಬರಗಾಲ ನಮ್ಮ ತಾಲ್ಲೂಕಿನಲ್ಲಿ ಇದೆ. ಮಳೆ ಸಾಕಷ್ಟು ಆಗುತ್ತಿದೆ. ನಮ್ಮಲ್ಲಿಯೂ ಕೂಡ ಹರಿಯುವ ಹಳ್ಳಗಳು ಇವೆ. ಸರಕಾರ ಪರಿಹಾರಯೋಜನೆ ಎಂದು ನಮ್ಮಲ್ಲಿ ಕೆರೆಗಳನ್ನು ಮಾಡಿದರೆ ಸಾಕಷ್ಟು ನೀರಾವರಿಯಾಗಿ ಈ ಬರಗಾಲದ ಬಾಧೆ ಕಡಿಮೆ ಆದೀತು. ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಸರಕಾರ ನಮ್ಮ ಕಡೆ ಕೆರೆಗಳನ್ನು ತೆಗೆಸಬೇಕೆಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತಾ ಇದ್ದೇನೆ. ಕೆರೆಗಳನ್ನು ನಮ್ಮ ಸೂಚನೆ ಪ್ರಕಾರ ಪ್ಲಾನ್ ಮಾಡಿದ್ದಾರೆ. ಎಸ್ಟಿಮೇಟ್ ಮಾಡಿದ್ದಾರೆ. ಎಲ್ಲಾ ಆದರೂ ಕೂಡ ಈಗ ಸಧ್ಯ ಯಾವ ಕೆರೆಗಳೂ ಪ್ರಾರಂಭವಾಗುತ್ತಾ ಇಲ್ಲ, ಕೆಲಸ ನಡೆಯುತ್ತಾ ಇಲ್ಲ. ಒಂದೊಂದು ರೀತಿಯ ಕಾರಣ ಹೇಳಿಕೊಂಡು ಕೈಬಿಡುತ್ತಿದ್ದಾರೆ. ಒಂದು ಸಾರಿ ಫೀಜಿಬಲ್ ಆಗಿಲ್ಲ ಎಂದೂ, ಜಮೀನಿನ ಮಾಲೀಕರು ಕಬೂಲು ಇಲ್ಲ ಎಂದೂ ಮತ್ತೊಂದು ಕಡೆ ದುಡ್ಡಿನ ಅಭಾವ ಇದೆ ಎಂದೂ ಹೀಗೆ ಕಾರಣಗಳನ್ನು ಹೇಳುತ್ತಲೇ ಇರುತ್ತಾರೆ. ಅನೇಕ ಕಾರಣದಿಂದ ಕೆರೆಗಳು ನಮ್ಮಲ್ಲಿ ಆಗದೆ ಹೋಗಿದೆ. ನಮ್ಮಲ್ಲಿ ಬರಗಾಲ ಬರುವುದಿಲ್ಲ ಎನ್ನುವ ಮಾತನ್ನು ಸರಕಾರ ನಿರೀಕ್ಷಣೆ ಮಾಡಬಾರದೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ರೂರಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ನಮ್ಮ ಮತ್ತು ಗದಗ ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳಲ್ಲಿ ಬಹಳ ಅಭಾವ ಕಂಡುಬರುತ್ತಾ ಇದೆ. ಅಲ್ಲಿ ಮಳೆ ಆಗದೆ ಹೋದರೆ ಕೆರೆಗಳಿಗೆ ನೀರು ಬರುವುದಿಲ್ಲ. ಕೆರೆಗಳಿಗೆ ನೀರು ಬಾರದಿದ್ದರೆ ಜನರಿಗೆ ಕುಡಿಯುವುದಕ್ಕೆ ನೀರು ಸಿಕ್ಕುವುದಿಲ್ಲ. ನೀರು ತೆಗೆದುಕೊಂಡು ಹೋಗಿ ಮನೆಮನೆಗಳಿಗೂ ರೇಷನ್ ಕಾರ್ಡ್‌ಕೊಟ್ಟು ಕಾರ್ಡಿನ ಮುಖಾಂತರ ನೀರನ್ನು ಒದಗಿಸಿದ ಸಂದರ್ಭ ಅನೇಕವೇಳೆ ಬಂದಿದೆ. ಹಳ್ಳಿಗುಡಿ, ತಣಗಿನಹಾಳ್ ಮತ್ತು ಲಿಂಗದಾಳ್ ಈ ಹಳ್ಳಿಗಳಲ್ಲ ಮೇಲಿಂದಮೇಲೆ ಇಂತಹ ಪರಿಸ್ಥಿತಿ ಒದಗುತ್ತಾ ಇರುತ್ತದೆ. ಇಂತಹ ಕಡೆ ಬರಗಾಲ ಪ್ರದೇಶವೆಂದು ಸಾರಿ ಹತ್ತು ಪರ್ಸೆಂಟ್, ಪಂಚಾಯಿತಿಯವರು ತುಂಬಿದರೆ ಉಳಿದದ್ದನ್ನು ಸರಕಾರವಹಿಸಿ ರೂರಲ್‌ವಾಟರ್ ಸಪ್ಲೈ ಸ್ಕೀಂ ಅನ್ನು ಮಂಜೂರು ಮಾಡುವಂತಹ ಯೋಜನೆ ಏನು ಇದೆ ಅದಕ್ಕೆ ಸ್ವಲ್ಪ ಸವಲತ್ತುಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಈಗ ನಮ್ಮ ರಾಜ್ಯದಲ್ಲಿ ನೋಡಿದರೆ ರೈತರಿಗೆ ನೀರಾವರಿ ಕೆಲಸಗಳಿಗೆ ಮತ್ತು ಬಾವಿಗಳನ್ನು ತೆಗೆಸುವುದಕ್ಕಾಗಿ ಸರಕಾರದವರು ಅನೇಕ ರೀತಿಯಿಂದ ಸಾಲಗಳನ್ನು ಕೊಟ್ಟು ಪಂಪು ಸೆಟ್ಟುಗಳಿಗಾಗಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ, ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡು ರೈತರು ತಮ್ಮ ಜಮೀನನ್ನು ಅಭಿವೃದ್ಧಿ ಮಾಡಿಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಆದರೆ ನಮ್ಮ ತಾಲ್ಲೂಕಿನ ಪರಿಸ್ಥಿತಿ ಹೀಗಿದೆ. ನಮ್ಮ ತಾಲ್ಲೂಕಿನಲ್ಲಿ ಸಾವಿರಾರು ಬಾವಿಗಳು ಇವೆ. ಕನಿಷ್ಠ ತಾಗಾಯಿ ಮತ್ತು ಎನ್.ಇ.ಎಸ್. ಯೋಜನೆಗಳಲ್ಲಿ 30 ಲಕ್ಷ ರೂಪಾಯಿಗಳ ಸಾಲ ತೆಗೆದುಕೊಂಡು ಸಾವಿರಾರು ಬಾವಿಗಳನ್ನು ತೆಗೆಸಿದ್ದಾರೆ. ಆದರೆ ದುರ್ದೈವದಿಂದ ನಮ್ಮಲ್ಲಿ ನೀರಿನ ಪ್ರಮಾಣ ಬಹಳ ಕಡಿಮೆ ಇದೆ. 500 ಬಾವಿಗಳಲ್ಲಿ ನೀರು ಇಲ್ಲದೆ ನೀರಾವರಿ ಮಾಡಿಕೊಳ್ಳುವ ಸದವಕಾಶ ಅವರಿಗೆ ಬರಲಿಲ್ಲ. ಕೊಟ್ಟಂಥ ಐದು ಸಾವಿರ ರೂಪಾಯಿಗಳಲ್ಲಿ ಬಾವಿ ಆಳವಾಗಿ ತೆಗೆಸಬೇಕು ಎಂದರೆ ಸಾಧ್ಯವಿಲ್ಲ. ಬಾವಿಯಲ್ಲಿ ನೀರು ಇಲ್ಲ. 5 ಸಾವಿರ ರೂಪಾಯಿಗಳನ್ನು ಕೊಟ್ಟದ್ದನ್ನು ಹೇಗಾದರೂ ರೈತರು ವಾಪಸ್ ಕೊಡಲೇ ಬೇಕು. ಕುಡಿಯಲಿಕ್ಕೆ ಬಾವಿಯಲ್ಲಿ ನೀರು ಇಲ್ಲ. ನೀರು ಇಲ್ಲದೇ ಇದ್ದರೆ ನೀರಾವರಿ ಮಾಡಿಕೊಂಡು ಬೆಳೆ ಬರುವುದಕ್ಕೆ ಸಾಧ್ಯವಿಲ್ಲ.

(ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ್)

ಹೀಗಾಗಿ ನಮ್ಮಲ್ಲಿ ಕೊಡಬೇಕಾದ ಸಾಲದ ಬಾಕಿ ವಸೂಲು ಆಗದೆ ಬಾಕಿ ಹಾಗೆಯೇ ನಿಂತಿವೆ. ಈ ಭಾಗಗಳಿಗೆ ಯಾವ ಯೋಜನೆಯು ಮುಖಾಂತರವಾದರೂ ಸಾಕಷ್ಟು ಹಣವನ್ನು ಒದಗಿಸಿ ನೀರನ್ನು ಒದಗಿಸಿಕೊಟ್ಟರೆ ನಿಮಗೆ ಬರಬೇಕಾದ ಸಾಲದ ಹಣ ಬರಲಿಕ್ಕೆ ಮಾರ್ಗ ಆದೀತು. ಇಲ್ಲದೆ ಹೋದರೆ ರೈತನಿಂದ ಸಾಲ ಕೊಡುವುದಕ್ಕೆ ಆಗುವುದಿಲ್ಲ. ಜಮೀನನ್ನು ಕೂಡ ಸರಕಾರದವರೇ ವಶಪಡಿಸಿಕೊಂಡು ಸಾಗುವಳಿ ಮಾಡುವಂತಹ ಸಂದರ್ಭ ಬರಬಹುದು ಎಂದು ನನಗೆ ಅನ್ನಿಸುತ್ತದೆ. ರೈತರು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಅಥವಾ ಇನ್ನಾವುದಾದರೂ ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಳ್ಳಬೇಕೆಂದೂ ಕೂಡ ಬ್ಯಾಂಕಿಗೆ ಸಾಕಷ್ಟು ಸೆಕ್ಯೂರಿಟಿ ಕೊಡಬೇಕಾಗುತ್ತದೆ. ಸಕ್ಯೂರಿಟಿ ಇಲ್ಲದೆ ಯಾವ ಬ್ಯಾಂಕಿನಲ್ಲಿಯೂ ಕೂಡ ಹಣವನ್ನು ಕೊಡುವುದಿಲ್ಲ. ನಾಷನಲೈಸ್ಡ್ ಬ್ಯಾಂಕಿನಲ್ಲಿಯೂ ಕೂಡ ಸಾಕಷ್ಟು ಸೆಕ್ಯೂರಿಟಿ ಇಲ್ಲದಿದ್ದರೆ ಹಣವನ್ನು ಸಾಲವಾಗಿ ಕೊಡುವುದಿಲ್ಲ. ಸರಕಾರದವರು ಒಂದು ಯೋಜನೆಮಾಡಿ ಈ ಅರ್ಧಂಬರ್ಧವಾಗಿರುವ ಬಾವಿಗಳನ್ನು ಪೂರ್ತಿಆಗುವ ಹಾಗೆ ರೈತರಿಗೆ ಸಾಲಕೊಟ್ಟರೆ ಆದರಿಂದ ನಮ್ಮ ಭಾಗದಲ್ಲಿ ಬರಗಾಲ ಪರಿಹಾರ ಆಗಲಿಕ್ಕೆ ಒಂದು ಮಾರ್ಗ ಆದೀತು ಎನ್ನುವ ಒಂದು ಸೂಚನೆಯನ್ನು ಕೊಡುತ್ತೇನೆ. ಈ ಅಭಾವ ಪರಿಹಾರದ ಬಗ್ಗೆ ಅನೇಕ ಯೋಜನೆಗಳನ್ನೂ ಟಿ.ಡಿ.ಬಿ ಯವರು ತೆಗೆದುಕೊಳ್ಳುವಂತೆ ಸರಕಾರದವರು ಅವರಿಗೆ ಆದೇಶಕೊಡಬೇಕು. ಈ ರೀತಿ ನಮ್ಮಲ್ಲಿ ಅನೇಕ ಯೋಜನೆಗಳನ್ನು ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಸ್ವಾಮಿ, ಮಾನ್ಯ ರೆವಿನ್ಯೂ ಮಂತ್ರಿಗಳು ಕೊಟ್ಟಿರತಕ್ಕಂಥ ಸಣ್ಣ ಪುಸ್ತಕದಲ್ಲಿ ಕೊನೆ ಪುಟದಲ್ಲಿ ಸರ್ಕಾರದವರು ಈ ಕ್ಷಾಮ ನಿವಾರಣೆ ಯೋಜನೆಯಲ್ಲಿ ಯಾವುದಾದರೂ ಸಲಹೆಗಳನ್ನು ಕೊಟ್ಟರೆ ಕೃತಜ್ಞತೆಯಿಂದ ಅಂಗೀಕರಿಸುತ್ತೇವೆ ಎನ್ನುವ ಒಂದು ಭರವಸೆಯನ್ನು ಕೊಟ್ಟಿರುವುದರಿಂದ ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ನಾನು ಆಡಬಯಸುತ್ತೇನೆ. ನಮ್ಮ ಮಾನ್ಯ ಮಿತ್ರರುಗಳು ಅನೇಕರು ಈ ಕ್ಷಾಮ ನಿವಾರಣೆ ಸಂದರ್ಭದಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಈ ಒಂದು ತಾತ್ಕಾಲಿಕವಾದ ಈ ಕ್ಷಾಮ ನಿವಾರಣೆ ಯೋಜನೆಯಿಂದ ಕೆಲಸಗಳು ಬಗೆಹರಿಯುವುದಿಲ್ಲ. ಅದಕ್ಕೆ ಒಂದು ಶಾಶ್ವತವಾದ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಅವರು ಆದೇಶ ಕೊಟ್ಟಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಈ ಒಂದು ಶಾಶ್ವತವಾದ ಯೋಜನೆಯನ್ನು ಹೇಗೆ ಹಾಕಿಕೊಳ್ಳಬೇಕು ಎನ್ನುವಂಥ ವಿಷಯದಲ್ಲಿ ಮಾತ್ರ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಮಳೆಯ ಅಭಾವದಿಂದ ಆಗಾಗ್ಗೆ ಕ್ಷಾಮ ಬರತಕ್ಕಂಥದ್ದು ನಮ್ಮ ಭಾರತಕ್ಕೆ ಹೊಸದೇನು ಅಲ್ಲ. ಬಹುಶಃ ನಮ್ಮ ಆರ್ಥಿಕ ಇತಿಹಾಸದಲ್ಲಿ ಪದೇ ಪದೇ ಈ ಕ್ಷಾಮ ಬಂದು ನಮ್ಮನ್ನು ಕಾಡುತ್ತಾ ಇದೆ. ನಾವುಗಳು ವಿಜ್ಞಾನದಲ್ಲಿ ಎಷ್ಟು ಮುಂದುವರಿದರೂ ಕೂಡ ಮಳೆ ಸಕಾಲದಲ್ಲಿ ಒಂದು ಸಾರಿಗೆ ಎಷ್ಟು ಪ್ರಮಾಣದಲ್ಲಿ ಮತ್ತು ಯಾವ ಪ್ರದೇಶದಲ್ಲಿ ಬೀಳಬೇಕು ಎಂಬ ಬಗ್ಗೆ ಪರಿಶೋಧನೆ ನಡೆದಿಲ್ಲ ಮತ್ತು ಕೆಲವು ಭಾಗದಲ್ಲಿ ನಡೆದಂತಹ ಪರಿಶೋಧನೆ ಅಷ್ಟು ಸಮರ್ಪಕವಾಗಿಲ್ಲ. ಕೆಲವು ವಿಜ್ಞಾನಿಗಳ ಅಭಿಪ್ರಾಯದಲ್ಲಿ ಕಾಡುಗಳು ಹೋಗುವುದರಿಂದ ಈ ಅಭಾವ ಪರಿಸ್ಥಿತಿ ಉಂಟಾಗುತ್ತದೆ. ಯಾವುದಕ್ಕೂ ಸಾಕಷ್ಟು ಸ್ಪಷ್ಟವಾದ ಅಭಿಪ್ರಾಯ ಬಂದಿಲ್ಲ. ಒಂದು ಪಕ್ಷ ಕಾಡು ಹೋಗುವುದರಿಂದ ಮಳೆಯ ಅಭಾವ ಬರುತ್ತದೆ ಎನ್ನುವುದನ್ನು ಒಪ್ಪಿಕೊಳ್ಳುವುದಾದರೂ ಕೂಡ ಈ ಒಂದು ಸಣ್ಣಪ್ರಮಾಣದ ದೃಷ್ಟಿಕೋನದಿಂದ ಕೂಡ ಸರಕಾರದ ನೀತಿ ಸ್ಪಷ್ಟವಾಗಿ ಕಾಣುತ್ತಾ ಇಲ್ಲ. ಈ ಒಂದು ಪ್ರಜಾತಂತ್ರ ಸರಕಾರ ಬಂದ ಮೇಲೆ ಕಾಡಿಗೆ ಒದಗಿರತಕ್ಕಂಥ ಅಪಾಯ ಹಿಂದೆ ಯಾವ ರಾಜಮಹಾರಾಜರುಗಳ ಕಾಲದಲ್ಲಿಯೂ ಒದಗಿರಲಿಲ್ಲ. ಕೊಡಗಿನಲ್ಲಿ ಎರಡು ಸಾವಿರ ಎಕರೆ ದಟ್ಟವಾದ ಅರಣ್ಯ ಇತ್ತು. ಅದನ್ನು ಈಗ ಟಿಬೆಟಿಯನ್ ನಿರಾಶ್ರಿತರಿಗೆ ಸಾಗುವಳಿ ಮಾಡುವುದಕ್ಕೆ ಕೊಡಬೇಕು ಎಂಬುದಾಗಿ ಒಂದು ಯೋಜನೆಯನ್ನು ಬಹಿರಂಗಪಡಿಸಿದ್ದಾರೆ. ಅದಕ್ಕೆ ತಾಲ್ಲೂಕು ಬೋರ್ಡಿನವರು ಪ್ರತಿಭಟನೆಯನ್ನು ಸೂಚಿಸಿ ಕೊಡಕೂಡದು ಎಂದು ಹೇಳಿದ್ದಾರೆ. ಈ ಸೂಚನೆಯನ್ನು ನಾನು ನಿನ್ನೆ ಅಥವಾ ಮೊನ್ನೆ ಪತ್ರಿಕೆಯಲ್ಲಿ ಓದಿದೆ. ಅರಣ್ಯ ಸಚಿವರೇನೋ ಒಳ್ಳೆಯ ಉಡುಪು ಹಾಕಿಕೊಂಡು ಟ್ರಿಂ ಆಗಿಯೇ ಇರುತ್ತಾರೆ. ಅವರು ಕಾಡಿನ ಜನರಂತೆ ಕಾಣುವುದಿಲ್ಲ. ಆದ್ದರಿಂದ ಅವರು ಯಾವ ಕಾಡು ನೋಡಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ. ಈ ಪ್ರಜಾಪ್ರಭುತ್ವ ಬಂದಾಗಿನಿಂದಲೂ ಕಾಡುಗಳು ಲಯವಾಗಿ ಹೋಗುತ್ತಿವೆ. ಕಾಡಿನ ಬೆಳವಣಿಗೆಯಲ್ಲಿ ನಿಜವಾಗಿ ಕಟ್ಟುನಿಟ್ಟಾದ ರೀತಿನೀತಿ ಇಲ್ಲ. ಇದರಿಂದಲೇ ಕಾಡು ಹಾಳಾಗಿ ಹೋಗುತ್ತಿವೆ. ಇನ್ನು ಕ್ಷಾಮ ನಿವಾರಣೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿಯೂ ಇದೇ ರೀತಿನೀತಿಯನ್ನು ಅನುಸರಿಸುತ್ತಿದ್ದಾರೆ. ಈಗ ಕ್ಷಾಮ ಪರಿಸ್ಥಿತಿ ಬಂದಿರುವುದ

ರಿಂದ ಈ ವರ್ಷ ನಂಜನಗೂಡು ತಾಲ್ಲೂಕಿಗೆ ಒಂದು ಸಬ್ ಡಿವಿಜನ್ ಆಫೀಸರ್ ಅವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಿದ್ದಾರೆ. ಅದಕ್ಕೆ ನನ್ನನ್ನೂ ಸದಸ್ಯನನ್ನಾಗಿ ಹಾಕಿದ್ದಾರೆ. ಮುಖ್ಯ ವಾಗಿ ಈಗಿರತಕ್ಕ ದೋಷವೇನೆಂದರೆ, ಯಾರಿಂದ ಯಾವ್ಯಾವ ಕೆಲಸಗಳನ್ನು ಮಾಡಿಸಬೇಕೆಂಬ ಬಗ್ಗೆ ಯಾವ ತಾಲ್ಲೂಕಿನಲ್ಲಿಯೂ ಸರಿಯಾದಂಥ ಮೆಷನರಿ ಇಲ್ಲ. ರೆವಿನ್ಯೂ ಅಧಿಕಾರಿಗಳಿಗೆ ಅವರ ಕೆಲಸ ಗಳೇ ವಿಪರೀತವಾಗಿವೆ, ಮತ್ತು ವಿಫುಲವಾಗಿವೆ. ಅಲ್ಲಿರತಕ್ಕ ಎಗ್ಸಿಕ್ಯುಟಿವ್ ಆಫೀಸರ್ ಅಲ್ಲಿನ ವಿಲೇಜ್ ಲೆವಲ್ ವರ್ಕರ್‌ಸ್‌ಗೆ ಇಂತಿಂಥ ಕೆಲಸಗಳನ್ನು ಮಾಡಿ ಎಂದು ಹೇಳುತ್ತಾರೆ. ಇದರಿಂದ ಯಾರಿಗೆ ಕ್ಷಾಮನಿವಾರಣೆಯಾಗುತ್ತದೆ ಅಂದರೆ, ಯಾರಿಗೆ ಹೆಚ್ಚಿಗೆ ದುಡ್ಡು ಸಂಪಾದನೆ ಮಾಡ ಬೇಕೆಂದಿರುತ್ತದೋ ಅವರಿಗೆ ನಿಜವಾಗಿ ಕ್ಷಾಮನಿವಾರಣೆಯಾಗುತ್ತದೆ. ನಿಜವಾಗಿಯೂ ಅಂತಹ ವರಿಗೆ ಮಾತ್ರ ಕ್ಷಾಮನಿವಾರಣೆಯಾಗುತ್ತದೆಂದು ನಾನು ನಿಸ್ಸಂದೇಹವಾಗಿ ಹೇಳಬಹುದು. ಸರ್ಕಾರದವರು ಹಾಕುವಂಥ ಯೋಜನೆಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸರಿಯಾದಂಥ ಮೆಷನರಿಗಳು ಇಲ್ಲ. ಕೆಲವು ಕೆಲಸಗಳನ್ನು ಪಿ. ಡಬ್ಲ್ಯು. ಡಿ. ಅವರಿಗೆ ರೆಫರ್ ಮಾಡೋಣವೆಂದು ಹೇಳಿದರೆ, ಪ್ರತಿಯೊಬ್ಬ ಗ್ರಾಮಸೇವಕನ ಮೂಲಕ ಅಲ್ಲಿನ ಪ್ರತಿಯೊಂದು ಕೆಲಸವನ್ನು ಮಾಡಿಸು ತ್ತಿದ್ದಾರೆ. ಇದನ್ನು ಯಾರು ಚೆಕ್ ಮಾಡುವವರು ? ಇವರಲ್ಲಿ ಯಾವ ಪ್ರೈಯಾರಿಟಿ ಪ್ರೋಗ್ರಾಂ ಇದೆ ? ಒಂದು ವೇಳೆ ಗ್ರಾಮಸೇವಕರ ಮೂಲಕ ಕೆಲಸ ಮಾಡಿಸಿದರೆ, ಆ ಬಡ ಪ್ರಾಣಿಯ ಮಾತನ್ನು ಯಾರು ಕೇಳುತ್ತಾರೆ ? ಅವರ ಶಿಫಾರಸುಗಳನ್ನು ಕೇಳುವವರು ಯಾರು ? ಕ್ಷಾಮ ನಿವಾರಣೆಗೆಂದು ಕೊಟ್ಟಂಥ ಎರಡೂವರೆ ಕೋಟಿ ರೂಪಾಯಿಗಳ ಚಿಲ್ಲರೆ ಈಗ ವ್ಯಥಾ ಖರ್ಚಾಗುತ್ತದೆ. ಕೇಂದ್ರ ಸರ್ಕಾರದವರು ಇದಕ್ಕಾಗಿ ಕೊಟ್ಟಂಥ ಹಣ ಹಳ್ಳಿಯ ಜನಗಳಿಗೆ ತಲುಪಿ ಗ್ರಾಮಗಳಲ್ಲಿ ಶಾಶ್ವತವಾದ ಕೆಲಸ ನಡೆಯಿತು ಎಂಬುದಾಗಿ ಹೇಳುವುದಕ್ಕೆ ಸಾಧ್ಯವಿಲ್ಲವೆಂದು ನಾನು ಈ ಸಂದರ್ಭ ದಲ್ಲಿ ಒತ್ತಿ ಒತ್ತಿ ಹೇಳುತ್ತೇನೆ. ಈ ಕೂಗು ಸರ್ಕಾರದ ಗಮನಕ್ಕೆ ಇನ್ನೂ ಬಂದಿಲ್ಲ. ಒಂದೊಂದು ಜಿಲ್ಲೆಗೆ ಒಂದೊಂದು ಪ್ಲಾನ್ ಇಟ್ಟುಕೊಳ್ಳುವ ಹಾಗೆ ಮಾಡುತ್ತಿದ್ದಾರೆ. ಇದು ಸಂತೆಯೊಳಗೆ ಮೂರು ಮೊಳ ನೇಯಿದ ಹಾಗೆ ಆಗಿದೆ. ಆದ್ದರಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ನೀರಾವರಿ ಕ್ಷೇತ್ರಗಳು ಯಾವುವು, ನೀರಿನ ಅಭಾವದಿಂದ ನರಳುವ ಕ್ಷೇತ್ರ ಯಾವುದು ಎಂಬ ಬಗ್ಗೆ ಯಾವುದಾದರೂ ಒಂದು ಯೋಜನೆಯನ್ನು ಹಾಕಬೇಡವೇ ? ಜನರಲ್ ಫಂಡಿನಿಂದ ಬೇಕಾದರೆ ಎಷ್ಟಾದರೂ ಮೊಬಲ ಗನ್ನು ಕೊಡಿ. ಅದಕ್ಕೆ ತೊಂದರೆಯಿಲ್ಲ. ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಪ್ರೈಯಾರಿಟಿ ಬೇಸಿಸ್ ಮೇಲೆ ವರ್ಕ್ಸ್ ಪ್ರೋಗ್ರಾಂ ಬಗ್ಗೆ ಡ್ರಾಫ್ಟ್ ಮಾಡಿ ಎಂದರೆ ಅದನ್ನು ಮಾಡಲಿಲ್ಲ. ನಮ್ಮ ತಾತ, ಮುತ್ತಾತರ ಕಾಲದಲ್ಲಿ ಕಟ್ಟಿದಂಥ ಕೆರೆಗಳನ್ನು ರಿಪೇರಿ ಮಾಡುವುದಕ್ಕೆ ಇವರಿಗೆ ಶಕ್ತಿ ಇಲ್ಲ. ಈ ಪ್ರಶ್ನೆ ಒಂದುಸಾರಿ ಚೀಫ್ ಇಂಜನಿಯರುಗಳ ಮುಂದೆ ಬಂದಾಗ, ಅವರು ಪುರಾತನ ಜನಗಳು, ಕಟ್ಟಿದಂಥ ಕೆರೆಗಳನ್ನು ನಾವು ಕೇವಲ ರಿಪೇರಿ ಮಾಡಿಕೊಳ್ಳುವುದಕ್ಕೆ ಶಕ್ತಿ ಇಲ್ಲ, ಎಂದು ಹೇಳಿದ್ದೂ ಉಂಟು. ಅವರಿಗೆ ಸರಿಯಾಗಿ ಡೀಸಿಲ್ಟ್ ಮಾಡಲು ಗೊತ್ತಿಲ್ಲ. ಹಳ್ಳಿಗಳಲ್ಲಿ ಕೆರೆಗಳ ದುರಸ್ತಿಗಾಗಿ ಯಾವ್ಯಾವ ಯೋಜನೆಗಳನ್ನು ತಯಾರುಮಾಡಿದ್ದಾರೆ. ಯಾವ್ಯಾವ ತಾಲ್ಲೂಕುಗಳಲ್ಲಿ ಕೆರೆಗಳು ಎಷ್ಟೆಷ್ಟು ಇವೆಯೆಂಬುದನ್ನು ಪಟ್ಟಿ ಮಾಡಿದ್ದಾರೆಯೋ ಅಂದರೆ ಅದೂ ಕೂಡ ಇವರಲಿಲ್ಲ. ಸೋ ಕಾಲ್ಡ್ ಗ್ರೋಮೋರ್ ಫುಡ್ ಕ್ಯಾಂಪೇನ್ ಮಾಡುತ್ತೇವೆ ಎಂದು ಹೇಳಿ ಸೋಕಾಲ್ಡ್ ಪೊಲಿಟಿಕಲ್ ಸಫರರ್ಸ್‌ಗೆ ಕೆರೆ ಅಂಗಳಗಳನ್ನೆಲ್ಲಾ ಕೊಟ್ಟುಬಿಟ್ಟಿದ್ದಾರೆ. ಅದರಿಂದ ಈಗ ಯಾವ ಕಾಮನ್ ಲ್ಯಾಂಡ್ ಸಹ ಇಲ್ಲ. ಪೊಲಿಟಿಕಲ್ ಸಫರರ್ಸ್ ಎಂಬುದಾಗಿ ಬಟ್ಟೆ ಹಾಕಿಕೊಂಡು ಈಗ ಎಲ್ಲಾ ಕೆರೆ ಅಂಗಳಗಳನ್ನೆಲ್ಲಾ ಅವರಿಗೆ ಕೊಟ್ಟಿರುವುದರಿಂದ ಅವು ಲಯವಾಗಿವೆ. ಕೆರೆಯ ಅಂಗಳ ಎಷ್ಟಿದೆ ಯೆಂದು ಹೇಳಿದರೆ ಇವರಿಗೆ ಗೊತ್ತಿಲ್ಲ. ಹಳ್ಳಿಯ ನಕಾಶೆ ನೋಡಿದರೆ ಆಗ ಎಷ್ಟು ಲ್ಯಾಂಡ್ಸ್ ಎಂಬುದು ಸಿಗುತ್ತದೆ. ಯಾವ ರೀತಿ ಇವತ್ತು ಅಲ್ಲಿ ಸಾಗುವಳಿಯಾಗುತ್ತಿದೆಯೆಂದರೆ, ಯಾರಿಗೆ ಗ್ರಾಮದಲ್ಲಿ ಹೆಚ್ಚು ಭೂಮಿ ಇದೆಯೋ ಅವನೇ ಪೊಲಿಟಿಕಲ್ ಸಫರರ್ ಎಂದು ಹೇಳಿಕೊಂಡು ಬೇಕಾ ದಷ್ಟು ಜಮೀನು ಮಾಡಿಕೊಂಡಿದ್ದಾನೆ. ವರ್ಷಂಪ್ರತಿ ನಂಜನಗೂಡಿನಲ್ಲಿರತಕ್ಕ 16 ಕೆರೆಗಳ ಪೈಕಿ ಪ್ರತಿಯೊಂದು ಕೆರೆಯನ್ನು ಪ್ರೈಯಾರಿಟಿ ಬೇಸಿಸ್ ಮೇಲೆ ರಿಪೇರಿ ಮಾಡುವ ಯೋಜನೆ ಇದೆಯೆಂದು ಹೇಳುತ್ತಿದ್ದಾರೆ. ನಂಜನಗೂಡು ತಾಲ್ಲೂಕಿಗೆ ಕೇವಲ 50 ಸಾವಿರ ರೂಪಾಯಿಗಳನ್ನು ಇರ್ರಿಗೇಷನ್ ಫೆಸಲಿಟೀಸ್‌ಗೆ ಎಂಬುದಾಗಿ ಕೊಡುತ್ತಾರೆ. ಯಾವುದೋ ದುಡ್ಡು ಬರುತ್ತದೆ, ಯಾವುದೋ ದುಡ್ಡು ಹೋಗುತ್ತಿದೆ. ನಮ್ಮನ್ನು ಅಲ್ಲಿಗೆ ನಾಮಕರಣ ಸದಸ್ಯರನ್ನಾಗಿ ಮಾಡಿದರು, ನಾವು ಅಲ್ಲಿ ಸುಮ್ಮನೆ ಕೂತಿದ್ದೇವೆಂದು ಕೆಲವರು ಹೇಳುತ್ತಾರೆ. ನಮ್ಮ ತಾಲ್ಲೂಕಿಗೆ ಸುಮಾರು ಒಂದು ಲಕ್ಷ ರೂಪಾಯಿ ಗಳನ್ನಾದರೂ ಖರ್ಚು ಮಾಡಬೇಕು. ಒಂದು ಸಾರಿ ನಾನು ಮತ್ತು ಮಾನ್ಯ ಶ್ರೀ ಸಿದ್ದಯ್ಯನವರು ಒಂದು ಮೀಟಿಂಗಿಗೆ ಹೋಗಿದ್ದೆವು. ದುಡ್ಡನ್ನು ಈ ರೀತಿ ಹಾಳುಮಾಡುವುದಕ್ಕೆ ಬದಲು, ರೈತರಿಗೆ ಏನು ಉಪಕಾರ ಮಾಡದಿದ್ದರೂ ಅವರಿಗೆ ಒಂದು ರಸ್ತೆಯನ್ನು ಮಾಡಿಸಿಕೊಡಿ, ಆ ರಸ್ತೆಗೆ ಕೇವಲ ಮೂರು ಸಾವಿರ ರೂಪಾಯಿಗಳು ಬೇಕು. ಅದು ಬಸವಾಪುರ ಹೋಬಳಿಗೆ ಸೇರಿದ ರಸ್ತೆ ಎಂದು

(ಶ್ರೀ ಎಲ್. ಶ್ರೀಕಂಠಯ್ಯ)

ಹೇಳಿದರೂ, ಇದನ್ನು ಏತಕ್ಕೆ ಕೊಡಬೇಕು ಎಂದು ಕೇಳಿದ್ದೂ ಉಂಟು. ಇದು ಇವರು ಮಾಡತಕ್ಕ ಕ್ಷಾಮ ನಿವಾರಣಾ ನೀತಿ. ಅಲ್ಲಿನವರು ಸರಿಯಾಗಿ ಒಂದು ರಸ್ತೆ ಇಲ್ಲ 30 ವರ್ಷಗಳಿಂದ ಅದನ್ನು ಮಾಡಿಸಿಕೊಡಿ ಅಂದರೆ, ಇಲ್ಲ. ಕೇವಲ ಅವರಿಗೆ 3 ಸಾವಿರ ರೂಪಾಯಿಗಳನ್ನು ಕೊಟ್ಟರೆ ಅವರು ಚಿರಋಣಿಗಳಾಗಿರುತ್ತಾರೆಂಬುದಾಗಿ ಹೇಳಿದರೂ ಆ ಹಣವನ್ನು ಕೊಡುವುದಿಲ್ಲ. ಆದ್ದರಿಂದ ಇವರು ಕ್ಷಾಮ ನಿವಾರಣೆ ಮಾಡುತ್ತಿದ್ದೇವೆಂದು ಹೇಳುವುದು ಬರೀ ಉತ್ಪ್ರೇಕ್ಷೆ ಮಾತೆಂದು ನನಗನ್ನಿಸುತ್ತದೆ. ಕ್ಷಾಮ ನಿವಾರಣೆ ಅಲ್ಲಲ್ಲಿ ಮಾಡುತ್ತೇವೆಂದು ಹೇಳಿದರೆ, ಎಲ್ಲೆಲ್ಲಿ ಯಾರಿಗೆ ಕ್ಷಾಮ ನಿವಾರಣೆ ಆಯಿತೋ ಗೊತ್ತಿಲ್ಲ. ಇದರಿಂದ ಎರಡು ಕೋಟಿ ರೂಪಾಯಿಗಳು ಲಯವಾಗುತ್ತಿದೆ. ಎಲ್ಲಿ ಅಗತ್ಯವಾಗಿ ದುಡ್ಡು ಬೇಕೋ, ಅಗತ್ಯ ಖರ್ಚು ಮಾಡಬೇಕೋ ಅಲ್ಲಿ ಒಂದು ಕಾಸನ್ನೂ ಕೊಡುವುದಿಲ್ಲ. ಎಕ್ಸ್‌ಪೋಗೆ 8 ಲಕ್ಷ ರೂಪಾಯಿಗಳನ್ನು ಈಗ ಇವರು ಖರ್ಚು ಮಾಡಿದ್ದಾರೆ. 3 ಸಾವಿರ ರೂಪಾಯಿಗಳನ್ನು ಆ ಒಂದು ರಸ್ತೆ ಮಾಡಿಸಿಕೊಡುವುದಕ್ಕೆ ಸುಮಾರು 30 ವರ್ಷಗಳಿಂದ ಪ್ರಯತ್ನಗಳನ್ನು ಮಾಡಿದ್ದರೂ ಇನ್ನೂ ಕೊಟ್ಟಿಲ್ಲ. ಇದರ ಬಗ್ಗೆ ಹಿಂದೆ ಅನೇಕ ಸಾರಿ ಭರವಸೆಗಳನ್ನೂ ಸಹ ಕೊಟ್ಟಿದ್ದರು. ಆದರೆ ಯಾರೋ ಜಪಾನಿಗೆ ಹೋದರೆಂದು 8 ಲಕ್ಷ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದಿರಿ. ಇದು ಆಡಳಿತವೇ ! ಪ್ರೈಯಾರಿಟಿ ಬೇಸಿಸ್ ಮೇಲೆ ಆ ರಸ್ತೆಗೆ ಹಣ ಕೊಡಿ ಅಂದರೆ ಆಗುವುದಿಲ್ಲವೆಂದು ಹೇಳಿದಿರಿ. ಈ ರೀತಿ ಮಾಡುವುದು ಸರಿಯಲ್ಲ. ಎಲ್ಲಿಯವರೆಗೆ ನೀರಾವರಿ ಯೋಜನೆಗಳು ಸರಿಯಾಗಿ ಆಗುವುದಿಲ್ಲವೋ ಅಲ್ಲಿಯವರೆಗೆ ಬರಗಾಲ ಮುಂದೆ ಬಂದೇ ಬರುತ್ತದೆ. ಪೂರ್ವಿಕರು ಮಾಡಿದಂಥ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕು. ವೆಸ್ಟರನ್ ಘಾಟ್ಸ್‌ನಲ್ಲಿ ಮಳೆ ಹೆಚ್ಚಿಗೆ ಬರುತ್ತದೆ. ಆ ಮಳೆಯ ನೀರು ಅರೇಬಿಯನ್ ಸಮುದ್ರಕ್ಕೇ ಹೋಗುತ್ತದೆ. ಆಗುಂಬೆಯಲ್ಲಿ ಮಳೆ ಜಾಸ್ತಿ ಇದೆಯೆಂದು ಹೇಳುತ್ತೀರಿ, ಆದರೆ ಅಲ್ಲಿ ಬೀಳತಕ್ಕ ನೀರನ್ನೆಲ್ಲಾ ಮೈದಾನದ ಕಡೆಗೇ ಹರಿಸುವುದಕ್ಕೆ ಏನಾದರೂ ಬ್ಲ್ಯೂಪ್ರಿಂಟ್ ಮಾಡಿಸಿದ್ದೀರಾ ? ನಾವು ಬ್ರಹ್ಮಪುತ್ರ ಮತ್ತು ಗಂಗಾನದಿ ನೀರನ್ನು ದಕ್ಷಿಣ ಇಂಡಿಯಾಕ್ಕೆ ತರುವಷ್ಟು ದೂರ ಹೋಗುವುದು ಬೇಡ. ಯಾವುದಾದರೂ ಒಂದು ಸ್ಕೀಮನ್ನು ಮಾಡುವುದಕ್ಕೆ ಸಾಧ್ಯವಿದ್ದರೆ, ಅದನ್ನು ಮೊದಲು ಎಗ್ಸಾಮಿನ್ ಮಾಡಿಸಿ. ನೀವು ಆ ರೀತಿಯಾಗಿ ಮಾಡಿದರೆ ನಿಜವಾಗಿ ಖರ್ಚುಮಾಡಿದಂಥ ದುಡ್ಡು ಸಾರ್ಥಕವಾಗುತ್ತದೆ. ಅದಿಲ್ಲದೆ ಒಂದು ಸಲಹಾ ಸಮಿತಿಗೆ ಈ ವಿಚಾರವನ್ನು ಹಾಕಿದರೆ ಅದರಿಂದೇನು ತೃಪ್ತಿಯಾಗುತ್ತದೆ ? ಸುಮ್ಮನೆ ಏನೋ ತೋರುವಿಕೆಗೆ ಈ ರಾಜ್ಯದಲ್ಲಿ ಕ್ಷಾಮನಿವಾರಣೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಕೇಂದ್ರ ಸರ್ಕಾರದವರು ಮೂರು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದನ್ನೂ ಖರ್ಚುಮಾಡುತ್ತೀರಿ. ಇದೆಲ್ಲವೂ ಪುಸ್ತಕದಲ್ಲಿರುವ ಲೆಕ್ಕವಾಗುತ್ತದೆಯೇ ಹೊರತು ಇದರಿಂದೇನೂ ಪ್ರಯೋಜನವಾಗುವುದಿಲ್ಲವೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ.

ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ ಸಭಾಧ್ಯಕ್ಷರೇ, ನಮ್ಮ ಕಂದಾಯ ಸಚಿವರು ನಮ್ಮ ರಾಜ್ಯದಲ್ಲಿ ಉಂಟಾಗಿರತಕ್ಕ ಅಭಾವ ಪರಿಸ್ಥಿತಿ ಮತ್ತು ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ, ಮತ್ತು ಅದಕ್ಕೆ ಎಷ್ಟು ಹಣವನ್ನು ಒದಗಿಸಲಾಗಿದೆ ಎಂಬ ಸೂಚನೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಅವರ ಬಗ್ಗೆ ನನ್ನ ಕೆಲವು ಸೂಚನೆಗಳನ್ನು ಕೊಡುತ್ತೇನೆ. ಇದುವರೆಗೂ ಇದರ ಬಗ್ಗೆ ಸುಮಾರು ಮೂರು ಗಂಟೆಯವರೆಗೂ ಅನೇಕ ಸದಸ್ಯರು ಮಾತನಾಡಿದ್ದಾರೆ. ಸುಮಾರು 10-12 ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಈ ಕ್ಷಾಮ ಪರಿಸ್ಥಿತಿ ಏನಿದೆ, ಅದರ ಬಗ್ಗೆ ಒಂದು ನಿರ್ಧಿಷ್ಟವಾದ ಕಾಯಂ ಪರಿಹಾರವನ್ನು ಯೋಜನೆ ಮಾಡದೆ, ಕೇವಲ ತಾತ್ಕಾಲಿಕ ಪರಿಹಾರವನ್ನು ಒದಗಿಸತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಸುಮಾರು 5, 6, 7, 8, ಕೋಟಿ ರೂಪಾಯಿಗಳನ್ನು ಖರ್ಚುಮಾಡಿರತಕ್ಕ ಸಂದರ್ಭಗಳನ್ನು ನಾವು ನೋಡಿದ್ದೇವೆ. ಹಂಗಾಮಿಯಾಗಿ ರಸ್ತೆಗಳನ್ನು ಮಾಡತಕ್ಕ ಕೆಲಸ, ಗೋಕಟ್ಟೆಗಳನ್ನು ಕಟ್ಟುವ ಕೆಲಸ, ಇರತಕ್ಕ ರಸ್ತೆಗಳನ್ನು ದುರಸ್ಥಿ ಮಾಡತಕ್ಕ ಕೆಲಸ, ಮತ್ತು ಚ್ಯಾನಲ್‌ನ ಹೂಳು ತೆಗೆಸುವ ಕೆಲಸ—ಇತ್ಯಾದಿ ಕೆಲಸಗಳನ್ನು ಮಾಡುವಾಗ ಇದಕ್ಕೆ ಒದಗಿಸಿದ ಹಣ ಆಡಳಿತ ಪಕ್ಷದವರು ಮತ್ತು ಆಡಳಿತ ಪಕ್ಷದವರ ಹಿತೈಷಿಗಳ ಜೇಬನ್ನು ತುಂಬಿಸುವ ಹಾಗೆ ಸತತವಾಗಿ ಮಾಡುತ್ತಾರೆಂದು ಹೇಳದೆ ವಿಧಿ ಇಲ್ಲ. ಮಾನ್ಯ ಸದಸ್ಯರೊಬ್ಬರು ಪ್ರತೀಸಾರಿ ರಾಜ್ಯದಲ್ಲಿ ಉದ್ಭವವಾದಂತಹ ಪರಿಸ್ಥಿತಿಗೆ ಕೇಂದ್ರ ಸರ್ಕಾರದವರ ನೆರವನ್ನು ಕೇಳಿದಾಗ, ಆ ನೆರವನ್ನು ಸಕಾಲದಲ್ಲಿ, ಸಾಕಾದಷ್ಟು ಪ್ರಮಾಣದಲ್ಲಿ ಅವರು ಕೊಡುತ್ತಾ ಇಲ್ಲವೆಂದು ಹೇಳುತ್ತಿದ್ದರು. ಅದರ ಜೊತೆಗೆ ಖಾಯಂ ಆದಂತಹ ಪರಿಹಾರ ಯೋಜನೆಯನ್ನು

ಕಳಿಸಿಕೊಟ್ಟು ಈಗಾಗಲೇ 3–4 ವರ್ಷವಾದರೂ ಕೂಡ, ಅದು ಯಾವ ರೀತಿಯಲ್ಲಿ ಮಂಜೂರಾಗಿಲ್ಲವೆಂದು ಹೇಳಿದರು. ಕೇಂದ್ರ ಸರ್ಕಾರದವರು ಆಗಾಗ್ಯೆ ಕಳೆದ 10–12 ವರ್ಷಗಳಿಂದ ಕ್ಷಾಮ ಪರಿಹಾರ ಕಾರ್ಯಗಳಿಗೆ ಕೊಟ್ಟಂತಹ ಹಣವನ್ನು ಸದುಪಯೋಗ ಮಾಡದೆ, ದುರುಪಯೋಗ ಮಾಡಿದ್ದಾರೆಂಬ ಅಭಿಪ್ರಾಯ ಕೇಂದ್ರ ಸರ್ಕಾರಕ್ಕೆ ಬಂದಿರುವುದರಿಂದ, ಕೇಂದ್ರ ಸರ್ಕಾರದವರು ನಾವು ಕಳಿಸಿದಂತಹ ಯೋಜನೆಗೆ ಅಷ್ಟು ಗಮನ ಕೊಟ್ಟಿಲ್ಲವೋ ಏನೋ ಎಂದು ನನಗನಿಸುತ್ತದೆ. ಇವರು ಕಳಿಸಿರತಕ್ಕ ಸಮಗ್ರವಾದ ಖಾಯಂ ಪರಿಹಾರ ಯೋಜನೆ ಏನಿದೆ, ಅದರ ಬಗ್ಗೆ ನಮ್ಮ ರಾಜ್ಯದ ಮುಖ್ಯಮಂತ್ರಿಯಾಗಲಿ, ಅಥವಾ ಸಂಬಂಧಪಟ್ಟ ಮಂತ್ರಿಯವರಾಗಲಿ ಅಲ್ಲಿ ಸಾಕಷ್ಟು ಒತ್ತಾಯ ಮಾಡುತ್ತಿದ್ದರೆ, ಕೇಂದ್ರಸರ್ಕಾರದವರು ಅದನ್ನು ಮಂಜೂರು ಮಾಡುತ್ತಿದ್ದರೋ ಏನೋ. ಆದ್ದರಿಂದ ಮಾನ್ಯ ಸದಸ್ಯರು ಆ ಮಾತನ್ನು ಯಾವ ದೃಷ್ಟಿಯಿಂದ ಆಡುತ್ತಿದ್ದಾರೆಂದು ನನಗೆ ಅರ್ಥವಾಗಿಲ್ಲ. ಇನ್ನು ನಮ್ಮ ಮೈಸೂರು ಜಿಲ್ಲೆಯಲ್ಲಿ ನನ್ನ ಕ್ಷೇತ್ರದಲ್ಲಿ, ಶ್ರೀಮಾನ್ ರಾಚಯ್ಯನವರ ಕ್ಷೇತ್ರ, ನಾಗರತ್ನಮ್ಮನವರ ಕ್ಷೇತ್ರ ಕೊಳ್ಳೆಗಾಲ, ನಂಜನಗೂಡು, ಟಿ. ನರಸಿಪುರ ಮುಂತಾದ ಕ್ಷೇತ್ರಗಳಲ್ಲಿ ಮಳೆಯಿಲ್ಲದೆ, ಕಳೆದ 7–8 ವರ್ಷಗಳಲ್ಲಿ ಯಾವ ಬೆಳೆಯೂ ಇಲ್ಲದಂತಾಗಿದೆ. ಹಿಂಗಾರುಮಳೆ ಕೂಡ ಬಾರದೆ, ನೆಲಗಡ್ಲೆ, ರಾಗಿ ಯಾವುದೂ ಬೆಳೆಯಲಾಗಲಿಲ್ಲ. ಶ್ರೀಮತಿ ನಾಗರತ್ನಮ್ಮನವರು ಸುಮಾರು 15 ವರ್ಷದಿಂದ ಇದರ ಬಗ್ಗೆ ಮನವಿಗಳನ್ನು ಸಲ್ಲಿಸುತ್ತಿದ್ದಾರೆ. ಅನೇಕ ಕೆಲಸಗಳನ್ನು ಮಾಡುವುದಕ್ಕೋಸ್ಕರ ಪಿ ಡಬ್ಲ್ಯುಡಿಯವರು ದೊಡ್ಡ ವಿಭಾಗದ ನೀರಾವರಿಯನ್ನು ಪರಿಶೀಲನೆ ಮಾಡುವುದಕ್ಕೋಸ್ಕರ ಒಂದು ವಿಭಾಗವನ್ನು ತೆರೆದಿದ್ದಾರೆ, ಅದೇ ರೀತಿ ಸಣ್ಣ ನೀರಾವರಿ ಕೆಲಸವನ್ನು ಮಾಡಲು ಒಂದು ಪರಿಶೀಲನಾ ವಿಭಾಗವನ್ನು ತೆರೆದಿದ್ದಾರೆ. ಎರಡು ಡಿವಿಜನಿನಲ್ಲೂ ಕೆಲಸ ಮಾಡತಕ್ಕ ಅಧಿಕಾರಿಗಳು ಸರ್ಕಾರದಿಂದ ಅಥವಾ ಮಂತ್ರಿಗಳಿಂದ ಮಾಡುವ ಕೆಲಸದ ಬಗ್ಗೆ ಏನಾದರೂ ಒಂದು ಮಿನಿಟ್ಸ್, ಹೋದರೆ ಆ ಕೆಲಸವನ್ನು 15 ದಿವಸ ಅಥವಾ ಒಂದು ತಿಂಗಳಿನಲ್ಲಿ ಪರಿಶೀಲನೆ ಮಾಡಿ ಸರ್ಕಾರಕ್ಕೆ ಕಳಿಸುತ್ತಾರೆ. ಆದರೆ ಶ್ರೀಮತಿ ನಾಗರತ್ನಮ್ಮನವರು ಆಡಳಿತ ಪಕ್ಷದಲ್ಲಿದ್ದಾಗ ಕೂಡ ಏನಾದರೂ ಹೇಳಿದರೆ, ಅದನ್ನು ಆರು ತಿಂಗಳು, ಅಥವಾ ಒಂದು ವರ್ಷವಾದರೂ ಕೂಡ ಪರಿಶೀಲನೆ ಮಾಡಿ, ಅದಕ್ಕೆ ಸಂಬಂಧಪಟ್ಟ ಯೋಜನೆಯನ್ನಾಗಲಿ, ಅಥವಾ ಅದರ ಎಸ್ಟಿಮೇಟನ್ನಾಗಲಿ ಮಾಡಿ ಸರ್ಕಾರ ಕಳಿಸಿದ ಸನ್ನಿವೇಶವಿಲ್ಲವೆಂಬುದನ್ನು ಅವರು ಹೇಳಿದ್ದಾರೆ. ಈಗಲೂ ಅವರು ಅದನ್ನೇ ಹೇಳಬಹುದೆಂದು ಕಾಣುತ್ತದೆ. ನಮ್ಮ ತಾಲ್ಲೂಕಿನಲ್ಲಿ ಸಹ ನಾನು ಸದಸ್ಯನಾಗಿ ಬಂದಮೇಲೆ ರಾಜ್ಯದ ಮುಖ್ಯಮಂತ್ರಿಯಾಗಿರತಕ್ಕ ವೀರೇಂದ್ರ ಪಾಟೀಲರು ಇದರ ಮಂತ್ರಿಯಾಗಿದ್ದ ಕಾಲದಲ್ಲಿ ಶ್ರೀಮಾನ್ ರಾಚಯ್ಯನವರ ಕ್ಷೇತ್ರ ಮತ್ತು ನನ್ನ ಕ್ಷೇತ್ರದ ಎರಡೂ ಭಾಗಗಳಲ್ಲಿ 5 ನೀರಾವರಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ ಪ್ರಕಾರ, ಮಂತ್ರಿಯವರು ಅದನ್ನು ಬಜೆಟಿನಲ್ಲಿ ಸೇರಿಸಿ ಮಂಜೂರು ಮಾಡಿಕೊಟ್ಟರು. ಮಂಜೂರಾಗಿ ಮೂರು ವರ್ಷವಾಯಿತು. ಅದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಕೂಡ ದೊರಕಿದೆ. ಆದರೆ ಅದನ್ನು ಇನ್ನೂ ಪ್ರಾರಂಭ ಮಾಡಿಲ್ಲ. ಬಹುಶಃ ರಾಜಕೀಯ ಕಾರಣಗಳಿಂದಾಗಿ, ಇವರ ಸ್ನೇಹಿತರು ಅದನ್ನು ಮಾಡಿಕೊಡಕೂಡದು ಎಂದು ಹೇಳಿದ್ದಾರೋ ಏನೋ. ಅಂತೂ ಆ ಕೆಲಸಗಳನ್ನು ಮಾಡಿಸಿಲ್ಲ. ಕಳೆದ ಎರಡು ಮೂರು ವರ್ಷಗಳಿಂದ ನನ್ನ ಕ್ಷೇತ್ರದ ಕೆಲಸಗಳಿಗೆ ಮನವಿ ಕೊಟ್ಟರೂ ಸಹ ಈ ಪರಿಶೀಲನೆ ಮಾಡತಕ್ಕ ಡಿವಿಜನ್‌ಗೆ ಬಹಳ ಕೆಲಸಗಳನ್ನು ಮಾಡುವುದಕ್ಕೆ ಅವಕಾಶ ಇಲ್ಲದ ರೀತಿಯಲ್ಲಿ ಒಂದು ತಿಳಿವಳಿಕೆ ಇಲ್ಲಿಂದ ಹೋಗಿದೆ ಎಂಬುದನ್ನು ತಿಳಿದು ಬಹಳ ವಿಷಾದಪಡುತ್ತೇನೆ. ಈ ರೀತಿ ವರ್ಷೇ ವರ್ಷೇ ಅಭಾವಕ್ಕೆ ತುತ್ತಾಗಿ ಕಂಗಾಲಾಗಿರುವ ಪ್ರದೇಶಗಳಲ್ಲಿ ರಾಜಕೀಯ ಮಾಡಿದರೆ, ಮತ್ತು ಅಲ್ಲಿ ಸಣ್ಣ ಪುಟ್ಟ ನಿರಾವರಿ ಕೆಲಸಕಾರ್ಯಗಳನ್ನು ಮಾಡಬಾರದೆಂಬ ತೀರ್ಮಾನಕ್ಕೆ ಬಂದರೆ, ಬಹುಶಃ ಅದರಿಂದ ನೀವು ಇನ್ನೂ ಹೆಚ್ಚಿನ ತೊಂದರೆಯನ್ನು ಅನುಭವಿಸುತ್ತೀರೆಂದು ಹೇಳಬಯಸುತ್ತೇನೆ. ಸುಮಾರು 1963–64 ರಲ್ಲಿ ಈ ಅಭಾವ ಉಂಟಾಗಿರತಕ್ಕ ಕಾಲದಲ್ಲಿ, ನಮ್ಮ ತಾಲ್ಲೂಕಿನಲ್ಲಿ ಅದು ಕೂಡ ಶ್ರೀಮಾನ್ ಬಿ. ರಾಚಯ್ಯನವರ ಕ್ಷೇತ್ರದ ಯಡಿಯೂರುಹಳ್ಳಕ್ಕೆ 5 ಲಕ್ಷ ರೂಪಾಯಿ ಮಂಜೂರಾಗಿದೆ ಮತ್ತು ಬೆಲ್ಲದಸಾಣಿಗೆ 10 ಲಕ್ಷ ಮಂಜೂರಾಗಿದೆ. ಈ ಕೆಲಸದ 30–40 ಪರ್‌ಸೆಂಟ್ ಕೆಲಸ ಕೂಡ ನಡೆದುಹೋಗಿದೆ, ಮತ್ತು ಇವರಿಗೆ ಬೇಕಾಗಿದ್ದಂತಹ ಕಂಟ್ರಾಕ್ಟರಿಗೆ ಏನು ಹಣ ಕೊಡಬೇಕೋ, ಅದನ್ನು ಕೊಟ್ಟು, ಪುನಃ ಆ ಅಂದಾಜನ್ನು ಪುನರ್‌ವಿಮರ್ಶೆ ಮಾಡಬೇಕೆನ್ನುವ ನೆಪದಿಂದ, ಒಂದನ್ನು 10 ಲಕ್ಷದಿಂದ 22 ಲಕ್ಷಕ್ಕೆ ಮತ್ತು ಇನ್ನೊಂದನ್ನು 5 ಲಕ್ಷದಿಂದ ಸುಮಾರು 12 ಲಕ್ಷಕ್ಕೆ ಪುನರ್‌ವಿಮರ್ಶೆ ಮಾಡಿದ್ದಾರೆಂದು ತಿಳಿದು ಬಂದಿದೆ. ಅದನ್ನು ಮಂಜೂರು ಮಾಡಿ ಹೊಸದಾಗಿ ಟೆಂಡರ್ ಕರೆಯಬೇಕೆಂದು ಈಗ ತಡೆಹಿಡಿದಿದ್ದಾರೆಂದು ಅರಿತುಕೊಂಡಿದ್ದೇನೆ. ಈ ರೀತಿ ಅಭಾವ ಪೀಡಿತ ಪ್ರದೇಶಗಳಿಗೆ ತೊಂದರೆ ಕೊಡುವುದು ಸರಿಯಲ್ಲ. ರಸ್ತೆಗಳಿಗೆ, ಗೋಕಟ್ಟೆಗಳಿಗೆ ಈಗ ಕೊಟ್ಟಿರತಕ್ಕ ಕೆಲಸದ ಹಣ ಏನಿದೆ, ಅದನ್ನು ತಾಲ್ಲೂಕು ಬೋರ್ಡು ಸದಸ್ಯರು

(ಶ್ರೀ ಎಸ್. ಪುಟ್ಟಸ್ವಾಮಿ)

ತಮ್ಮಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಇದನ್ನು ಮಾನ್ಯ ಮಂತ್ರಿಯವರು ಸ್ವಲ್ಪ ಖುದ್ದಾಗಿ ಪರಿಶೀಲನೆ ನಡೆಸಿದರೆ ಒಳ್ಳೆಯದೆಂದು ಕಾಣುತ್ತದೆ.

6-00 P.M.

ಕೊನೆಯದಾಗಿ ನ್ಯಾಷನಲ್ ರೂರಲ್ ವಾಟರ್‌ಸಪ್ಲೈ ಸ್ಕೀಮಿನಲ್ಲಿ ಕುಡಿಯುವ ನೀರಿನ ಅಭಾವ ಇರತಕ್ಕ ಹಳ್ಳಿಗಳಿಗೆ ನೀರನ್ನು ಒದಗಿಸಬೇಕೆಂದು ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಸೌಕರ್ಯವನ್ನು ಕಲ್ಪಿಸಿಕೊಟ್ಟು ನೀರನ್ನು ಒದಗಿಸುತ್ತಿದ್ದಾರೆ. ಈ ರೀತಿಯಾಗಿ ಅನೇಕ ಹಳ್ಳಿಗಳಿಗೆ ಸರ್ಕಾರದವರು ಕುಡಿಯುವ ನೀರನ್ನು ಒದಗಿಸುತ್ತಾ ಇರುವುದನ್ನು ನಾನು ಪತ್ರಿಕೆಗಳಲ್ಲಿ ಓದಿ ನೋಡುತ್ತಿದ್ದೇನೆ. ಇದಕ್ಕಾಗಿ ನಾನು ನನ್ನ ಸಂತೋಷವನ್ನು ಕೂಡ ವ್ಯಕ್ತಪಡಿಸುತ್ತೇನೆ. ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಮಂಜೂರು ಮಾಡುವಾಗ ಸಂಬಂಧಪಟ್ಟ ಹಳ್ಳಿಗಳವರು ತಮ್ಮ ಭಾಗದ ಕಾಂಟ್ರಿಬ್ಯೂಷನ್ 10 ಭಾಗವನ್ನು ಕೊಡದಿದ್ದರೂ ಕೂಡ ಡಿವಿಜನಲ್ ಕಮಿಷನರು ತಮ್ಮ ಡಿಸ್‌ಕ್ರಿಷನರಿ ಪವರನ್ನು ಉಪಯೋಗಿಸಿ ಬಾವಿಗಳನ್ನು ಮಂಜೂರು ಮಾಡತಕ್ಕ ಒಂದು ಅಧಿಕಾರ ಅವರಿಗೆ ಇದೆ. ಇಂಥಾ ಸಂದರ್ಭವನ್ನು ಮಂತ್ರಿಗಳು ಉಪಯೋಗಿಸಿಕೊಂಡು ತಮಗೆ ಬೇಕಾದಂತಹ ಎಂ. ಎಲ್. ಎ. ಮತ್ತು ಎಂ. ಎಲ್. ಸಿ. ಗಳಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಸಾಕಷ್ಟು ನೀರಿನ ಸೌಕರ್ಯ, ಸಾಕಷ್ಟು ಕುಡಿಯುವ ನೀರಿನ ಬಾವಿಗಳು ಇದ್ದರೂ ಕೂಡ ಅಂಥಾ ಹಳ್ಳಿಗಳಿಗೆ ಡಿವಿಜನಲ್ ಕಮಿಷನರಿಂದ ರೂರಲ್ ವಾಟರ್ ಸಪ್ಲೈ ಯೋಜನೆಯಲ್ಲಿ ಬಾವಿಗಳನ್ನು ಮಂಜೂರು ಮಾಡಿಸಿ ಹತ್ತಾರು ಹಳ್ಳಿಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿಕೊಟ್ಟಿದ್ದಾರೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಅನೇಕ ಹಳ್ಳಿಗಳಲ್ಲಿ ಜನಗಳು ಕುಡಿಯುವುದಕ್ಕೆ ನೀರಿಲ್ಲದೆ ತುಂಬಾ ತೊಂದರೆ ಪಡುತ್ತಿದ್ದಾರೆ. ಊರಿನಿಂದ ಸುಮಾರು ಅರ್ಧ ಮೈಲಿ ಮುಕ್ಕಾಲು ಮೈಲಿಯಿಂದ ಕುಡಿಯುವ ನೀರನ್ನು ತಂದು ಕುಡಿಯುತ್ತಿದ್ದಾರೆ. ಅಂಥಾ ಗ್ರಾಮಗಳಿಗೆ ಜನಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ಯಾವ ಪ್ರಯತ್ನವನ್ನೂ ಮಾಡಿಲ್ಲ. ಆ ತಾಲ್ಲೂಕುಗಳಲ್ಲಿ ಅಲ್ಲಲ್ಲೇ ಗೋ-ಕಟ್ಟೆಗಳನ್ನು ಕಟ್ಟುವುದಕ್ಕೆ ಮಂಜೂರು ಮಾಡಿಸಿಕೊಡಿ ಎಂದು ಹೇಳಿ ಕಾಗದಗಳನ್ನು ಬರೆದರೂ ಕೂಡ ಒಂದು ಹಳ್ಳಿಗಾದರೂ ಗೋಕಟ್ಟೆಯನ್ನು ಕಟ್ಟುವುದಕ್ಕೆ ಮಂಜೂರು ಮಾಡಿಸಿಕೊಟ್ಟಿಲ್ಲ. ಆ ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನೂ ಒದಗಿಸಿಕೊಟ್ಟಿಲ್ಲ. ಅದಕ್ಕಾಗಿ ಈಗ ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ರವಿನ್ಯೂ ಸಚಿವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅವರು ಮತ್ತು ಮಾನ್ಯ ಡೆವಲಪ್‌ಮೆಂಟ್ ಮಂತ್ರಿಗಳೂ ಸಮಾಲೋಚನೆ ಮಾಡಿ ನಿಜವಾಗಿ ಕುಡಿಯುವ ನೀರಿನ ಅಗತ್ಯ ಇರುವ ಹಳ್ಳಿಗಳಿಗೆ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಯೋಜನೆಯಲ್ಲಿ ಬಾವಿಗಳನ್ನು ಮಂಜೂರು ಮಾಡಿಸಿಕೊಟ್ಟು ಅವರಿಗೆ ನೀರಿನ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**Mr. DEPUTY SPEAKER.**—The House will now adjourn to meet at 1-00 P.M. tomorrow, the 13th October 1970.

*The House adjourned at Three Minutes past Six of the Clock to meet again at One of the Clock on Tuesday, the 13th October 1970.*

WD 15502—GPB—550—28-1-71.